ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 30 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 44 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ

ಶನಿವಾರ 30 ಮೇ 2026

ಮೈಸೂರಲ್ಲಿ ತಮಿಳುನಾಡು ಬಾಲಕಿ ಜೊತೆ ಮದುವೆ

ಬಾಲ್ಯವಿವಾಹ: 7 ಮಂದಿ ವಿರುದ್ಧ ಎಫ್ಐಆರ್

ಮೈಸೂರು, ಮೇ29(ಜಿಎ)–ತಮಿಳುನಾಡಿನ ಬಾಲಕಿ ಜೊತೆ ಬಾಲ್ಯ ವಿವಾಹ ಮಾಡಿಸಿದ 7 ಮಂದಿ ವಿರುದ್ಧ ವಿವಿಪುರಂ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.



ಮೈಸೂರಿನ ಮಂಜುನಾಥಪುರದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ಮೇ 13ರಂದು ಮಂಜುನಾಥಪುರದ 30 ವರ್ಷದ ಯುವಕನೊಂದಿಗೆ ತಮಿಳುನಾಡಿನ ಕೃಷ್ಣಗಿರಿಯ ಪೆರಿಯಾ ಪಾರಾಯರ್ ಗ್ರಾಮದ 16 ವರ್ಷದ ಬಾಲಕಿಯೊಂದಿಗೆ ಬಾಲ್ಯ ವಿವಾಹ ಮಾಡಿಸಿದ್ದಾರೆ.

ವಿಷಯ ತಿಳಿದ ಮೈಸೂರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮಾಹಿತಿ ಮೇರೆಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ ಸಿ.ಚಂದ್ರಕುಮಾರ್ ಅವರು ಬಾಲಕಿಯೊಂದಿಗೆ ಆಪ್ತಸಮಾಲೋಚನೆ ನಡೆಸಿ, ವಿವಾಹ ನಡೆದಿರುವ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದಾರೆ.

ಮೇ 27ರಂದು ವಿವಿಪುರಂ ಪೊಲೀಸ್ ಠಾಣೆಗೆ ಭೇಟಿ ನೀಡಿ, ಬಾಲ್ಯವಿವಾಹವಾದ ಯುವಕ ಹಾಗೂ ಮದುವೆ ಮಾಡಿಸಿದ ಎರಡು ಕುಟುಂಬಸ್ಥರು ಸೇರಿದಂತೆ 7 ಮಂದಿ ವಿರುದ್ಧ ದೂರು ನೀಡಿ, ಬಾಲ್ಯವಿವಾಹ ನಿಷೇಧ ಕಾಯ್ದೆ–2006ರನ್ವಯ ಹಾಗೂ ಪ್ರಕರಣ ಸ್ವರೂಪಕ್ಕೆ ಸಂಬಂಧಿಸಿದಂತೆ ಅಳವಡಿಸಬಹುದಾದ ಇತರೇ ಪ್ರಕರಣಗಳನ್ನು ಸೇರಿಸಿ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿದ್ದಾರೆ.

ಶಾಲಾ ಆವರಣದಲ್ಲಿ ಗಂಧದ ಮರ ಕತ್ತರಿ ಯತ್ನ

ಸೆಕ್ಯೂರಿಟಿ ಕಂಡು ಓಡಿ ಹೋದ ಚೋರರು

ಮೈಸೂರು, ಮೇ29(ಜಿಎ)–ಶಾಲೆ ಆವರಣದಲ್ಲಿದ್ದ ಗಂಧದ ಮರ ಕಳ್ಳತನಕ್ಕೆ ಯತ್ನಿಸಿರುವ ಘಟನೆ ವಿವಿಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಲಯನ್ಸ್ ಸೇವಾ ನಿಕೇತನ ಶಾಲೆ ಆವರಣದಲ್ಲಿ ಮೇ 28ರಂದು ಮಧ್ಯರಾತ್ರಿ ಸುಮಾರು 1.30ರ ವೇಳೆಯಲ್ಲಿ ಮರ ಕಡಿಯುವ ಶಬ್ಧ ಕೇಳಿ ಬಂದಿದ್ದು, ತಕ್ಷಣ ಸೆಕ್ಯೂರಿಟಿ ಹೋಗಿ ನೋಡಿದಾಗ ಖದೀಮರು ಓಡಿ ಹೋಗಿದ್ದಾರೆ. ತಕ್ಷಣ ಸೆಕ್ಯೂರಿಟಿ ಶಾಲೆಯ ಆಡಳಿತ ಮಂಡಳಿ ಗಮನಕ್ಕೆ ತಂದಿದ್ದಾರೆ. ನಂತರ ಮಂಡಳಿಯವರು ಬಂದು ನೋಡಿದಾಗ ಶಾಲೆ ಕಾಂಪೌಂಡ್ ಒಳಗೆ ತಾನಾಗಿಯೇ ಬೆಳೆದಿದ್ದ ಗಂಧದ ಮರ ಕತ್ತರಿಸಿರುವುದು ದೃಢವಾಗಿದೆ. ಮೊತ್ತೊಂದೆಡೆ ಮರದ ತುಂಡುಗಳು ಬಿದ್ದಿದ್ದನ್ನು ಗಮನಿಸಿ ತಕ್ಷಣ ವಿವಿ ಪುರಂನಲ್ಲಿ ದೂರು ಸಲ್ಲಿಸಿದ್ದಾರೆ.

ಯಲ್ಲಮ್ಮ ಕಾಲೋನಿ ಜನರ ಬವಣೆ ಬದುಕು

ಅಗೆಯುವುದು-ಮುಚ್ಚುವ ಕಾಮಗಾರಿ ಔಚಿತ್ಯ ಪ್ರಶ್ನಿಸಿದ ನಿವಾಸಿಗಳು



ನಗರಪಾಲಿಕೆ ವಲಯ ಕಚೇರಿ–7ರ ಇಂಜಿನಿಯರ್‌ಗಳು ಶುಕ್ರವಾರ ಯಲ್ಲಮ್ಮ ಕಾಲೋನಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸುತ್ತಿರುವುದು.

ಮೈಸೂರು, ಮೇ 29(ಎಂಕೆ)– ಕಡೆಗೂ ವಿಸಿಟ್ ಆಗಿದೆ... ಕೆಲಸ ಯಾವಾಗ ಶುರು ಮಾಡ್ತಾರೋ... ಕಸ–ಕೊಳಚೆಯಿಂದ ಮುಕ್ತಿ ಯಾವಾಗ ಕೊಡ್ತಾರೋ ಗೊತ್ತಿಲ್ಲ...!


ಮೈಸೂರಿನ ವಾರ್ಡ್ ನಂ.8ರ ವ್ಯಾಪ್ತಿಯ ಬನ್ನಿಮಂಟಪ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಯಲ್ಲಮ್ಮ ಕಾಲೋನಿಯಲ್ಲಿ ಕಂಡ ಕಂಡಲ್ಲಿ ಕಸದ ರಾಶಿ, ಮನೆ ಮುಂದೆ ಶೇಖರಣೆಯಾಗುವ ಕೊಳಚೆ ನೀರು ಸೇರಿದಂತೆ ಇಲ್ಲಿನ ನಿವಾಸಿಗಳು ಅನುಭವಿಸುತ್ತಿರುವ ಯಾತನೆ ಕುರಿತು 'ಮೈಸೂರು ಮಿತ್ರ'ನಲ್ಲಿ ಮೇ 25 ರಂದು 'ಮೈಸೂರಿನ ಯಲ್ಲಮ್ಮ ಕಾಲೋನಿಯಲ್ಲಿ ನರಕ ದರ್ಶನ' ಹಾಗೂ ಮೇ 29 ರಂದು 'ಮೈಸೂರು ಪಾಲಿಕೆ ಬೇಜವಾಬ್ದಾರಿ ಕಾರ್ಯ ನಿರ್ವಹಣೆಗೆ ತಾಜಾ ಉದಾಹರಣೆ!' ಶೀರ್ಷಿಕೆಯಡಿ ವರದಿ ಪ್ರಕಟಗೊಂಡ ಹಿನ್ನಲೆಯಲ್ಲಿ ಶುಕ್ರವಾರ ಕಾಲೋನಿಗೆ ಭೇಟಿ ನೀಡಿದ ನಗರ ಪಾಲಿಕೆ ವಲಯ ಕಚೇರಿ–7ರ ಇಂಜಿನಿಯರ್‌ಗಳು ಪರಿಶೀಲನೆ ನಡೆಸಿದ್ದಾರೆ.

ನರ್ಮ್ ಮನೆಗಳ ಮುಂದೆ ಶೇಖರಣೆಯಾಗಿದ್ದ ಕೊಳಚೆ ನೀರನ್ನು ಹೊರಹಾಕಲು ಜೆಸಿಬಿ ಮೂಲಕ ರಸ್ತೆಯ ಮಧ್ಯದಲ್ಲಿ ಸಣ್ಣದಾಗಿ ಮೋರಿ ತೆರೆದಿರುವುದು ಬಿಟ್ಟರೆ ಮತ್ತ್ಯಾವ ಸ್ವಚ್ಛತಾ ಕಾರ್ಯವೂ ನಡೆದಿಲ್ಲ. ಕಾಲೋನಿಯ ಮನೆಗಳ ಬಳಿ ಹಾದುಹೋಗಿರುವ ಮೋರಿ ಕಸದಿಂದ ಭರ್ತಿಯಾಗಿದ್ದು, ಡಕ್ ಹೊಡೆದು ಕಸ ಹೊರ ತೆಗೆಯಬೇಕು. ಹಾಗೆಯೇ ಬಹುಮಹಡಿ ಕಟ್ಟಡ ಮತ್ತು ಗುಡಿಸಲುಗಳ ಸುತ್ತಲೂ ಹಾಗೂ ಕಾಲೋನಿಗೆ ಸಾಗುವ ದಾರಿಯುದ್ದಕ್ಕೂ ಬಿದ್ದಿರುವ ಕಸ ವಿಲೇವಾರಿಯಾಗಿಲ್ಲ.

ವಾರಕ್ಕೂ ಮೂರು ದಿನವಾದರೂ ಪಾಲಿಕೆಯಿಂದ ಅಥವಾ ಕೊಳಗೇರಿ ಮಂಡಳಿಯಿಂದ ಕಸ ವಿಲೇವಾರಿ ಆಗಬೇಕು. ಆದರೆ, ಯಾವತ್ತೋ ಒಂದು ದಿನ ಅದೂ ಅಂಗಲಾಚಿ ಬೇಡಿದರೆ ಬಂದು ವಿಲೇವಾರಿ ಮಾಡುತ್ತಾರೆ. ಗುಡಿಸಲು ಮುಂದೆ ಮಳೆ ನೀರು ಹರಿಯಲು ಮೋರಿ ಇಲ್ಲ. ಎಲ್ಲೆಂದರಲ್ಲಿ ನೀರು ನಿಲ್ಲುತ್ತದೆ. ಅತೀ ಮುಖ್ಯವಾಗಿ ಯುಜಿಡಿ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದೆ ಎಂದು ಕಾಲೋನಿಯಲ್ಲಿ ಸಮಸ್ಯೆಗಳನ್ನು ನಿವಾಸಿಗಳು ತೆರೆದಿಟ್ಟಿದ್ದಾರೆ.

ಮಾಜಿ ಸಚಿವ, ಪಾವಗಡದ ಕಾಂಗ್ರೆಸ್ ಹಿರಿಯ ನಾಯಕ ವೆಂಕಟರಮಣಪ್ಪ ನಿಧನ

ಬೆಂಗಳೂರು, ಮೇ 29– ಪಾವಗಡ ಕ್ಷೇತ್ರದ ಮಾಜಿ ಶಾಸಕ ಹಾಗೂ ಮಾಜಿ ಸಚಿವ ವೆಂಕಟರಮಣಪ್ಪ (80) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಮುಂಜಾನೆ 5 ಗಂಟೆ ಸುಮಾರಿಗೆ ನಿಧನರಾಗಿದ್ದಾರೆ. ಪಾವಗಡ ಕ್ಷೇತ್ರದ ಹಾಲಿ ಶಾಸಕ ಎಚ್. ವಿ. ವೆಂಕಟೇಶ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅವರು ಅಗಲಿದ್ದಾರೆ.



2008ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಪಾವಗಡ ಕ್ಷೇತ್ರದಿಂದ ಗೆಲುವು ಸಾಧಿಸಿದ್ದ ಅವರು, ನಂತರ ಬಿ. ಎಸ್. ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರದಲ್ಲಿ ರೇಷ್ಮೆ ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಅಲ್ಲದೆ 2018ರ ಕಾಂಗ್ರೆಸ್ ಹಾಗೂ ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಪಾವಗಡದ ಪಟ್ಟಣದ ಗುರುಭವನದಲ್ಲಿ ಇಂದು ಮಧ್ಯಾಹ್ನ ಮೃತರ ಪಾರ್ಥೀವ ಶರೀರ ಅಂತಿಮ ದರ್ಶನಕ್ಕೆ ಇರಿಸಲಾಗುವುದು ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ನಿಧನ



ಪಟ್ಟಚೇರವಂಡ ಗೌರು ಚೆಂಗಪ್ಪ


ಮೈಸೂರು, ಮೇ 29– ಮೈಸೂರು–ಊಟಿ ರಸ್ತೆಯ ಜೆಎಸ್‌ಎಸ್ ಆಸ್ಪತ್ರೆಯ ಪಕ್ಕದಲ್ಲಿರುವ ಬ್ರಿಗೇಡ್ ಮೌಂಟೇನ್ ವ್ಯೂ ಅಪಾರ್ಟ್‌ಮೆಂಟ್‌ನ ನಿವಾಸಿ, ಮೂಲತಃ ಮಡಿಕೇರಿ ತಾಲೂಕಿನ ಚೇಳವಾರ ಗ್ರಾಮದವರಾದ ಪಟ್ಟಚೇರವಂಡ ಗೌರು ಚೆಂಗಪ್ಪ (ತಮ್ಮನೆ ಐಚೇಟಿರ–89), ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಸಂಜೆ ನಿಧನರಾದರು.

ಮೃತರು ಮಕ್ಕಳಾದ ಲೆಫ್ಟಿನೆಂಟ್ ಜನರಲ್ ಪಟ್ಟಚೇರವಂಡ ತಿಮ್ಮಯ್ಯ, ಸಣುವಂಡ ಆಶಾ ಮುತ್ತಣ್ಣ ಮತ್ತು ಕಲಮಾಡ ರೇಖಾ ಕರಿಯಪ್ಪ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಆಸ್ಪತ್ರೆಯಲ್ಲಿ ರಾತ್ರಿ ವೇಳೆ ರೋಗಿಗಳಿಗೆ ನರಕ ದರ್ಶನ!

ಚಿಕಿತ್ಸೆ ಪಡೆಯಲು ಹೆಣಗಾಡಬೇಕಾದ ಪರಿಸ್ಥಿತಿ





ಕೆ.ಆರ್.ಆಸ್ಪತ್ರೆಯಲ್ಲಿ ರಾತ್ರಿ ವೇಳೆ ರಕ್ತದ ಸ್ಯಾಂಪಲ್ ಹಿಡಿದು ಕ್ಯೂನಲ್ಲಿ ಜನರು ನಿಂತಿರುವುದು.

ಮೈಸೂರು, ಮೇ 29(ಎಂಕೆ)– ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಒಂದಲ್ಲ ಒಂದು ಅವಾಂತರಗಳು ಸೃಷ್ಟಿಯಾಗುತ್ತಲೇ ಇದ್ದು, ಮೊನ್ನೆಯಷ್ಟೇ ತುರ್ತು ಚಿಕಿತ್ಸಾ ವಾರ್ಡ್‌ನಲ್ಲಾದ ರೋಗಿಗಳ ದಟ್ಟಣೆ ಬೆನ್ನಲ್ಲೇ ರಕ್ತ ಪರೀಕ್ಷೆಗೆ ಸ್ಯಾಂಪಲ್ ನೀಡಲು ಗಂಟೆ ಗಟ್ಟಲೇ ಕ್ಯೂನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ರಕ್ತ ಮತ್ತು ಮೂತ್ರ ಪರೀಕ್ಷೆಗೆ ಸ್ಯಾಂಪಲ್ ಪಡೆಯುವ ವಿಭಾಗದಲ್ಲಿ ಹಗಲೊತ್ತಲ್ಲೇ ನಿಧಾನವೆಂದು ಪರದಾಡುವ ರೋಗಿಗಳ ಸಂಬಂಧಿಕರು, ರಾತ್ರಿ ವೇಳೆ ಸಾಕಪ್ಪಾ ಈ ಆಸ್ಪತ್ರೆಯ ಸಹವಾಸ ಎನ್ನುವ ದುಸ್ಥಿತಿ ಉಂಟಾಗಿದೆ.

ರಾತ್ರಿ 9 ಗಂಟೆಯ ನಂತರ ತುರ್ತು ಚಿಕಿತ್ಸೆಗಾಗಿ ನೀಡುವ ಹೊರರೋಗಿ ಚೀಟಿ, ಬಿಲ್ಲಿಂಗ್ ಹಾಗೂ ಮೆಡಿಕೊ–ಲೀಗಲ್ ಕೇಸ್ (ಎಂಎಲ್‌ಸಿ)ಗಳ ನಿರ್ವಹಣೆಯನ್ನು ಒಂದೇ ಕೌಂಟರ್‌ನಲ್ಲಿ ನಿರ್ವಹಿಸಲಿದ್ದು, ರಕ್ತ ಪರೀಕ್ಷೆ ಮಾಡಿಸಲು ಟ್ಯೂಬ್‌ನಲ್ಲಿ ರಕ್ತದ ಸ್ಯಾಂಪಲ್ ಹಿಡಿದು ಗಂಟೆ ಗಟ್ಟಲೆ ನಿಲ್ಲಬೇಕು.

ಪರೀಕ್ಷೆಗಾಗಿ ರಕ್ತದ ಸ್ಯಾಂಪಲ್ ಪಡೆಯುವ ಸ್ಥಳದಲ್ಲೂ ರಾತ್ರಿ ವೇಳೆ ಒಬ್ಬರೇ ಕಾರ್ಯ ನಿರ್ವಹಿಸಲಿದ್ದು, 40 ರಿಂದ 50 ಮಂದಿ ಪ್ರತಿ ದಿನ ರಾತ್ರಿ ಸರತಿ ಸಾಲಿನಲ್ಲಿ ನಿಂತು, ತಾವೇ ಚಿಕಿತ್ಸೆ ಪಡೆದುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ ತುರ್ತು ಚಿಕಿತ್ಸಾ ವಾರ್ಡ್‌ನಲ್ಲಿ ಬೇಗ ರಕ್ತ ಪರೀಕ್ಷೆ ಮಾಡಿಸಿ, ರಿಪೋರ್ಟ್ ತನ್ನಿ ಎಂದೂ ಬಿಲ್ ಪಾವತಿ ಮಾಡಿ, ರಶೀದಿ ಪಡೆದು ಲ್ಯಾಬ್‌ಗೆ ಸ್ಯಾಂಪಲ್ ಕಳುಹಿಸಲು 2 ರಿಂದ 3 ಗಂಟೆಗಳ ಕಾಲ ಕಾಯಲೇಬೇಕು. ಇನ್ನೂ ರಿಪೋರ್ಟ್ ಬರುವುದು ನಮ್ಮ ಕೈಯಲ್ಲಿಲ್ಲಾ ಮೆಷಿನ್‌ಗಳು ಎಷ್ಟು ಟೈಂ ತೆಗೆದುಕೊಳ್ಳುತ್ತವೋ ಅಲ್ಲಿಯವರೆಗೂ ತೂಕಡಿಸುತ್ತಾ, ಚಿಕಿತ್ಸೆ ಪಡೆಯುವವರ ಪರಿಸ್ಥಿತಿ ಏನಾಗುತ್ತೋ ಎಂಬ ಭಯದಲ್ಲೇ ಇರಬೇಕಾದ ಅನಿವಾರ್ಯತೆ ಪ್ರತಿನಿತ್ಯ ಸೃಷ್ಟಿಯಾಗುತ್ತಿದೆ.

ರಕ್ತದ ಸ್ಯಾಂಪಲ್ ಹೆಪ್ಪುಗಟ್ಟಲಿದೆ: ರಕ್ತ ಪರೀಕ್ಷೆಗೆ ಟ್ಯೂಬ್‌ನಲ್ಲಿ ಸ್ಯಾಂಪಲ್ ಪಡೆದ ಕೂಡಲೇ ಬಿಲ್ ಮಾಡಿಸಿ, ಪಾಕೆಟ್ ನೀಡಬೇಕು. ಇಲ್ಲದಿದ್ದರೆ ಚಿಕಿತ್ಸೆಯೂ ತಡವಾಗಲಿದೆ. ಆದರೆ, ಕೆ.ಆರ್.ಆಸ್ಪತ್ರೆಯಲ್ಲಿ ಎಲ್ಲವೂ ತಡವೇ. ಬಿಲ್ ಕಟ್ಟೋಕು ಕಾಯಬೇಕು. ರಕ್ತ ಪರೀಕ್ಷೆಗೆ ಸ್ಯಾಂಪಲ್ ನೀಡೋದಕ್ಕೂ ಕಾಯಬೇಕು. ಅಷ್ಟರಲ್ಲಾಗಲೇ ಟ್ಯೂಬ್‌ನಲ್ಲಿರುವ ರಕ್ತ ಹೆಪ್ಪುಗಟ್ಟಿರುತ್ತದೆ. ಕೊನೆಗೆ ಟ್ಯೂಬ್ ಅನ್ನು ಅಲ್ಲಾಡಿಸಿ, ಪರೀಕ್ಷೆ ಮಾಡಿದರೆ ನಿಖರ ಮಾಹಿತಿ ದೊರೆಯದೇ ಮತ್ತೆ ರಕ್ತದ ಸ್ಯಾಂಪಲ್ ತೆಗೆದುಕೊಂಡು ಬನ್ನಿ ಎನ್ನುತ್ತಾರೆ ಎಂದು ರೋಗಿಗಳ ಸಂಬಂಧಿಕರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಒಂದೇ ಕೌಂಟರ್: ಹಗಲಲ್ಲಿ ನಾಲ್ಕೈದು ಬಿಲ್ಲಿಂಗ್ ಕೌಂಟರ್, ಒಳರೋಗಿಗಳ ಸಲಹೆಗಾಗಿ ಎರಡ್ಮೂರು ಕೌಂಟರ್, ಹೊರರೋಗಿ ಚೀಟಿ ನೀಡಲು ಐದಾರು ಕೌಂಟರ್‌ಗಳು ಇರಲಿದ್ದು, ರಾತ್ರಿ ವೇಳೆ ಇದೆಲ್ಲದಕ್ಕೂ ಒಂದೇ ಕೌಂಟರ್ ಯಾಕೆ ಎಂದು ಪ್ರಶ್ನಿಸಿದ್ದಾರೆ. ಅಪಘಾತ, ಹಲ್ಲೆ, ವಿಷ ಸೇವನೆ, ಆತ್ಮಹತ್ಯೆ ಕೇಸ್‌ಗಳು ರಾತ್ರಿ ವೇಳೆ ಹೆಚ್ಚಾಗಿ ಬರಲಿದ್ದು, ಹಗಲಲ್ಲಿ ನೀಡುವ ಅರ್ಧದಷ್ಟು ಸೇವೆಯೂ ರಾತ್ರಿ ವೇಳೆ ದೊರೆಯುತ್ತಿಲ್ಲ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ನರಕಯಾತನೆ ತಪ್ಪಿಸಿ: ರಾತ್ರಿ 10 ರಿಂದ ಬೆಳಗ್ಗೆ 6 ರವರೆಗೆ ಕನಿಷ್ಠ 3 ಕೌಂಟರ್ ತೆರೆಯಬೇಕು. ಬಿಲ್ಲಿಂಗ್, ಎಂಎಲ್‌ಸಿ ಮತ್ತು ಲ್ಯಾಬ್ ಸ್ಯಾಂಪಲ್ ಸಂಗ್ರಹಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಸರದಿ ಸಾಲಿನಲ್ಲಿ ನಿಲ್ಲುವವರಿಗೆ ಕುಳಿತುಕೊಳ್ಳಲು ಆಸನ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ರಕ್ತ, ಮೂತ್ರ ಸೇರಿದಂತೆ ತುರ್ತು ಪರೀಕ್ಷೆಯ ಸ್ಯಾಂಪಲ್‌ಗಳನ್ನು ನೇರವಾಗಿ ಲ್ಯಾಬ್‌ಗೆ ಕಳುಹಿಸಲು ದಿನದ ಇಪ್ಪತ್ನಾಲ್ಕು ಗಂಟೆಯೂ ಕೌಂಟರ್ ತೆರೆದಿರಬೇಕು. ರೋಗಿಗಳು ಅನುಭವಿಸುತ್ತಿರುವ ನರಕಯಾತನೆ ತಪ್ಪಿಸಿ ಎಂದು ಒತ್ತಾಯಿಸಿದ್ದಾರೆ.

ಜೈನ ಸಮುದಾಯದವರ ಮೇಲಿನ ದೌರ್ಜನ್ಯ ಖಂಡಿಸಿ ಮೌನ ಪ್ರತಿಭಟನೆ

ಮೈಸೂರು, ಮೇ 29(ಎಂಟಿವೈ)– ಜೈನ ಸಮುದಾಯದವರ ಮೇಲಿನ ದೌರ್ಜನ್ಯ, ಹತ್ಯೆ ಖಂಡಿಸಿ ಸಮಸ್ತ ಜೈನ ಸಮುದಾಯದ ವಿವಿಧ ಸಂಘಟನೆಗಳ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಶುಕ್ರವಾರ ಬೆಳಗ್ಗೆ ಸಮಸ್ತ ಜೈನ ಸಮಾಜಕ್ಕೆ ಸೇರಿದವರು ಪ್ರತಭಟನೆ ನಡೆಸಿ, ಉತ್ತರ ಭಾರತದಲ್ಲಿ ಜೈನ ಸಮುದಾಯವರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗಟ್ಟುವಂತೆ ಆಗ್ರಹಿಸಿದರು.

ವಿಶ್ವದಲ್ಲಿ ಮಾನವ ಕುಲಕ್ಕೆ ಅಹಿಂಸಾ ಧರ್ಮ ಸಾರಿದ ಅತೀ ಪುರಾತನ ಧರ್ಮ ಜೈನ ಧರ್ಮ. ಯಾರನ್ನೂ ಹಿಂಸಿಸದೆ ತನ್ನ ಧರ್ಮ ಪಾಲಿಸಿಕೊಂಡು ಬರುತ್ತಿದೆ ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕವಾಗಿ ಸೇವಾ ನಿರತವಾಗಿದೆ ಮಧ್ಯಪ್ರದೇಶದ ರೇವಾ ಪಟ್ಟಣದಲ್ಲಿ ಶೃತಮತಿ ಮಾತಾಜಿ, ಉಪದ್ಮತಿ ಮಾತಾಜಿ ಅವರು ವಿಹಾರ ಮಾಡುತ್ತಿದ್ದಾಗ ಅಪರಿಚಿತ ವಾಹನವೊಂದು ಉದ್ದೇಶಪೂರ್ವಕವಾಗಿ ಅಪಘಾತವೆಸಗಿ ಹತ್ಯೆ ಮಾಡಿದೆ. ಈ ಘಟನೆ ಮಾಸುವ ಮುನ್ನವೇ ಗುಜರಾತಿನ ರಾಜ್‌ಕೋಟ್ ನಗರದಲ್ಲಿ ಇಂತಹುದೇ ಅಪಘಾತದಿಂದ ಮುನಿಗಳಾದ ಆಚಾರ್ಯ ಅಜಿತ್ ಮಹಾರಾಜರು, ಮುನಿ ವಿಜಯ್ ಮಹಾರಾಜರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆಗಳಿಂದಾಗಿ ಜೈನ ಸಮಾಜಕ್ಕೆ ತುಂಬಾ ನೋವಾಗಿದೆ. ಅಹಿಂಸಾ ತತ್ವ ಪಾಲನೆ ಮಾಡುವವರಿಗೆ ಇಂತಹ ಗತಿ ಮುಂದುವರೆದರೆ ಜೈನ ಸಮಾಜ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.



ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಶುಕ್ರವಾರ ಬೆಳಗ್ಗೆ ಜೈನ ಸಮುದಾಯದವರ ಮೇಲಿನ ದೌರ್ಜನ್ಯ, ಹತ್ಯೆ ಖಂಡಿಸಿ ಸಮಸ್ತ ಜೈನ ಸಮುದಾಯದ ವಿವಿಧ ಸಂಘಟನೆಗಳ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನೀಲ್ ಕುಮಾರ್, ಉಪಾಧ್ಯಕ್ಷ ಬಿ.ಭರತ್‌ರಾಜ್, ಕಾರ್ಯದರ್ಶಿ ಪಿ.ಎಸ್.ಲಕ್ಷ್ಮೀಶ್ ಬಾಬು, ಕೋಶಾಧ್ಯಕ್ಷ ಬಿ.ಜ್ವಾಲೇಂದ್ರ ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎ.ಎನ್. ಧರಣೇಂದ್ರ, ಚಂದ್ರಶೇಖರ್ ಆರಿಗ, ಪದ್ಮಶ್ರೀ ಮಹಿಳಾ ಸಮಾಜದ ಅಧ್ಯಕ್ಷೆ ನಂದಿನಿ ಸಂಜಯ್, ಉಪಾಧ್ಯಕ್ಷೆ ಜಯಲಲಿತಾ, ಕಾರ್ಯದರ್ಶಿ ಸುಮಾ ದಯಾಕರ್, ಜೈನ ತೀರ್ಥ ಕ್ಷೇತ್ರ ಕಮಿಟಿ ಅಧ್ಯಕ್ಷ ವಿನೋದ್ ಬಾಕ್ಲಿವಾಲಾ ಇತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.5.2026 ಶನಿವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** ಶ್ರೀ ಶ್ರೀ ಯದುಗಿರಿ ಯತಿರಾಜ ರಾಮಾನುಜ ಜೀಯರ್‌ರವರ ದಿವ್ಯ ಅನುಗ್ರಹದೊಂದಿಗೆ ಸೌರಮಾನ ಶ್ರೀ ಲಕ್ಷ್ಮೀನರಸಿಂಹ ಜಯಂತಿ ಹಾಗೂ ವಿಶೇಷ 'ಸ್ವಾತಿ' ಪೂಜೆ, ಬೆಳಿಗ್ಗೆ 7.30ಕ್ಕೆ ವಿಶ್ವರೂಪ ದರ್ಶನ, 8.45ಕ್ಕೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ನವಕಲಶ ಸ್ಥಾಪನ ತಿರುಮಂಜನ (ಅಭಿಷೇಕ) ಮತ್ತು ದಿವ್ಯ ಪ್ರಬಂದ ಪಾರಾಯಣ, ಮಧ್ಯಾಹ್ನ 1ಕ್ಕೆ ವಿಶೇಷ ಅಲಂಕಾರ, ಮಂತ್ರಪುಷ್ಪ, ಅಷ್ಟೋತ್ತರ, 1.30ಕ್ಕೆ ಮಹಾ ನೈವೇದ್ಯ, ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.00 ಗಂಟೆಗೆ ತಿರುವೀಧಿ ಉತ್ಸವ (ಮುಖ್ಯ ರಸ್ತೆಗಳಲ್ಲಿ), 8ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, 9ಕ್ಕೆ ದೇವರಿಗೆ ಏಕಾಂತ ಸೇವೆ, ಸ್ಥಳ: ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಬೆಳಗ್ಗೆ 9.30 ರಿಂದ ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಪಿಎಂಜೆಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ :** ಅಂತರರಾಷ್ಟ್ರೀಯ ಕ್ಲಿನಿಕಲ್ ಟ್ರೈಯಲ್ಸ್ ದಿನದ ಅಂಗವಾಗಿ ವಿಚಾರ ಸಂಕಿರಣ, ಸಂಪನ್ಮೂಲ ವ್ಯಕ್ತಿಗಳು : ಡಾ.ಸಿ.ಜೆ. ದೇವರಾಜು, ತನುಜಾ ನಾಯ್ದು, ಡಾ. ಬಿ. ದಿನೇಶ್, ಡಾ. ಕೆ.ಎಸ್. ಸದಾನಂದ, ಡಾ. ಎಂ. ಪ್ರಶಾಂತ್, ವಿಶ್ವನಾಥ್, ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಆಸ್ಪತ್ರೆ ಆವರಣ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೇಂದ್ರ :** ಸ್ನಾತಕ ವಿದ್ಯಾರ್ಥಿ ವೇದಿಕೆ ಸಮಾರಂಭ, ಮುಖ್ಯ ಅತಿಥಿಗಳು : ವಿಜಯಾನಂದ ಗುರುದೇವ್, ಪಿ. ವಿಶ್ವನಾಥ್, ಟಿ. ನಾಗರಾಜು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಪ್ರೊ. ಸಿ. ಗುರುಸಿದ್ದಯ್ಯ ಅಭಿನಂದನಾ ಸಮಿತಿ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ :** ಪ್ರೊ. ಸಿ. ಗುರುಸಿದ್ದಯ್ಯ ಅಭಿನಂದನಾ ಸಮಾರಂಭ, ಅಭಿನಂದನಾ ಗ್ರಂಥ ಬಿಡುಗಡೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ವಿಶ್ರಾಂತ ಹಿರಿಯ ಪ್ರಾಧ್ಯಾಪಕ ಪ್ರೊ. ಡಿ. ಆನಂದ್, ಉಪ ಪೊಲೀಸ್ ಆಯುಕ್ತ ಕೆ.ಎಸ್. ಸುಂದರ್‌ರಾಜ್, ಡಾ. ನಿರ್ಮಲ್‌ರಾಜ್, ಅಧ್ಯಕ್ಷತೆ : ವಿಶ್ರಾಂತ ಹಿರಿಯ ಪ್ರಾಧ್ಯಾಪಕ ಪ್ರೊ. ರಮೇಶ, ಸನ್ಮಾನಿತರು : ಪ್ರೊ. ಸಿ. ಗುರುಸಿದ್ದಯ್ಯ, ಸ್ಥಳ : ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ಪತ್ರಕರ್ತರಿಗೆ ಅಭಿನಂದನೆ, ಸಾನ್ನಿಧ್ಯ : ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಪ್ರತಿಭಾ ಪುರಸ್ಕಾರ : ಶಾಸಕ ಜಿ.ಡಿ. ಹರೀಶ್‌ಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಸುಯೋಗ ಆಸ್ಪತ್ರೆ :** ಅಮೆರಿಕದ ಖ್ಯಾತ ಯೋಗಿನಿ ಡಾ. ಕಾಳೀಜಿ ಅವರಿಂದ ಯೋಗದ ಕುರಿತು ವಿಶೇಷ ಉಪನ್ಯಾಸ ಹಾಗೂ ಯೋಗದ ಪ್ರಾತ್ಯಕ್ಷಿಕೆ, ಉದ್ಘಾಟನೆ : ಜೆಎಸ್‌ಎಸ್ ಯೋಗ ಸಂಸ್ಥೆ ಸಂಸ್ಥಾಪಕ ಶ್ರೀಹರಿ ದ್ವಾರಕಾನಾಥ್, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ವಿಶೇಷ ಆಹ್ವಾನಿತರು : ಅಮೆರಿಕ ಯೋಗ ವಿಶ್ವವಿದ್ಯಾನಿಲಯ ಉಪಕುಲಪತಿ ಡಾ. ಕೆ. ರಾಘವೇಂದ್ರ ಪೈ, ಮುಖ್ಯ ಅತಿಥಿಗಳು : ಯೋಗ ವಿತ್ ಪ್ರಕಾಶನ ಸಂಸ್ಥಾಪಕ ಡಾ.ಬಿ. ಶ್ರೀನಾಥ್, ಸುಯೋಗ್ ಆಸ್ಪತ್ರೆ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಹಿಮಾಲಯ ಪ್ರತಿಷ್ಠಾನ ಸಂಸ್ಥಾಪಕ ಎನ್. ಅನಂತ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ಕಲಾಸುರುಚಿ, ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 934, ಕಥೆ ಹೇಳುವವರು: ಶ್ರೀಮತಿ ನರಸು ಎಲ್, ಕಾರ್ಯದರ್ಶಿ, ಲಕ್ಕು ಫೌಂಡೇಶನ್ ಟ್ರಸ್ಟ್, ಮೈಸೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5–30 ರವರೆಗೆ

■ **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್ :** ಗಾಂಧಾರಿ ವಿದ್ಯೆ ಶಿಬಿರದ ಉದ್ಘಾಟನೆ, ಪ್ರಮಾಣ ಪತ್ರ ವಿತರಣಾ ಸಮಾರಂಭ, ಉಪಸ್ಥಿತರು : ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಡಾ. ಆರ್. ಭಾವನಾ, ಶ್ರೀಮತಿ ಬಿ.ಕೆ. ಲಕ್ಷ್ಮೀಜಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಅಧಿಕ ಮಾಸೋತ್ಸವ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮಗಳು, ಸೌರಭ ವಿದ್ಯಾಲಯದ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಕಾರ್ಯಕ್ರಮ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.

■ **ರೇಡಿಯೋ ಶಿವ, ವೇದಾಂತ :** ಪೂಜಾರಾವ್ ತಂಡದಿಂದ ಕನ್ನಡ ಸಂಗೀತ ರಸ ಸಂಜೆ, ಸ್ಥಳ: ತಂಬುಳಿ ಮನೆ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ :** ದಿವಂಗತ ಪಂಡಿತ್ ಕೆ.ಎಸ್. ಹಡಪದ ಅವರ 20ನೇ ಪುಣ್ಯ ಸ್ಮರಣಾರ್ಥ 2026ನೇ ಸಾಲಿನ ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿ ಪ್ರದಾನ ಹಾಗೂ ಸಂಗೀತ ಕಾರ್ಯಕ್ರಮ, ಸಂಜೆ 5.30ಕ್ಕೆ ಎಸ್‌ಜಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಮೂಹ ತಬಲಾ ವಾದನ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಶ್ರೀ ಪರಮಹಂಸ ವಿದ್ಯಾನಿಕೇತನ ಟ್ರಸ್ಟ್ ಸಲಹೆಗಾರ ಕೆ.ಎನ್. ನವೀನ್ ಕುಮಾರ್, ಅಧ್ಯಕ್ಷತೆ : ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಪ್ರಶಸ್ತಿ ಪ್ರದಾನ : ರಾಷ್ಟ್ರೀಯ ಕುಸ್ತಿ ಪಟು ಶಂಕರ್ ಎಸ್. ಕಳಿಗೊನ್ನವರ್, ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿ : ಪಂಡಿತ್ ರಾಜೇಂದ್ರ ನಾಕೋಡ, ಸಂಜೆ 7ಕ್ಕೆ ಕು. ಅಂತರ ಭಟ್ ಅವರಿಂದ ಬಾನ್ಸುರಿ ವಾದನ, ಅರುಣ್ ಭಟ್–ತಬಲಾ, ಸಂಜೆ 7.30ಕ್ಕೆ ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿ ಪುರಸ್ಕೃತರಾದ ಪಂಡಿತ್ ರಾಜೇಂದ್ರ ನಾಕೋಡ ಅವರಿಂದ ತಬಲಾ ಸೋಲೋ, ಲೆಹರಾ ಸಹಕಾರ : ಭೀಮಾಶಂಕರ ಬಿದನೂರ, ಸ್ಥಳ:ಗಾನಭಾರತೀ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ, ಸಪ್ತಸ್ವರ ಬಳಗ :** ವಚನ ಸಂಗೀತೋತ್ಸವ, ಉದ್ಘಾಟನೆ : ನೃಪತುಂಗ ಕನ್ನಡ ಶಾಲೆ ಕಾರ್ಯದರ್ಶಿ ಪ್ರೊ. ಎಸ್.ಜಿ. ಕೃಷ್ಣಪ್ಪ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ವಿದುಷಿ ಸುಮಂಗಲ ಜಂಗಮಶೆಟ್ಟಿ ಅವರಿಂದ ವಚನ ಗಾಯನ, ವಿದುಷಿ ಶುಭಾ ರಾಘವೇಂದ್ರ ಮತ್ತು ತಂಡದಿಂದ ಕಾರ್ಯಕ್ರಮ, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಕನ್ನಡ ಶಾಲೆ ಆವರಣ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷತ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ಸಂಚಯ ಬೆಂಗಳೂರು ಅವರಿಂದ ವಿಶ್ವಾಮಿತ್ರ ಮೇನಕೆ ಡಾನ್ಸ್ ಮಾಡೋದು ಏನಕೆ ಆಸ್ಕ್ ಮಿ. ವೈಎನ್ಕೆ ನಾಟಕ ಪ್ರದರ್ಶನ, ನಿರ್ದೇಶನ : ಎನ್.ಎಸ್. ಚಿತ್ರಶೇಖರ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಆಯಾಮ ರಂಗ ತಂಡ ಟ್ರಸ್ಟ್ :** ಆಯಾಮ ರಂಗ ತಂಡದಿಂದ ಪಿ. ಲಂಕೇಶ್ ಅವರ 'ಪೊಲೀಸರಿದ್ದಾರೆ ಎಚ್ಚರಿಕೆ' ನಾಟಕ ಪ್ರದರ್ಶನ, ನಿರ್ದೇಶನ : ನಾಗಾರ್ಜುನ ಆರಾಧ್ಯ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ –ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು: ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ –ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ನಾ ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್. ಎಸ್., 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ. ಎಸ್. ಗೋಪಾಲ ಕೃಷ್ಣನ್–ಕೊಳಲು ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ಚೋಳರ ಕಾಲದ ರಾಜದಂಡ, ರಚನೆ–ಅಪರಂಜಿ ಶಿವು, ನಿರ್ಮಾಣ–ಉಮೇಶ್ ಎಸ್. ಎಸ್., 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ:ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಕಾಳು ಮೆಣಸಿನ ಬೇಸಾಯ ಕುರಿತು ಸಂವಾದ, ಭಾಗವಹಿಸುತ್ತಾರೆ–ಪಾಂಡವಪುರ ತಾಲ್ಲೂಕು, ಶಂಭುವನಹಳ್ಳಿಯ ಶಂಕರಸ್ವಾಮಿ ಮತ್ತು ಅವರ ಮಗ ಎಸ್.ಮಂಜುನಾಥ್, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸ್ಮಿತಾ ಮೋಕ್ಷಿ ಖ್ಯಾಲ್ –ಹಾಡುಗಾರಿಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 30 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 44 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದೆಹಲಿಯಲ್ಲಿ ಸೋನಿಯಾ ಗಾಂಧಿ, ರಾಹುಲ್‌ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿ ಪಕ್ಷದ ವರಿಷ್ಠ ನಾಯಕರ ಭೇಟಿಯಾದ ಸಿದ್ದರಾಮಯ್ಯ

ಬೆಂಗಳೂರು, ಮೇ 29(ಕೆಎಂಶಿ)– ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದಂತೆ ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ ಇಂದು ಇಡೀ ದಿನ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಸೇರಿದಂತೆ ವರಿಷ್ಠ ನಾಯಕರುಗಳನ್ನು ಭೇಟಿ ಮಾಡಿ, ಮುಂದಿನ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಿದರು.

ವಿಧಾನ ಪರಿಷತ್ ಸದಸ್ಯ, ಪುತ್ರ ಯತೀಂದ್ರ ಜೊತೆಗೂಡಿ, ಬೆಳಗ್ಗೆ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಸುಮಾರು 20 ನಿಮಿಷಗಳ ಕಾಲ ಮಾತುಕತೆ ನಡೆಸಿದರು.

ಇದಕ್ಕೂ ಮುನ್ನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನೂ ಭೇಟಿ ಮಾಡಿದ್ದು. ನಂತರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಸಚಿವ ಕೆ.ಜೆ. ಜಾರ್ಜ್ ಜೊತೆ ಸುದೀರ್ಘ ಚರ್ಚೆ ನಡೆಸಿದರು. ಸರ್ಕಾರ ರಚನೆ, ಮಂತ್ರಿ ಮಂಡಲಕ್ಕೆ ಸಚಿವರ ಸೇರ್ಪಡೆ, ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರದ ನಂತರ ಶಿವಕುಮಾರ್ ಅವರಿಂದ ತೆರವಾಗುವ ಕೆಪಿಸಿಸಿ ಅಧ್ಯಕ್ಷ ಸ್ಥಾನ ಭರ್ತಿ, ಸರ್ಕಾರ ಹಾಗೂ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಬದಲಾವಣೆಗಳ ಕುರಿತು ಚರ್ಚೆ ನಡೆಸಿದರು ಎನ್ನಲಾಗಿದೆ.

ಪಕ್ಷದ ವರಿಷ್ಠರ ಸೂಚನೆಯಂತೆ ಮುಖ್ಯಮಂತ್ರಿ ಸ್ಥಾನ ತ್ಯಜಿಸಿದ ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನ ಘನತೆ, ಕರುಣೆ ಮತ್ತು ಸಾಮಾಜಿಕ ನ್ಯಾಯದ ಕಡೆಗೆ ಆಳವಾದ ಬದ್ಧತೆ ತೋರುತ್ತದೆ ಎಂದು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಾಮಾನ್ಯ ಕುಟುಂಬ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಎರಡು

■ 6ನೇ ಪುಟಕ್ಕೆ



ಎಲ್ಲರಿಂದಲೂ ಪ್ರಶಂಸೆ, ಗುಣಗಾನ





ಶುಕ್ರವಾರ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವದೆಹಲಿಯಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಇಬ್ಬರೂ ಆಲಂಗಿಸಿಕೊಂಡು ಅಭಿನಂದಿಸಿದರು. ಇದೇ ವೇಳೆ ಸಿದ್ದರಾಮಯ್ಯ ಎಐಸಿಸಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಖರ್ಗೆ, ಸಂಘಟನಾ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದರು. ಈ ವೇಳೆ ಮಾಜಿ ಸಚಿವರಾದ ಕೆ.ಜೆ. ಜಾರ್ಜ್, ಪ್ರಿಯಾಂಕ್‌ಖರ್ಗೆ, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಉಪಸ್ಥಿತರಿದ್ದಾರೆ.

ಇಂದು ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ

ನೂತನ ನಾಯಕ ಆಯ್ಕೆ

ಇಂದೇ ರಾಜ್ಯಪಾಲರ ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಲಿರುವ ಡಿಕೆಶಿ

- ಬಹುತೇಕ ಸೋಮವಾರವೇ ಪ್ರಮಾಣ ವಚನ ಸಮಾರಂಭ
- ವಿಧಾನಸೌಧದ ಮುಂಭಾಗ ಕಾರ್ಯಕ್ರಮಕ್ಕೆ ನಡೆದಿದೆ ಸಿದ್ಧತೆ

ಬೆಂಗಳೂರು, ಮೇ 29(ಕೆಎಂಶಿ)– ಸಿದ್ದರಾಮಯ್ಯ ನೀಡಿದ ರಾಜೀನಾಮೆ ಅಂಗೀಕಾರ ಆಗುತ್ತಿದ್ದಂತೆ, ಡಿ.ಕೆ.ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲು ಕಾಂಗ್ರೆಸ್ ವರಿಷ್ಠರು ವೇದಿಕೆ ಸಿದ್ಧಪಡಿಸಿದ್ದಾರೆ.

ಹಾಗಾಗಿ ಮೇ 30ರ ಶನಿವಾರ ಸಂಜೆ 4 ಗಂಟೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ಕಾಂಗ್ರೆಸ್ ಸಂಪ್ರದಾಯದಂತೆ ಎಐಸಿಸಿ ನಿಯೋಜಿಸಿರುವ ವೀಕ್ಷಕರು, ಒಂದು ಸಾಲಿನ ನಿರ್ಣಯ ತಂದು ಅಂಗೀಕಾರ ಪಡೆಯುವ ಮೂಲಕ ಸರ್ಕಾರ ರಚನೆಗೆ ಶಿವಕುಮಾರ್ ಹಾದಿ ಸುಗಮಗೊಳಿಸಲಿದ್ದಾರೆ. ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಮುಗಿಯುತ್ತಿದ್ದಂತೆ, ಶಿವಕುಮಾರ್



ಲೋಕಭವನಕ್ಕೆ ತೆರಳಿ ರಾಜ್ಯಪಾಲರ ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕೊತ್ತಾಯ ಪ್ರಸ್ತಾವನೆ ಸಲ್ಲಿಸಲಿದ್ದಾರೆ.

ಶಿವಕುಮಾರ್ ಜೊತೆ ಕೆಲವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲು ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ವೇದಿಕೆ ಸಿದ್ಧಗೊಳ್ಳುತ್ತಿದೆ. ಒಂದೊಮ್ಮೆ ಮಳೆ ಬಂದರೆ, ಕೊನೆ

■ 6ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಪಟ್ಟಾಭಿಷೇಕಕ್ಕೆ ರಾಮನಗರದಿಂದ 50 ಸಾವಿರ ಜನ!

ರಾಮನಗರ, ಮೇ 29– ಡಿ.ಕೆ.ಶಿವಕುಮಾರ್ ಅವರ ಪ್ರಮಾಣವಚನ ಸಮಾರಂಭಕ್ಕೆ ಅವರ ತವರು ಜಿಲ್ಲೆ ರಾಮನಗರದಲ್ಲಿ ಭರ್ಜರಿ ಸಿದ್ಧತೆಗಳು ಆರಂಭವಾಗಿವೆ. ಹೈಕಮಾಂಡ್ ಮಟ್ಟದಲ್ಲಿ ಪ್ರಕ್ರಿಯೆಗಳು ಚುರುಕಾಗಿರುವ ಬೆನ್ನಲ್ಲೇ, ಪದಗ್ರಹಣ ಕಾರ್ಯಕ್ರಮಕ್ಕೆ ರಾಮನಗರ ಜಿಲ್ಲೆಯಿಂದಲೇ ಬರೋಬ್ಬರಿ 40 ರಿಂದ 50 ಸಾವಿರ ಜನರನ್ನು ಬೆಂಗಳೂರಿಗೆ ಕರೆದೊಯ್ಯಲು ಕಾಂಗ್ರೆಸ್ ನಿರ್ಧರಿಸಿದೆ.

ಡಿಕೆಶಿ ಪದಗ್ರಹಣ ಕಾರ್ಯಕ್ರಮದ ಸಿದ್ಧತೆಗಳ ಸಂಬಂಧ ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅವರು ನಗರದ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಪ್ರಮುಖ ಮುಖಂಡರು ಹಾಗೂ ಕಾರ್ಯಕರ್ತರ ತುರ್ತು ಪೂರ್ವಭಾವಿ ಸಭೆ ನಡೆಸಿದರು. ಸಭೆಯಲ್ಲಿ ಜಿಲ್ಲೆಯಿಂದ ಗರಿಷ್ಠ ಸಂಖ್ಯೆಯಲ್ಲಿ ಜನರನ್ನು ಕಾರ್ಯಕ್ರಮಕ್ಕೆ ಸುರಕ್ಷಿತವಾಗಿ ಕರೆದೊಯ್ಯುವ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಇಕ್ಬಾಲ್ ಹುಸೇನ್, ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ

■ 6ನೇ ಪುಟಕ್ಕೆ

ಮಲ್ಲಿಕಾರ್ಜುನ ಖರ್ಗೆ ಪಾದಮುಟ್ಟಿ ಆಶೀರ್ವಾದ ಪಡೆದ ಡಿ.ಕೆ.ಶಿವಕುಮಾರ್

ನವದೆಹಲಿ, ಮೇ 29– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್‌ನ ಹಿರಿಯ ರಾಜಕಾರಣಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪಾದಮುಟ್ಟಿ ಆಶೀರ್ವಾದ ಪಡೆದಿದ್ದಾರೆ.

ದೆಹಲಿಯಲ್ಲಿ ಖರ್ಗೆ ಅವರನ್ನು ಭೇಟಿಯಾದ ಡಿಕೆಶಿ, ಕೆಲಕಾಲ ಮಾತುಕತೆ ನಡೆಸಿದ್ದಾರೆ. ಈ ಸಂಬಂಧ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಖರ್ಗೆ ಅವರನ್ನು ಆಲಂಗಿಸಿಕೊಂಡ ಡಿಕೆಶಿ, ಒಗ್ಗಟ್ಟಿನ ಸಂದೇಶ ರವಾನಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ರಾತ್ರಿ ದೆಹಲಿಗೆ ತೆರಳಿದ್ದರು. ಪಕ್ಷದ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಿದ್ದಾರೆ.

ಮೂರು ವರ್ಷಗಳ ಆಡಳಿತ ಪೂರೈಸಿರುವ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ ಡಿ.ಕೆ.ಶಿವಕುಮಾರ್ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗುವುದು ಖಚಿತವೆನಿಸಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಶನಿವಾರ ನಡೆಯಲಿದೆ. ಆ ಸಭೆಯಲ್ಲಿ,




ಮುಂದಿನ ನಾಯಕನ ಆಯ್ಕೆಯನ್ನು ಘೋಷಿಸಿ, ಅನುಮೋದನೆ ಪಡೆಯಲಾಗುತ್ತದೆ. ಆಯ್ಕೆಯಾದ ನಾಯಕ, ತಮಗೆ ಬಹುಮತ ಇದೆ ಎಂದು ದೃಢಪಡಿಸಲು ಶಾಸಕರ ಸಹಿ ಇರುವ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿ, ಸರ್ಕಾರ ರಚನೆಗೆ ಅವಕಾಶ ನೀಡುವಂತೆ ಕೋರಬೇಕು. ಅದಾದ ನಂತರವಷ್ಟೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ.

ಬೊಮ್ಮಾಯಿ ಸರ್ಕಾರ ತಂದಿದ್ದ ಆನ್‌ಲೈನ್ ಗೇಮಿಂಗ್ ನಿಷೇಧ ಕಾನೂನು ಎತ್ತಿ ಹಿಡಿದ ಸುಪ್ರೀಂ



ಬೆಂಗಳೂರು, ಮೇ 29– ನನ್ನ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿರುವ ಆನ್‌ಲೈನ್ ಗೇಮಿಂಗ್ ನಿಷೇಧಿಸುವ ಕಾನೂನನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದ್ದು, ಆನ್‌ಲೈನ್ ಗೇಮಿಂಗ್ ತಡೆಯುವ ನಮ್ಮ ಉದ್ದೇಶಕ್ಕೆ ಜಯ ಸಿಕ್ಕಂತಾಗಿದ್ದು, ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಸ್ವಾಗತಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇಂದು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿ ಗಳಾದ ಜೆಬಿ ಪರ್ದಿವಾಲಾ ಮತ್ತು ಆರ್. ಮಹದೇವನ್ ಅವರ ಡಬಲ್ ಬೆಂಚ್ ನನ್ನ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಸರ್ಕಾರ ಆನ್‌ಲೈನ್ ಗ್ಯಾಂಬ್ಲಿಂಗ್ ವಿರುದ್ಧ ತಂದಿರುವ ಕಾನೂನನ್ನು ಎತ್ತಿ ಹಿಡಿದಿದ್ದಾರೆ. ನನ್ನ ಸರ್ಕಾರ ಇದ್ದಾಗ ಕರ್ನಾಟಕ ಪೊಲೀಸ್ ಅಮೆಂಡ್‌ಮೆಂಟ್ ಆಕ್ಟ್ 2021 ತಂದಿದ್ದು, ಅದರಲ್ಲಿ ಕರ್ನಾಟಕ ಪೊಲೀಸ್ ಆಕ್ಟ್ 1963ಗೆ ಹಲವಾರು ಬದಲಾವಣೆ ತಂದು ಗ್ಯಾಂಬ್ಲಿಂಗ್ ವ್ಯಾಖ್ಯಾನ ವಿಸ್ತರಣೆ ಮಾಡಿ ಆನ್‌ಲೈನ್ ಗೇಮಿಂಗ್ ನ್ನು ಜಾಮೀನು ರಹಿತ ಅಪರಾಧ ಅಂತ ಕಾನೂನು ತಿದ್ದುಪಡಿ ತಂದಿದ್ದೆವು.

ಧರ್ಮಸ್ಥಳದಲ್ಲಿ ವೃದ್ಧೆಗೆ ಪ್ರಜ್ಞೆ ತಪ್ಪಿಸಿ 10 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

ಮಂಗಳೂರು, ಮೇ 29– ಧರ್ಮಸ್ಥಳದಲ್ಲಿ ಯಾತ್ರಾರ್ಥಿ ವೃದ್ಧೆಗೆ ಪ್ರಜ್ಞೆ ತಪ್ಪುವ ಔಷಧಿ ನೀಡಿ ದರೋಡೆ ಮಾಡಿರುವ ಘಟನೆ ನಡೆದಿದೆ.

70 ವರ್ಷದ ಮಹಿಳೆಯಿಂದ 10 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ. ಬೆಂಗಳೂರು ಬನ್ನೇರುಘಟ್ಟ ಮೂಲದ ಪ್ರೇಮಾ ಕೆ. ಮೋಸ ಹೋದ ವೃದ್ಧೆ. ಅಪರಿಚಿತರು ಪ್ರಸಾದ, ಜ್ಯೂಸ್ ನೀಡಿ ಪರಿಚಯ ಬೆಳೆಸಿ ಕೃತ್ಯ ಎಸಗಿದ್ದಾರೆ. 112 ಗ್ರಾಂ ಚಿನ್ನಾಭರಣ, 7 ಸಾವಿರ ನಗದು ಕಳವು ಮಾಡಲಾಗಿದೆ. ದೇವಸ್ಥಾನದ ಮುಖ್ಯದ್ವಾರದ ಬಸ್ ನಿಲ್ದಾಣದ ಬಳಿ ಘಟನೆ ನಡೆದಿದೆ. ಅಸ್ವಸ್ಥಗೊಂಡ ವೃದ್ಧೆಯನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಲಂ 307 ಅಡಿ ಪ್ರಕರಣ ದಾಖಲಾಗಿದೆ

ಸಿದ್ದರಾಮಯ್ಯ ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರೆಯುತ್ತೇನೆ; ಡಿಕೆಶಿ ವಾಗ್ದಾನ

ಬೆಂಗಳೂರು, ಮೇ 29(ಕೆಎಂಶಿ)–ದೇವರು ವರವನ್ನಾಗಲಿ, ಶಾಪವನ್ನಾಗಲಿ ಕೊಡುವುದಿಲ್ಲ ಅವಕಾಶ ಮಾತ್ರ ಕೊಡುತ್ತಾನೆ. ಅದನ್ನು ಹೇಗೆ ನಿಭಾಯಿಸಿಕೊಂಡು ಹೋಗುತ್ತೇವೆ ಎಂಬುದೇ ಮುಖ್ಯ ಎಂದು ತಮ್ಮ ಬಹುಪ್ರಿಯ ಲೋಕರೂಢಿ ಮಾತನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಮತ್ತೊಮ್ಮೆ ಉಲ್ಲೇಖಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರೆಯುವುದಾಗಿ ವಾಗ್ದಾನ ಮಾಡುತ್ತೇನೆ ಎಂದಿದ್ದಾರೆ.



ಸಿದ್ದರಾಮಯ್ಯ

ತಮ್ಮ ಸಾಮಾಜಿಕ ಜಾಲತಾಣ ಖಾತೆ ಎಕ್ಸ್‌ನಲ್ಲಿ ಈ ಕುರಿತು ಸುದೀರ್ಘ ಹೇಳಿಕೆ ಪೋಸ್ಟ್ ಮಾಡಿರುವ ಅವರು, ಮೈಸೂರಿನ ಅತ್ಯಂತ ಕುಗ್ರಾಮವೊಂದರಲ್ಲಿ ಜನಿಸಿ, ರಾಜಕೀಯವಾಗಿ ಅತ್ಯುನ್ನತ ಸ್ಥಾನಕ್ಕೆ ತಲುಪಿ ಜನತೆಗೆ ನಿಸ್ವಾರ್ಥ ಸೇವೆ ಸಲ್ಲಿಸಿರುವ ಸಿದ್ದರಾಮಯ್ಯ ನಮ್ಮೆಲ್ಲರಿಗೂ ಪ್ರೇರಣೆಯಾಗಿದ್ದಾರೆ ಎಂದಿದ್ದಾರೆ.

■ 6ನೇ ಪುಟಕ್ಕೆ

ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲರು; ಸದ್ಯ ಹಂಗಾಮಿ ಮುಖ್ಯಮಂತ್ರಿ

ಬೆಂಗಳೂರು, ಮೇ 29(ಕೆಎಂಶಿ)– ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಸಲ್ಲಿಸಿದ ರಾಜೀನಾಮೆ ಅಂಗೀಕರಿಸಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸಚಿವ ಸಂಪುಟವನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಿದ್ದಾರೆ. ಕಾಂಗ್ರೆಸ್ ವರಿಷ್ಠರ ಸೂಚನೆಯಂತೆ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಗುರುವಾರ ಲೋಕಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದ್ದರು.

ಸಚಿವ ಸಂಪುಟ ವಿಸರ್ಜನೆ



ಥಾವರ್‌ಚಂದ್

ರಾಜ್ಯಪಾಲರು ಪ್ರವಾಸದಲ್ಲಿದ್ದ ಕಾರಣ ಅವರ ಕಾರ್ಯದರ್ಶಿ ಅವರಿಗೆ ಪತ್ರ ನೀಡಿದ್ದರು. ಗುರುವಾರ ರಾತ್ರಿಯೇ ನಗರಕ್ಕೆ ಹಿಂತಿರುಗಿದ ರಾಜ್ಯಪಾಲರು, ಸಿದ್ದರಾಮಯ್ಯ ರಾಜೀನಾಮೆ

■ 6ನೇ ಪುಟಕ್ಕೆ

ಸಿದ್ದರಾಮಯ್ಯ ಸೇವೆ ಮರೆಯಲಾಗದು; ಅವರ ಕೊಡುಗೆಗೆ ಕರ್ನಾಟಕ ಕಾಂಗ್ರೆಸ್ ಎಂದಿಗೂ ಕೃತಜ್ಞ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶಂಸೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ನಿರ್ಗಮಿತ ಸಿಎಂ ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನವನ್ನು ಶುಕ್ರವಾರ ಶ್ಲಾಘಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿರುವ ಅವರು, ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನ ಸದಾ ಗೌರವ, ಕರುಣೆ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಯನ್ನು ಪ್ರತಿಬಿಂಬಿಸಿದೆ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಜೀವನದ ಆರಂಭದಿಂದಲೇ ಸಮಾನತೆ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಿದ್ದಾರೆ. ಸರಳ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಎರಡು ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ತಿಳಿಸಿದ್ದಾರೆ.

ಕರ್ನಾಟಕ ಹಾಗೂ ಕಾಂಗ್ರೆಸ್ ಪಕ್ಷವು ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಸಿದ್ದರಾಮಯ್ಯ ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ ಎಂದು ಹಾರೈಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಗೇಬಿಯನ್ ಸ್ಟ್ರಕ್ಚರ್ ಮಾದರಿಯಲ್ಲಿ

ರಂಗನತಿಟ್ಟು ಪಕ್ಷಿಧಾಮದ ದ್ವೀಪಗಳ ಸಂರಕ್ಷಣೆ

- ಪ್ರವಾಹದಿಂದ ಪ್ರತಿ ವರ್ಷ ಹಾನಿಗೀಡಾಗುತ್ತಿದ್ದ ಆರು ದ್ವೀಪಗಳಿಗೆ ಕಾಯಕಲ್ಪ
- ಪರಿಸರ ಸೂಕ್ಷ್ಮ ವಲಯದಲ್ಲಿ ಹಾದು ಹೋಗುತ್ತಿರುವ ಹೆದ್ದಾರಿ
- ಮೆಟಿಗೇಷನ್ ಪ್ಲಾನ್ ಅಡಿಯಲ್ಲಿ ದ್ವೀಪಗಳ ಸುರಕ್ಷೆಗೆ ಕ್ರಮ


ಮೈಸೂರು, ಮೇ 29(ಎಂಟಿವೈ)– ಕಾವೇರಿ ನದಿಯ ಪ್ರವಾಹದಿಂದ ಪದೇ ಪದೆ ಹಾನಿಗೊಳಗಾಗುತ್ತಿದ್ದ ರಂಗನತಿಟ್ಟು ಪಕ್ಷಿಧಾಮದ ಪ್ರಮುಖ ದ್ವೀಪ(ನಡುಗಡ್ಡೆ)ಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಗೇಬಿಯನ್ ಸ್ಟ್ರಕ್ಚರ್ ಮಾದರಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿದ್ದು, ಇದರಿಂದ ಮುಂಬರುವ ವರ್ಷಗಳಲ್ಲಿ ದ್ವೀಪಗಳಿಗೆ ಹಾನಿಯುಂಟಾಗುವುದನ್ನು ತಡೆಗಟ್ಟಿದಂತಾಗಲಿದೆ.

ಮಳೆಗಾಲದಲ್ಲಿ ಕೆಆರ್‌ಎಸ್ ಜಲಾಶಯ ಭರ್ತಿಯಾದ ಬಳಿಕ ಒಳಹರಿವಿನ ಪ್ರಮಾಣ ಹೆಚ್ಚಾದರೆ ಜಲಾಶಯದಿಂದ 1ರಿಂದ 2 ಲಕ್ಷ ಕ್ಯುಸೆಕ್ಸ್ ನೀರನ್ನು ಕಾವೇರಿ ನದಿಗೆ ಬಿಡುವುದರಿಂದ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದ ಪ್ರಮುಖ ಕೆಲ ದ್ವೀಪಗಳಿಗೆ ಹಾನಿಯಾಗುತ್ತಿತ್ತು. ನೀರಿನ ರಭಸಕ್ಕೆ ದ್ವೀಪದ ಸುತ್ತಲಿನ ತಡೆಗೋಡೆ ಮಾದರಿಯ ಗುಡ್ಡ ಕೊಚ್ಚಿಕೊಂಡು ಹೋಗುತ್ತಿದ್ದುದರಿಂದ ದ್ವೀಪದಲ್ಲಿದ್ದ ಗಿಡ–ಮರಗಳ ಬುಡಕ್ಕೆ ಹಾನಿಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ದ್ವೀಪಗಳ ಸಂರಕ್ಷಣೆಯೇ ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿತ್ತು.

ಮರಳು ಮೂಟೆ ಇಟ್ಟು ರಕ್ಷಣೆ: ರಂಗನತಿಟ್ಟು ಪಕ್ಷಿಧಾಮದಲ್ಲಿ ಪ್ರವಾಹದಿಂದ ಹಾನಿಗೊಳಗಾಗುತ್ತಿದ್ದ ದ್ವೀಪಗಳ ರಕ್ಷಣೆಗೆ ಪ್ರತಿವರ್ಷವೂ ಅರಣ್ಯ ಇಲಾಖೆ ಮರಳನ್ನು ತುಂಬಿದ ಪ್ಲಾಸ್ಟಿಕ್ ಚೀಲಗಳನ್ನು ತಡೆಗೋಡೆ ಮಾದರಿಯಲ್ಲಿ ಜೋಡಣೆ ಮಾಡಿ, ದ್ವೀಪದಲ್ಲುಂಟಾಗುತ್ತಿದ್ದ ಕೊರೆತಕ್ಕೆ ಮಣ್ಣು ತುಂಬುವ ಪ್ರಯತ್ನ ಮಾಡಿ, ಅಲ್ಲಿದ್ದ ಗಿಡ–ಮರಗಳ ಬುಡ ಗಟ್ಟಿಯಾಗುವಂತೆ ಮಾಡಲಾಗುತ್ತಿತ್ತು. ಈ ಕ್ರಮ ತಾತ್ಕಾಲಿಕವಾದುದ್ದಾಗಿದ್ದು, ಕಾವೇರಿ ನದಿಯ ನೀರಿನ ಪ್ರಮಾಣ ಹೆಚ್ಚಾದರೆ ಮರಳು ತುಂಬಿದ್ದ ಪ್ಲಾಸ್ಟಿಕ್(ಸಿಮೆಂಟ್ ಚೀಲ) ಚೀಲ ಕೊಚ್ಚಿಕೊಂಡು ಹೋಗುತ್ತಿದ್ದವು.

ಹೈವೆ ಕಾಮಗಾರಿಯಿಂದ ಹಸಿರು ವಲಯಕ್ಕೆ ಧಕ್ಕೆಯಾಗದಂತೆ ಕ್ರಮ: ರಂಗನತಿಟ್ಟು ಪಕ್ಷಿಧಾಮದ ಪರಿಸರ ಸೂಕ್ಷ್ಮ ವಲಯದಲ್ಲಿ ಶ್ರೀರಂಗಪಟ್ಟಣ–ಕುಶಾಲನಗರ ಹೈವೆ ಹಾದು ಹೋಗುತ್ತಿದೆ. 600 ಮೀಟರ್‌ನಷ್ಟು ಪರಿಸರ ಸೂಕ್ಷ್ಮ ವಲಯದಲ್ಲಿ ಹೈವೆ ಕಾಮಗಾರಿ ನಡೆಯುತ್ತಿದೆ. ಇದರಿಂದ ಹಸಿರು ವಲಯಕ್ಕೆ ದಕ್ಕೆಯಾಗದಂತೆ ಕಟ್ಟೆಚ್ಚರ ವಹಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮೆಟಿಗೇಷನ್ ಪ್ಲಾನ್ ತಯಾರಿಸಿತ್ತು. ಆ ಪ್ಲಾನ್‌ನಲ್ಲಿ ಹೈವೆ ನಿರ್ಮಿಸುತ್ತಿರುವ ರಾಷ್ಟ್ರೀಯ ಹೆದ್ದಾರಿ

■ 6ನೇ ಪುಟಕ್ಕೆ



ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದ ದ್ವೀಪಗಳನ್ನು ಗೇಬಿಯನ್ ಸ್ಟ್ರಕ್ಚರ್ ಮಾದರಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸಿರುವುದು.

ವಲಸೆ ಪಕ್ಷಿಗಳು ಸಂತಾನೋತ್ಪತ್ತಿಗೆ ಬರುತ್ತವೆ

ರಂಗನತಿಟ್ಟು ಪಕ್ಷಿಧಾಮದಲ್ಲಿ 22 ದ್ವೀಪ (ನಡುಗುಡ್ಡೆ)ಗಳಿದ್ದು, ಪಕ್ಷಿಧಾಮಕ್ಕೆ ವಿವಿಧ ಜಾತಿಯ ವಲಸೆ ಪಕ್ಷಿಗಳು ಬರುತ್ತವೆ. ಅವು ಆಹಾರಕ್ಕಾಗಿ ಮಾತ್ರ ಬರುವುದಿಲ್ಲ. ಸಂತಾನೋತ್ಪತ್ತಿಗಾಗಿಯೂ ಸುರಕ್ಷಿತ ಸ್ಥಳವನ್ನು ಅರಸಿ ಇಲ್ಲಿಗೆ ಬರುತ್ತವೆ. ಪ್ರತಿ ವರ್ಷ ಕೆಆರ್‌ಎಸ್ ಜಲಾಶಯದಿಂದ ಹೆಚ್ಚು ನೀರು ಬಿಟ್ಟಾಗ ಕೆಲ ದ್ವೀಪಗಳು ನೀರಿನಿಂದ ಹಾನಿಗೊಳಗಾಗುತ್ತಿದ್ದವು. ಮಣ್ಣು ಕೊಚ್ಚಿ ಹೋಗಿ ಮರಗಳ ಬೇರು ಸಡಿಲಗೊಳ್ಳುತ್ತಿದ್ದವು. ಇದರಿಂದ ನಡುಗಡ್ಡೆಗಳು ಕೊಚ್ಚಿಕೊಂಡು ಹೋಗುವ ಆತಂಕವಿತ್ತು. ಇದೀಗ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಗೇಬಿಯನ್ ಸ್ಟ್ರಕ್ಚರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. 5 ದ್ವೀಪಗಳ ಕಾಮಗಾರಿ ಪೂರ್ಣಗೊಂಡಿದ್ದು, 6ನೇ ದ್ವೀಪದ ದುರಸ್ತಿ ಕಾರ್ಯ ನಡೆಯುತ್ತಿದೆ. ಇದು ಪರ್ಮನೆಂಟ್ ಸೆಲ್ಯೂಷನ್ ಆಗಿದೆ.

– ಡಾ.ಐ.ಬಿ. ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಲಯ

ನಕ್ಕರೆ ಅದೇ ಸ್ವರ್ಗ

ಪತ್ನಿ ತವರು ಮನೆಯಿಂದ ಹಿಂತಿರುಗಿದಳು. ಗಂಡ ಬಾಗಿಲು ತೆರೆದ ತಕ್ಷಣ ನಗಲು ಶುರು ಮಾಡಿದ.

ಹೆಂಡತಿ : ಯಾಕ್ರೀ ಹೀಗೆ ನಗ್ತಾ ಇದ್ದೀರಾ?
ಗಂಡ : ಜ್ಯೋತಿಷಿಗಳು ಹೇಳಿದ್ದರು... ಕಷ್ಟ ಎದುರಿಗೆ ಬಂದಾಗ ನಗುತ್ತಾ ಎದುರಿಸು ಅಂತಾ..!

ಮೈಸೂರು ಮಿತ್ರ
ಶನಿವಾರ, ಮೇ 30, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಏಕಾಂಗಿಯಾಗಿ ಉಳಿದಾಗಲೂ ಯಾರು ಧೈರ್ಯದಿಂದ ಸವಾಲನ್ನು ಎದುರಿಸಿ ನಿಲ್ಲುತ್ತಾರೋ ಅವರೇ ನಿಜವಾದ ಜಯಶಾಲಿಗಳು.

ವೇದ ಸುಳ್ಳಾದರೂ } ಭಾಷೆ ತಿಳಿಯದಿದ್ದರೂ
ಗಾದೆ ಸುಳ್ಳಾಗದು } ಹಾಸ್ಯಕ್ಕೆ ಕಡಿಮೆಯಿಲ್ಲ.

ನಿಮ್ಮ ಪತ್ರಗಳು

ಮೈಸೂರು ಜಿಲ್ಲಾ ಆಸ್ಪತ್ರೆಯ ಆಡಳಿತ ವಿಭಾಗದಿಂದ ಶ್ಲಾಘನೀಯ ಸೇವಾ ಕಾರ್ಯ

ಮಾನ್ಯರೆ,



ಮೈಸೂರಿನ ಮೇಟಗಳ್ಳಿಯಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಈಗ (ಈ ಹಿಂದಿನಿಂದಲೂ ಇದೆ. ಆದರೆ, ನಿನ್ನೆ ನಾನು ಅಲ್ಲಿಗೆ ಹೋಗಿದ್ದೆ, ಆಗ ಗೊತ್ತಾಗಿದ್ದು) ಹೊಸದೊಂದು ಯೋಜನೆಯನ್ನು ರೂಪಿಸಲಾಗಿದೆ. ಏನೆಂದರೆ ಹೊಸದಾಗಿ ನೋಂದಾಯಿತವಾಗುವ ರೋಗಿಗಳು ಹೊರರೋಗಿ ವಿಭಾಗದಲ್ಲಿ ಚೀಟಿಯನ್ನು ತೆಗೆದುಕೊಂಡು ಸರತಿ ಸಾಲಿನಲ್ಲಿ ತುಂಬಾ ಹೊತ್ತು ನಿಂತು ವೈದ್ಯರನ್ನು ಭೇಟಿ ಮಾಡುವ ಅವಕಾಶ ಇತ್ತು. ಇದರಿಂದ ರೋಗಿಗಳ ಕಡೆಯವರಿಗೆ ತುಂಬಾ ಆಯಾಸದ ಜೊತೆಗೆ ಸಮಯ ವ್ಯರ್ಥ ಅನ್ನುವ ಭಾವನೆ ಕಾಡುತ್ತಿತ್ತು ಏಕೆಂದರೆ ಉದ್ದದ ಕ್ಯೂನಲ್ಲಿ ತುಂಬಾ ಹೊತ್ತು ನಿಂತು ಚೀಟಿ ತೆಗೆದುಕೊಳ್ಳುವುದೇ ತುಂಬಾ ತ್ರಾಸದಾಯಕವಾಗಿತ್ತು. ಇದಕ್ಕಾಗಿ ಒಂದು ವಿನೂತನ ಯೋಜನೆಯನ್ನು ರೂಪಿಸಲಾಗಿದೆ, ಅದು ಏನೆಂದರೆ ಜಿಲ್ಲಾಸ್ಪತ್ರೆಯ ಪ್ರವೇಶ ದ್ವಾರದ ಮುಂಭಾಗದಲ್ಲಿ ಒಂದು ಅಭಾ ABHA ಎನ್ನುವ ಒಂದು ಟೋಕನ್ ಸಿಸ್ಟಮ್ ಅನ್ನು ಅಲ್ಲೇ ರಚಿಸಲಾಗಿದೆ. ಮೊದಲಿಗೆ ಗೂಗಲ್ ಪ್ಲೇ ಸ್ಟೋರ್‌ಗೆ ಹೋಗಿ ABHA ಆ್ಯಪ್‌ನ ಡೌನ್ಲೋಡ್ ಮಾಡ್ಕೋಬೇಕು. ಅದರಲ್ಲಿ ಆಧಾರ್ ಒಟಿಪಿ ಸಮೇತ ಲಾಗಿನ್ ಆಗ್ಬೇಕು. ಹೊಸದಾಗಿ ರಚನೆ ಮಾಡುವವರು ರಿಜಿಸ್ಟರ್ ಆಪ್ಷನ್ ಮೇಲೆ ಕ್ಲಿಕ್ ಮಾಡಿ ಅದರಲ್ಲಿ ಹೋಗಿ ತಮ್ಮ ಆಧಾರ್ ನಂಬರ್‌ನ ಹಾಕಿದ್ರೆ ನೋಂದಾಯಿತ ಮೊಬೈಲ್ ಸಂಖ್ಯೆಗೆ ಒಂದು ಒಟಿಪಿ ಬರುತ್ತದೆ. ಅದನ್ನ ಅಲ್ಲಿ ದಾಖಲಿಸಿದ್ರೆ ಅಲ್ಲಿ ರಿಜಿಸ್ಟರ್ ಆಗುತ್ತೆ. ನಂತರ ಲಾಗಿನ್ ಮಾಡಿದ್ರೆ ಮತ್ತೊಂದು ಓಟಿಪಿ ಬರುತ್ತದೆ. ಅದನ್ನು ಅಲ್ಲಿ ದಾಖಲಿಸಿದಾಗ ಒಂದು ಸ್ಕ್ಯಾನರ್ ಆಯ್ಕೆಯಲ್ಲಿ ಕ್ಲಿಕ್ಕಿಸಿದ ನಂತರ ಗೇಟ್ ಟೋಕನ್ ಅಂತ ಬರುತ್ತದೆ.

ಆ ಟೋಕನ್ ಜನರೇಟ್ ಆದ್ಮೇಲೆ ಸರತಿ ಸಾಲಿನಲ್ಲಿ ನಿಂತು ಟೋಕನ್ ಪಡೆಯುವ ಹಾಗಿಲ್ಲ. ಕೌಂಟರ್ ಬಳಿ ಹೋಗಿ ಸಣ್ಣದಾದ ಕ್ಯೂನಲ್ಲಿ ನಿಂತು ಟೋಕನ್ ನಂಬರ್ ಹೇಳಿದ್ರೆ ಅವರು ಚೀಟಿ ಕೊಡುತ್ತಾರೆ ಆ ಟೋಕನ್‌ನ ಅವಧಿ ಒಂದು ಬಾರಿಗೆ 60 ನಿಮಿಷಗಳ ಕಾಲ ಇರುತ್ತದೆ.

ಈ ವ್ಯವಸ್ಥೆ ಮೈಸೂರಿನ ಮೇಟಗಳ್ಳಿಯಲ್ಲಿರುವ ಜಿಲ್ಲಾ ಆಸ್ಪತ್ರೆಗೆ ಹೋಗುವ ಹೊರರೋಗಿ ವಿಭಾಗದಲ್ಲಿ ಚೀಟಿ ತೆಗೆದುಕೊಳ್ಳುವವರು ಈ ಮಾರ್ಗವನ್ನು ಅನುಸರಿಸಿದರೆ ಅಥವಾ ಅಲ್ಲೇ ಮುಂಭಾಗದಲ್ಲಿರುವ ಆ ಕ್ಯೂಆರ್ ಕೋಡ್ ಅಥವಾ ABHA APP ನ ಡೌನ್ಲೋಡ್ ಮಾಡ್ಕೊಂಡು ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಟೋಕನ್ ರಚಿಸಿ ಹೋಗಬಹುದು ಇನ್ನು ಹೆಚ್ಚಿನ ಮಾಹಿತಿಗೆ ಅಲ್ಲಿಯೇ ಇರುವ ಮೇ ಐ ಹೆಲ್ಪ್ ಯು ನಾನು ನಿಮಗೆ ಸಹಾಯ ಮಾಡಲೇ ಎಂಬ ಕೌಂಟರಲ್ಲಿ ವಿಚಾರಿಸಿದರೆ ಅವರು ನಿಮಗೆ ಸಹಾಯ ಮಾಡುತ್ತಾರೆ ಜೊತೆಗೆ ಇದರ ಬಗ್ಗೆ ಗೊತ್ತಿಲ್ಲದ ಇದರ ಬಗ್ಗೆ ಅಷ್ಟಾಗಿ ತಿಳಿಯಲಾಗದ ರೋಗಿಗಳ ಕಡೆಯವರು ಅವರಿಗೂ ಕೂಡ ಅಲ್ಲೇ ಒಂದು ಕೌಂಟರ್ ಇರುತ್ತೆ ಅಲ್ಲಿ ಅದನ್ನ ಆಧಾರ್ ಕಾರ್ಡ್ ಸಮೇತ ಅವರೇ ಆ ಟೋಕನ್ ನ ಸಿದ್ಧಪಡಿಸಿ ಕೊಡುತ್ತಾರೆ. ಎರಡು ಬಗೆಯಲ್ಲೂ ಕೂಡ ಟೋಕನ್ ಬೇಗ ಪಡೆದುಕೊಳ್ಳಬಹುದು.

ಈ ವಿಚಾರವಾಗಿ ಮೈಸೂರಿನ ಜಿಲ್ಲಾ ಆಸ್ಪತ್ರೆಯ ಆಡಳಿತ ವಿಭಾಗದ ಸ್ತುತ್ಯಾರ್ಹ ಕಾರ್ಯಕ್ಕೆ ರೋಗಿಗಳ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

– ಎ.ಎಸ್. ಗೋವಿಂದೇಗೌಡ, ಕನ್ನಡ ಭಾಷಾ ಉಪನ್ಯಾಸಕರು, ಮೈಸೂರು.

ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ತೆಗೆದು ಹಾಕಲಿ

ಮಾನ್ಯರೆ,

ಏರಿದ ಪೆಟ್ರೋಲ್ ಡೀಸೆಲ್ ದರಗಳ ಬಗ್ಗೆ ಕೇಂದ್ರ ಸರಕಾರವನ್ನಷ್ಟೇ ಬೈಯುತ್ತಾ ಕಾಲ ಕಳೆದ ರಾಜ್ಯ ಸರಕಾರದ ಅಧಿಕಾರ ಬದಲಾವಣೆಯ ಕಾಲ ಸನ್ನಿಹಿತವಾಗುತ್ತಿದೆ.

ಪೆಟ್ರೋಲ್ ಹಾಗೂ ಡೀಸೆಲ್ ದರಗಳ ಹೆಚ್ಚಳಕ್ಕೆ ಕೇಂದ್ರ ಸರಕಾರವಷ್ಟೇ ಕಾರಣವಾಗದೇ ರಾಜ್ಯ ಸರಕಾರದ ಪಾಲೂ ಹೆಚ್ಚೇ ಇದೆ. ಜನತೆಗೆ ಏನಾದರೂ ಕರಬಾರ ಇಳಿಸುವ ಮನಸ್ಸಿದ್ದರೆ ಹೊಸ ಸರಕಾರವು ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ವಿಧಿಸುತ್ತಿರುವ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದು ಹಾಕಿ ತನ್ನದು ಜನಪರ ಸರಕಾರವೆಂದು ಸಾಬೀತು ಪಡಿಸಲಿ. ಉದ್ದೇಶಿತ ಮುಖ್ಯಮಂತ್ರಿ ಡಿಕೆಶಿ ತಮ್ಮ ಮೊದಲ ಸಂಪುಟ ಸಭೆಯಲ್ಲೇ ಈ ಬಗ್ಗೆ ತೀರ್ಮಾನ ಕೈಗೊಂಡು ಜನತೆಯ ಭಾರವನ್ನಿಳಿಸಲಿ. **–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.**

ಕೊಟ್ಟ ಭಾಷೆಯ ಮಹತ್ವ

ಮಾನ್ಯರೆ,

ಅಂತೂ ಕೊನೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾವು 3 ವರ್ಷಗಳ ಹಿಂದೆ ತಮ್ಮ ಪಕ್ಷದ ಹೈಕಮಾಂಡ್‌ಗೆ ನೀಡಿದ್ದ ಭಾಷೆಯಂತೆ (ಒಪ್ಪಂದ) ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಬೇರೆಯವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಆದರೆ ಒಪ್ಪಂದದ ಪ್ರಕಾರ ಎರಡೂವರೆ ವರ್ಷಗಳಾಗಿದ್ದರೂ ಅದನ್ನು ಎಳೆದು, ಎಳೆದು ಕೊನೆಗೆ ಹಗ್ಗ ಕಿತ್ತು ಹೋಗುವ ಹಂತಕ್ಕೆ ಬಂದಾಗ ಅನಿವಾರ್ಯವಾಗಿ ಅಧಿಕಾರ ತ್ಯಜಿಸಿದ್ದಾರೆ. ಅದೂ ಹೈ ಕಮಾಂಡ್‌ನ ಖಡಕ್ ಆದೇಶಕ್ಕೆ.

ಶಾಸಕರಾಗಿ, ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅವರು ನಡೆದು ಬಂದ ಹಾದಿ ಸುದೀರ್ಘವಾದದ್ದು. ಆದರೆ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಹೈಕಮಾಂಡ್‌ನಿಂದ ಆಯ್ಕೆಯಾದ ದಿನದಿಂದಲೂ, ಎರಡೂವರೆ ವರ್ಷ, ಎರಡೂವರೆ ವರ್ಷಕ್ಕೆ ಅಧಿಕಾರ ಹಂಚಿಕೆಯಾಗಿದೆ ಎನ್ನುವ ಮಾತು ಕೇಳಿ ಬರುತ್ತಿತ್ತು. ಆದರೆ ಈ ಮಾತನ್ನು ಸಿದ್ದರಾಮಯ್ಯನವರು ಸೇರಿದಂತೆ ಅವರ ಬಣದವರು ನಿರಾಕರಿಸುತ್ತಲೇ ಬಂದಿದ್ದರು. ಆದರೆ ಈ ಬಗ್ಗೆ ಕಾಂಗ್ರೆಸ್ ಹೈ ಕಮಾಂಡ್ ಇಲ್ಲಿಯವರೆಗೂ ಅದನ್ನು ಬಹಿರಂಗಪಡಿಸದೆ ಅಥವಾ ಸ್ಪಷ್ಟನೆ ನೀಡದೆ ಗೊಂದಲದಲ್ಲೇ ಕಳೆಯಿತು. ಇದು ರಾಜ್ಯದ ಆಡಳಿತದ ಮೇಲೆ ಪರಿಣಾಮ ಬೀರಿತ್ತು.

17 ಬಜೆಟ್ ಮಂಡನೆ, ಅರಸು ನಂತರ ಸುದೀರ್ಘ ಆಡಳಿತ ನಡೆಸಿದ ಮುಖ್ಯಮಂತ್ರಿ ಎನ್ನುವ ದಾಖಲೆಗೆ ಪಾತ್ರರಾದರು. ಆದರೆ ಸುದೀರ್ಘ ರಾಜಕೀಯ ಜೀವನದಿಂದ ಮುತ್ಸದ್ದಿಯಾದ ಸಿದ್ದರಾಮಯ್ಯನವರು ಒಪ್ಪಂದದಂತೆ ಅಧಿಕಾರ ಹಸ್ತಾಂತರ ಮಾಡದೆ ವಿಳಂಬ ಮಾಡಿದರು. ಇದಕ್ಕೆ ಅವರ ಸಂಪುಟದ ಅವರ ಬಣದ ಸಚಿವರ ಒತ್ತಡ ಕಾರಣವಿರಬಹುದು. ಆದರೆ ಇದು ಅವರ ಘನತೆಗೆ ಕುಂದು ತರುವಂತಹುದು. ಒಂದು ವೇಳೆ ಅವರು ಒಪ್ಪಂದದಂತೆ ಅಧಿಕಾರ ಹಸ್ತಾಂತರ ಮಾಡಲು ನಿರಾಕರಿಸಿ ಮುಂದುವರಿದಿದ್ದರೆ, ಅದು ಹಿಂದೆ 20–20 ಸರ್ಕಾರದಲ್ಲಿ ಅಧಿಕಾರ ಹಸ್ತಾಂತರ ಮಾಡಲು ನಿರಾಕರಿಸಿ ಮಾತು ತಪ್ಪಿದ ಕುಮಾರಸ್ವಾಮಿಯವರಂತೆ ಕಳಂಕವಾಗುತ್ತಿತ್ತು. ಅದು ಈಗ ತಪ್ಪಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸರಳತೆ ಜೀವನವೂ ಸಾಧನೆಯೇ!

ನಮ್ಮ ಜೀವನ ಪದ್ಧತಿ ಹೇಗಿರಬೇಕು ಎಂಬ ಬಗ್ಗೆ ನಮಗೆ ತಿಳಿದಿಲ್ಲ. ಇಂದು ಬಾಹ್ಯಾಡಂಬರಕ್ಕೆ ಮನ ಸೋಲುತ್ತಿರುವ ನಾವು ನಮ್ಮ ಜೀವನ ಹೇಗಿರಬೇಕು ಎಂಬುದನ್ನೇ ಮರೆಯುತ್ತಿದ್ದೇವೆ. ಇತ್ತೀಚೆಗೆ ಮನೆಗಳಲ್ಲಿ ಖುದ್ದು ತಯಾರಿಸಿದ ಆಹಾರಕ್ಕೆ ಬದಲಾಗಿ ಹೊರಗಿನಿಂದ ತರಿಸಿ ತಿನ್ನುವ ಆಹಾರ ಮೂಲಕ ನಾವು ಭಿನ್ನರು ಎಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಈಗಲೂ ಸ್ವಲ್ಪ ವಯಸ್ಸಾದವರು ಯಾವುದೇ ಕಾರಣಕ್ಕೂ ಈ ರೀತಿ ಹೊರಗಿನಿಂದ ತರಿಸಿದ ಆಹಾರವನ್ನು ಇಷ್ಟಪಡುವುದಿಲ್ಲ. ಹಾಗೆಯೇ ಅವರು ವೈಭವದ ಜೀವನವನ್ನೂ ಇಷ್ಟಪಡುವುದಿಲ್ಲ. ಆ ದೇವರು ನಮಗೆ ಎಲ್ಲವನ್ನೂ ಕೊಟ್ಟಿರಬಹುದು, ಆದರೆ ಹಾಗೆಂದು ಆಡಂಬರದ ಜೀವನ ಸೂಕ್ತವಲ್ಲ ಎಂದೇ ಅವರು ಹೇಳುತ್ತಾರೆ.



> ❝ ನಮಗೆ ಪ್ರಾಮಾಣಿಕ ಹಾಗೂ ಸರಳ ಜೀವನ ನಡೆಸಿದ ಮತ್ತೊಬ್ಬ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ನೆನಪಾಗುತ್ತಾರೆ. ಅವರು ಪ್ರಧಾನಿಯಾಗಿದ್ದಾಗ ತಮ್ಮ ಮಗ ಕಾರು ಬೇಕೆಂದು ಕೇಳಿದಾಗ ಅವರು ಸಾಲಕ್ಕಾಗಿ ಬ್ಯಾಂಕಿಗೆ ಅರ್ಜಿ ಸಲ್ಲಿಸಿದ್ದರು. ವಿಪರ್ಯಾಸ ಎಂದರೆ ಆ ರೀತಿ ಪಡೆದ ಸಾಲ ಅವರು ನಿಧನರಾದಾಗಲೂ ಪೂರ್ಣವಾಗಿ ತೀರಿರಲಿಲ್ಲ. ಅವರು ಅಧಿಕಾರದಲ್ಲಿ ಇದ್ದಾಗಲೂ ಸರ್ಕಾರಿ ಕಾರನ್ನು ವೈಯಕ್ತಿಕ ಕೆಲಸಕ್ಕೆ ಬಳಸುವುದಿಲ್ಲ ಎಂದು ತೀರ್ಮಾನಿಸಿ, ಅದರಂತೆ ನಡೆದವರು. ಹಾಗಾಗಿ ಅವರು 1965 ರ ಯುದ್ಧದ ಸಮಯದಲ್ಲಿ ದೇಶದ ಜನರಿಗೆ ವಾರದಲ್ಲಿ ಒಂದು ಹೊತ್ತು ಊಟವನ್ನು ಬಿಡಿ ಎಂದು ಕರೆ ನೀಡಿದಾಗ ದೊಡ್ಡ ಸಂಖ್ಯೆಯಲ್ಲಿ ಜನರು ಸ್ಪಂದಿಸಿದ್ದರು. ಅವರು ಕೇವಲ ಜನರಿಗೆ ಕರೆ ನೀಡಲಿಲ್ಲ. ತಾವೂ ಸಹಾ ಪ್ರತಿ ಸೋಮವಾರ ರಾತ್ರಿ ಆಹಾರ ಬಿಟ್ಟಿದ್ದರು. ಇವರನ್ನು ಇಂದಿಗೂ ದೇಶ ನೆನಪಿಸಿಕೊಳ್ಳುತ್ತದೆ.

ಇತ್ತೀಚೆಗೆ ಭೇಟಿಯಾದ ಒಬ್ಬರು ಅವರ ತಂದೆಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡ ವಿಷಯ ಎಂದರೆ, ನಮ್ಮ ತಂದೆಗೆ ನಾವು ಮೂರು ಮಕ್ಕಳು. ದೇವರ ದಯೆದಿಂದ ನಾವೆಲ್ಲಾ ಚೆನ್ನಾಗಿಯೇ ಇದ್ದೇವೆ. ನಮ್ಮ ತಂದೆ ನಮ್ಮ ಈ ಮೂರೂ ಮಕ್ಕಳ ಮನೆಗಳಲ್ಲೂ ಕೆಲವು ದಿನ ಇದ್ದು ಹೋಗುತ್ತಾರೆ. ಆದರೆ ಅವರಿಗೆ ಇಷ್ಟವಾಗುವುದು ಸರಳ ಜೀವನ. ಹಾಗಾಗಿ ವೈಭವದ ಜೀವನದ ಮನೆಯಲ್ಲಿ ಅವರು ಹೆಚ್ಚು ದಿನ ಇರಲು ಇಷ್ಟಪಡುವುದಿಲ್ಲ ಎಂದರು. ಹಾಗಾದರೆ ಸರಳ ಜೀವನಕ್ಕೆ ಅವರು ಅನುಸರಿಸುವ ಕ್ರಮ ಯಾವುದು ಎಂದು ಕೇಳಿದರೆ, ಅವರದ್ದು ಶಿಸ್ತುಬದ್ಧ ಜೀವನ. ಎಂದಿಗೂ ಒಂದು ತುತ್ತನ್ನೂ ಹೆಚ್ಚಾಗಿ ತಿಂದವರಲ್ಲ. ತಮಗೆ ಅಗತ್ಯ ಎಷ್ಟೋ ಅಷ್ಟನ್ನೇ ಅವರು ತಿನ್ನುವುದು. ಅದು ಎಷ್ಟೇ ರುಚಿ ಇರಲಿ, ಅವರ ಕೋಟಾ ಮುಗಿದ ನಂತರ ಸ್ವಲ್ಪವನ್ನೂ ಹೆಚ್ಚಾಗಿ ಸೇವಿಸುವುದಿಲ್ಲ. ಈಗಲು ಅವರು ಎಂದಿಗೂ ನಿಂತು ನೀರು ಕುಡಿಯುವುದಿಲ್ಲ. ಕೇಳಿದರೆ ಅದು ಆರೋಗ್ಯ ಸೂತ್ರ ಎನ್ನುತ್ತಾರೆ. ತಿನ್ನುವಾಗ, ಕುಡಿಯುವಾಗಲೂ ನಾವು ಧಾವಂತ ತೋರಿಸಬಾರದು. ಅನ್ನ ಲಕ್ಷ್ಮಿ ಇದ್ದ ಹಾಗೆ. ಅದನ್ನು ಅಸಡ್ಡೆ ಮಾಡಬಾರದು ಎನ್ನುತ್ತಾರೆ. ಅವರು ದಿನಕ್ಕೆ ಐದಾರು ಗಂಟೆ ಮಾತ್ರ ನಿದ್ದೆ ಮಾಡುತ್ತಾರೆ. ಎಚ್ಚರವಾದ ಮೇಲೆ ಅವರು ಮಲಗುವುದಿಲ್ಲ. ಈಗಲೂ ಮಲಗಲು ಅವರು ಆಧುನಿಕ ಹಾಸಿಗೆ ಉಪಯೋಗಿಸುವುದಿಲ್ಲ. ಅವರಿಗೆ ಹತ್ತಿಯ ಹಾಸಿಗೆ, ದಿಂಬು ಮಾತ್ರ ಒಗ್ಗುತ್ತದೆ. ಹೀಗೆ ಹಲವು ವಿಷಯಗಳನ್ನು ಅವರ ತಂದೆಯ ಬಗ್ಗೆ ಹೇಳಿದರು. ತಂದೆಗೆ ಈಗ ವಯಸ್ಸು 90 ದಾಟಿದೆ. ಆದರೂ ಕಣ್ಣು, ಕಿವಿ ಚೆನ್ನಾಗಿಯೇ ಕೆಲಸ ಮಾಡುತ್ತದೆ. ನೇರವಾಗಿ ನಿಲ್ಲುವುದು, ನಡೆಯುವುದನ್ನು ಮಾಡುತ್ತಾರೆ. ಅವರು ಎಂದೂ ಯಾವುದನ್ನೂ ಅಳತೆ ಮೀರಿ ಉಪಯೋಗಿಸುವುದಿಲ್ಲ ಎಂದಾಗ ಅದು ನಿಜಕ್ಕೂ ಸರಿ ಎನ್ನಿಸಿತು. ನಮಗೆ ನಮ್ಮ ದೇಹ ನಾವು ಹೇಳಿದಂತೆ ಕೇಳಬೇಕು ಎನ್ನುವ ಹಾಗೆ ನಮ್ಮ ನಡವಳಿಕೆ ಇರಬೇಕು. ದೇಹ ಹೇಳಿದಂತೆ, ಅದು ಬಯಸಿದಂತೆ ನಾವಿರಬಾರದು, ಅದು ನಾವು ಹೇಳಿದಂತೆ ಕೇಳಬೇಕು ಎಂದರೆ ಅದನ್ನು ನಮ್ಮ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಆದರೆ ಇತ್ತೀಚೆಗೆ ನಮ್ಮ ಸಮಾಜದಲ್ಲಿ ಹಣದ ಹಪಾಹಪಿ ಎಲ್ಲೆಡೆಯಲ್ಲೂ ಕಾಣಸಿಗುತ್ತದೆ. ಇತ್ತೀಚೆಗೆ ಒಬ್ಬ ಹಿರಿಯ ರಾಜಕಾರಿಣಿಯವರು ಹೇಳಿದ ಮಾತನ್ನು ನಾವು ವಿಶೇಷವಾಗಿ ಗಮನಿಸಬೇಕು. ಇಂದು ರಾಜಕಾರಣದಲ್ಲಿ ಅಕ್ರಮವಾಗಿ ಹಣ ಸಂಪಾದನೆ ಮಾಡಿದವರೇ ವಿಜೃಂಭಿಸುತ್ತಿದ್ದಾರೆ. ಒಂದು ಚುನಾವಣೆ ಎಂದರೆ ನಲವತ್ತು ಐವತ್ತು ಕೋಟಿ ಹಣ ಖರ್ಚು ಮಾಡಬೇಕಾಗುತ್ತದೆ. ಇದರಿಂದಾಗಿ ಇಂದು ಪ್ರಾಮಾಣಿಕರಾಗಿರುವವರು ರಾಜಕಾರಣಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಇಂದು ಚುನಾವಣೆಗೆ ನಿಲ್ಲುವವರು ಈ ರಿಯಲ್ ಎಸ್ಟೇಟ್ ಉದ್ಯಮದವರೇ ಆಗಿದ್ದಾರೆ. ಅವರು ಕಷ್ಟಪಟ್ಟು ಹಣ ಗಳಿಸಿರುವುದಿಲ್ಲ. ಹಾಗಾಗಿ ಮನಬಂದಂತೆ ಖರ್ಚು ಮಾಡುತ್ತಾರೆ. ಈ ಕಾರಣದಿಂದಾಗಿ ನಮ್ಮಂತಹವರು ಇನ್ನು ಮುಂದೆ ರಾಜಕೀಯದಿಂದ ವಿರಮಿಸುವುದು ಅನಿವಾರ್ಯ ಎಂಬುದು ಅವರ ಮಾತು.

ಇದರ ಅರ್ಥವೂ ಅದೇ ಆಗಿದೆ. ಕಷ್ಟಪಟ್ಟು ಸಂಪಾದಿಸದಿರುವುದು ನಮ್ಮನ್ನು ತಪ್ಪು ದಾರಿಗೆ ಎಳೆಯುತ್ತದೆ. ನಮ್ಮ ನೆಮ್ಮದಿಯನ್ನು ಕಸಿದುಕೊಳ್ಳುತ್ತದೆ. ಒಂದು ರೀತಿ ಜೀವ ಭಯದಿಂದ ಬದುಕಬೇಕಾಗುತ್ತದೆ. ಇಂದು ನಾವು ಕೇಳುವ ಬಹಳಷ್ಟು ಕೊಲೆ–ಸುಲಿಗೆಗಳ ಪ್ರಕರಣದಲ್ಲಿ ಹೀಗೆ ಅಡ್ಡದಾರಿಯಲ್ಲಿ ಹಣ ಸಂಪಾದಿಸಿರುವವರೇ ಹೆಚ್ಚಾಗಿ ಕಂಡುಬರುತ್ತಾರೆ. ಹಾಗಾದರೆ ನಾವು ನೆಮ್ಮದಿಯ ಜೀವನಕ್ಕೆ ಹಣ ಅಷ್ಟೊಂದು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆಯೇ ಎಂಬ ಪ್ರಶ್ನೆ ಮೂಡುತ್ತದೆ.

ಹಿಂದೆ ಹೇಳುತ್ತಿದ್ದ ಒಂದು ಮಾತು ಎಂದರೆ, ನಮ್ಮ ರಾಷ್ಟ್ರಧ್ವಜದಲ್ಲಿರುವ ಬಿಳಿ ಬಣ್ಣ ನಮ್ಮ ಜೀವನಕ್ಕೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ. ನಮ್ಮ ಜೀವನ ಶುದ್ಧ ಬಿಳಿ ವಸ್ತ್ರದಂತೆ ಇರಬೇಕು. ಅದರ ಮೇಲೆ ಒಂದು ಕಪ್ಪುಚುಕ್ಕೆ ಬಿದ್ದರೆ, ಆಗ ಜನರ ಗಮನ ಆ ಕಪ್ಪುಚುಕ್ಕೆಯ ಕಡೆಗೆ ಹೋಗುತ್ತದೆಯೇ ವಿನಃ, ಉಳಿದ ಭಾಗ ಶುಭ್ರವಾಗಿಯೇ ಇದೆಯಲ್ಲ ಎಂಬ ಕಡೆಗಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು.

ನಮಗೆ ಇತ್ತೀಚೆಗೆ ರಾಜಕಾರಣಿಗಳೆಲ್ಲಾ ಸ್ಥಿತಿವಂತರೇ ಎಂಬಂತೆ ಕಂಡುಬರುತ್ತಾರೆ. ಆದರೆ ನಮ್ಮ ನಡುವೆ ಇಂದಿಗೂ ಹಲವು ಆದರ್ಶವಾದಿ ರಾಜಕಾರಿಣಿಗಳು ಉದಾಹರಣೆಯ ರೀತಿಯಲ್ಲಿ ಕಂಡುಬರುತ್ತಾರೆ. ಇತ್ತೀಚೆಗೆ ಕೆಲವೆಡೆ ಕೇಳಿಬಂದಿದ್ದು ಭಾರತದಲ್ಲಿ ಎರಡು ಬಾರಿ ಪ್ರಧಾನಿಯಾಗಿ (ಪ್ರಭಾರ) ಕೆಲಸ ನಿರ್ವಹಿಸಿದ ಗುಲ್ಜಾರಿ ಲಾಲ್ ನಂದಾ ಅವರ ಆದರ್ಶ ಜೀವನದ ಬಗ್ಗೆ. ಅವರು ತಮ್ಮ ಜೀವನದ ಕೊನೆಯ ದಿನಗಳಲ್ಲಿ ಕೇವಲ ಐದು ನೂರು ರೂಪಾಯಿಗಳ ಪಿಂಚಣಿಯಲ್ಲಿ ಕಳೆದರು ಎಂಬ ಸುದ್ದಿ ಒಂದು ರೀತಿ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

ಇಂದು ಒಂದು ಸಲ ಚುನಾಯಿತನಾದ ಒಬ್ಬ ಗ್ರಾಮ ಪಂಚಾಯತಿ ಸದಸ್ಯನೂ ಗತ್ತಿನ ಜೀವನ ಮಾಡುತ್ತಿರುವಾಗ, ದೇಶದ ಒಬ್ಬ ಪ್ರಧಾನಮಂತ್ರಿಯಾಗಿದ್ದವರು ಹೀಗೆ ಅಲ್ಪ ಹಣದಲ್ಲಿ ಜೀವನ ಮಾಡಿದರು ಎಂಬುದು ವಿಸ್ಮಯ ಎನ್ನಿಸುತ್ತದೆ. ಅವರು ಕೊನೆಯ ಹಂತದಲ್ಲಿ ಜೀವನ ಮಾಡುತ್ತಿದ್ದುದು ದೆಹಲಿಯ ಒಂದು ಪುಟ್ಟ ಮನೆಯಲ್ಲಿ. ಅದರ ಬಾಡಿಗೆ ತಿಂಗಳಿಗೆ ಮೂರು ನೂರು ರೂಪಾಯಿ. ಉಳಿದ ಎರಡು ನೂರು ರೂಪಾಯಿಯಲ್ಲಿ ಅವರು ಜೀವನ ಮಾಡುತ್ತಿದ್ದರು. ಒಂದು ಸಂದರ್ಭದಲ್ಲಿ ಅವರಿಗೆ ಕೆಲ ತಿಂಗಳು ಮನೆಯ ಬಾಡಿಗೆ ಕಟ್ಟಲಾಗಲಿಲ್ಲ. ಇದರಿಂದ ಕುಪಿತನಾದ ಮನೆಯ ಮಾಲಿಕ ಮನೆ ಖಾಲಿ ಮಾಡಲು ಹೇಳಿದ. ಆಗ ನಂದಾ ಅವರಿಗೆ 92 ವರ್ಷ ವಯಸ್ಸು. ಅವರು ಮನೆಯ ಮಾಲಿಕನಿಗೆ ಒಂದು ವಾರ ಸಮಯ ಕೊಡು. ಎಲ್ಲಾದರೂ ದುಡಿದು ತೀರಿಸುತ್ತೇನೆ ಎಂದರು. ಪಕ್ಕದ ಮನೆಯವರು ಸಹಾಯಕ್ಕೆ ಬಂದಾಗ ಅದನ್ನು ನಯವಾಗಿ ನಿರಾಕರಿಸಿದರು. ಅವರು ಹೇಳಿದ್ದು, ನಾನು ಈ ದೇಶದ ಪ್ರಧಾನಿಯಾಗಿದ್ದವನು, ನಾನು ನನ್ನ ಸ್ವಾಭಿಮಾನ ಮಾರಿಕೊಳ್ಳಲಾರೆ ಎಂದು. ಈ ಪ್ರಕರಣ ಪತ್ರಿಕೆಯಲ್ಲಿ ಪ್ರಕಟವಾದಾಗಲೇ ಅನೇಕರಿಗೆ ಗೊತ್ತಾಗಿದ್ದು, ನಂದಾ ಅವರು ಹೀಗೆ ಬದುಕುತ್ತಿದ್ದಾರೆ ಎಂದು. ನಂತರ ಸರ್ಕಾರ ಅವರಿಗೆ ಸಾಕಷ್ಟು ಹಣಕಾಸು ಹಾಗೂ ಇತರೆ ಸವಲತ್ತು ಕೊಡುತ್ತೇವೆ ಎಂದರೂ ಕೇಳದ ಸ್ವಾಭಿಮಾನಿ ಅವರು. ಕನಿಷ್ಠ ನಿಮ್ಮ ಪಿಂಚಣಿ ಹಣವನ್ನು ಐದು ಸಾವಿರ ರೂಪಾಯಿಗೆ ಏರಿಸುತ್ತೇವೆ ಎಂದಾಗ ಅವರು ಹೇಳಿದ್ದು, ನನಗೆ ಐದು ನೂರು ರೂಪಾಯಿಯೇ ಸಾಕು. ನಿಮಗೆ ಕೊಡಬೇಕೆಂದಿದ್ದರೆ ಆ ಹೆಚ್ಚುವರಿ ಹಣವನ್ನು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡಿ ಎಂದು. ಹಾಗೆ ಅವರಿಗೆ ಹೆಚ್ಚಿನ ಪಿಂಚಣಿಯನ್ನಾದರೂ ಕೊಟ್ಟು ಸಹಕರಿಸಬೇಕೆಂದಿದ್ದವರು ಆಗ ದೇಶದ ಪ್ರಧಾನಿಯವರಾಗಿದ್ದ ಪಿ.ವಿ ನರಸಿಂಹರಾವ್ ಅವರು. ಅವರೂ ಸಹ ಒಬ್ಬ ಆದರ್ಶವಾದಿ. ಅವರು ಪ್ರಧಾನಿ ಹುದ್ದೆ ಬಿಟ್ಟ ನಂತರ ದೆಹಲಿಯ ಒಂದು ಸಾಧಾರಣ ಮನೆಯಲ್ಲಿ ವಾಸಿಸುತ್ತಿದ್ದರು. ಅವರ ಆಸ್ತಿ ಎಂದರೆ ಪುಸ್ತಕಗಳು. ಅದನ್ನು ಓದುತ್ತಾ ಅವರು ಕಾಲಕಳೆದಿದ್ದರು. ಅಂತಹವರು ನಂದಾ ಅವರ ಸಹಾಯಕ್ಕೆ ಬಂದಿದ್ದು ಭಾರತೀಯ ಸಂಸ್ಕೃತಿಯ ದರ್ಶನವಾಗುವಂತೆ ಕಂಡುಬರುತ್ತದೆ.

ನಮಗೆ ಪ್ರಾಮಾಣಿಕ ಹಾಗೂ ಸರಳ ಜೀವನ ನಡೆಸಿದ ಮತ್ತೊಬ್ಬ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ನೆನಪಾಗುತ್ತಾರೆ. ಅವರು ಪ್ರಧಾನಿಯಾಗಿದ್ದಾಗ ತಮ್ಮ ಮಗ ಕಾರು ಬೇಕೆಂದು ಕೇಳಿದಾಗ ಅವರು ಸಾಲಕ್ಕಾಗಿ ಬ್ಯಾಂಕಿಗೆ ಅರ್ಜಿ ಸಲ್ಲಿಸಿದ್ದರು. ವಿಪರ್ಯಾಸ ಎಂದರೆ ಆ ರೀತಿ ಪಡೆದ ಸಾಲ ಅವರು ನಿಧನರಾದಾಗಲೂ ಪೂರ್ಣವಾಗಿ ತೀರಿರಲಿಲ್ಲ. ಅವರು ಅಧಿಕಾರದಲ್ಲಿ ಇದ್ದಾಗಲೂ ಸರ್ಕಾರಿ ಕಾರನ್ನು ವೈಯಕ್ತಿಕ ಕೆಲಸಕ್ಕೆ ಬಳಸುವುದಿಲ್ಲ ಎಂದು ತೀರ್ಮಾನಿಸಿ, ಅದರಂತೆ ನಡೆದವರು. ಹಾಗಾಗಿ ಅವರು 1965ರ ಯುದ್ಧದ ಸಮಯದಲ್ಲಿ ದೇಶದ ಜನರಿಗೆ ವಾರದಲ್ಲಿ ಒಂದು ಹೊತ್ತು ಊಟವನ್ನು ಬಿಡಿ ಎಂದು ಕರೆ ನೀಡಿದಾಗ ದೊಡ್ಡ ಸಂಖ್ಯೆಯಲ್ಲಿ ಜನರು ಸ್ಪಂದಿಸಿದ್ದರು. ಅವರು ಕೇವಲ ಜನರಿಗೆ ಕರೆ ನೀಡಲಿಲ್ಲ. ತಾವೂ ಸಹ ಪ್ರತಿ ಸೋಮವಾರ ರಾತ್ರಿ ಆಹಾರ ಬಿಟ್ಟಿದ್ದರು. ಇವರನ್ನು ಇಂದಿಗೂ ದೇಶ ನೆನಪಿಸಿಕೊಳ್ಳುತ್ತದೆ.

ನಮ್ಮ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕಡಿದಾಳು ಮಂಜಪ್ಪ ಅವರ ಬಗ್ಗೆ ಒಂದು ಘಟನೆಯನ್ನು ಉಲ್ಲೇಖಿಸಬಹುದು. ಅವರ ಮದುವೆಗೆ ಹೆಣ್ಣು ನೋಡಲು ಹೋದಾಗ ಹೆಣ್ಣಿನ ತಂದೆ ಮುಖ್ಯಮಂತ್ರಿಗೆ ಇಷ್ಟೊಂದು ಸರಳ ಮನೆಯೇ? ಎಂದು ಬೆರಗಾಗಿದ್ದರಂತೆ. ಅವರು 'ತಮ್ಮ ಮರಣದ ನಂತರ ತಮ್ಮ ದೇಹವನ್ನು ಸರ್ಕಾರಿ ಆಸ್ಪತ್ರೆಗೆ ದಾನ ಮಾಡಬೇಕು. ಅದರಿಂದ ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೆ ಅವಕಾಶವಾಗಲಿ' ಎಂದು ಮರಣ ಶಾಸನವನ್ನು ಬರೆಸಿದ್ದರಂತೆ.

ಅದೇ ರೀತಿ ನಮ್ಮ ರಾಜ್ಯದ ಮತ್ತೊಬ್ಬ ಮುಖ್ಯಮಂತ್ರಿ ಎಸ್ ನಿಜಲಿಂಗಪ್ಪನವರು ಕೊನೆಗೆ ತಮ್ಮ ಹಳ್ಳಿಯ ಮನೆಯಲ್ಲಿ ವಾಸಿಸುತ್ತಿದ್ದರು. ಅವರು ಹೇಳುತ್ತಿದ್ದುದು 'ಅಧಿಕಾರ ಶಾಶ್ವತವಲ್ಲ. ನಂಬಿಕೆ ಶಾಶ್ವತ ಎಂದು. ಕರ್ನಾಟಕದ ಶಿಕ್ಷಣ ಸಚಿವರಾಗಿದ್ದ ಎಂ ಎಂ ಸೋಗಿಯವರು ತಮ್ಮ ಮಕ್ಕಳನ್ನು ಸರ್ಕಾರಿ ಕನ್ನಡ ಶಾಲೆಯಲ್ಲಿ ಓದಿಸುತ್ತಿದ್ದರು. 'ನಾನು ಮಾಡಿದ ಕಾನೂನನ್ನು ನಾನು ಮೊದಲು ಪಾಲಿಸಬೇಕು' ಎಂದು ಅವರು ಹೇಳುತ್ತಿದ್ದರು. ಅವರು ನಿವೃತ್ತಿಯ ನಂತರ ಸರ್ಕಾರಿ ಬಸ್‌ನಲ್ಲಿ ಓಡಾಡುತ್ತಿದ್ದರಂತೆ.

ಮೈಸೂರು ಸಂಸ್ಥಾನದ ದಿವಾನರಾಗಿದ್ದ ಟಿ ಎಂ ಸಿದ್ದಲಿಂಗಯ್ಯನವರು ತಮ್ಮ ಕೊನೆಯ ದಿನಗಳಲ್ಲಿ ವಿದ್ಯುತ್ ಬಿಲ್ ಕಟ್ಟಲಾಗದೆ ಮೇಣದ ಬತ್ತಿಯಲ್ಲಿ ಓದುತ್ತಿದ್ದರಂತೆ. ಪಶ್ಚಿಮ ಬಂಗಾಳದ ಜನಪ್ರಿಯ ಮುಖ್ಯಮಂತ್ರಿಯಾಗಿದ್ದ ಜ್ಯೋತಿ ಬಸು ಸರ್ಕಾರದ ಎರಡು ಕೊಠಡಿಯ ಸಾಮಾನ್ಯ ಮನೆಯಲ್ಲಿ ವಾಸಿಸುತ್ತಿದ್ದರು. ಅವರೂ ಸಹ ತಮ್ಮ ನಿಧನದ ನಂತರ ತಮ್ಮ ದೇಹವನ್ನು ವೈದ್ಯಕೀಯ ಕಾಲೇಜಿಗೆ ದಾನ ಮಾಡಿದ್ದರು.

ಇಂತಹ ಹತ್ತಾರು, ನೂರಾರು ಉದಾಹರಣೆಗಳು ನಮಗೆ ಕಂಡುಬರುತ್ತವೆ. ಅಂತಹವರನ್ನು ಈ ದೇಶ ಗೌರವದಿಂದ ಸ್ಮರಿಸಿಕೊಳ್ಳುತ್ತದೆ. ನಾನು ಹೆಚ್ಚು ಹಣ ಸಂಪಾದಿಸದೆ, ನಾನು ವೈಭವದ ಜೀವನ ಮಾಡಿದೆ ಎಂಬುವವರನ್ನು ಈ ದೇಶ ಎಂದಿಗೂ ನೆನಪಿಸಿಕೊಳ್ಳುವುದಿಲ್ಲ. ಸರಳತೆ ಮೆರೆದು, ಸರಳವಾಗಿ ಆದರ್ಶದ ಬದುಕು ಬದುಕಿದ ಇಂತಹವರನ್ನು ನಾವು ಪ್ರಾತಃಸ್ಮರಣೀಯರು ಎಂಬಂತೆ ನೆನಪಿಸಿಕೊಳ್ಳುತ್ತೇವೆ. ಸರಳವಾಗಿದ್ದರೂ ಹೀಗೆ ಆದರ್ಶದ ಬದುಕು ಬದುಕಬಹುದು. ಇಂತಹವರನ್ನು ನಮ್ಮ ಸಮಾಜ ಸದಾ ನೆನಪಿಸಿಕೊಳ್ಳಬೇಕು. ಅವರ ಜೀವನ ನಮಗೆ ಆದರ್ಶವಾಗಬೇಕು.

ಬೆಂಗಳೂರಿನಲ್ಲಿ ಮಳೆಗೆ ಆಟೋ ಚಾಲಕ ಬಲಿ

ಬೆಂಗಳೂರು, ಮೇ 29: ಇತ್ತೀಚೆಗೆ ಧಾರಾಕಾರ ಮಳೆಗೆ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಜನರು ಸಾವನ್ನಪ್ಪಿದ್ದರು. ಇದೀಗ ನಗರದಲ್ಲಿ ಮತ್ತೊಂದು ದುರಂತ ಸಂಭವಿಸಿದೆ. ಇಂದು ಸುರಿದ ಭಾರೀ ಮಳೆಗೆ ಕ್ಲಬ್ ಕಾಂಪೌಂಡ್ ಕುಸಿದು ಆಟೋ ಚಾಲಕ ಸಾವನ್ನಪ್ಪಿರುವಂತಹ ಘಟನೆ ವಿಜಯನಗರದಲ್ಲಿ ನಡೆದಿದೆ. ಗಂಗೊಂಡನಹಳ್ಳಿಯ ನಿವಾಸಿ ಶಿವಬೋರಯ್ಯ(56) ಮೃತ ಆಟೋ ಚಾಲಕ. ಸದ್ಯ ಶಿವಬೋರಯ್ಯ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಜೂನ್ 1 ರಿಂದ ವಿದ್ಯಾರ್ಥಿಗಳ ಬಸ್ ಪಾಸ್ ವಿತರಣೆ

ಮೈಸೂರು: ಕೆಎಸ್‌ಆರ್‌ಟಿಸಿ ಮೈಸೂರು ನಗರ ಸಾರಿಗೆ ವಿಭಾಗದಿಂದ 2026–27ನೇ ಸಾಲಿನ ಶಾಲಾ–ಕಾಲೇಜು ವಿದ್ಯಾರ್ಥಿಗಳ ರಿಯಾಯಿತಿ ದರದ ಬಸ್ ಪಾಸ್‌ಗಳನ್ನು ಜೂನ್ 1ರಿಂದ ವಿತರಿಸಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್ https://sevasinnduservices.kamataka.gov.in/ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಸ್ವೀಕೃತಿ ಪ್ರತಿಯೊಂದಿಗೆ ಸಂಬಂಧಪಟ್ಟ ದಾಖಲೆಗಳನ್ನು ತಮ್ಮ ತಮ್ಮ ಶಾಲಾ, ಕಾಲೇಜುಗಳಿಗೆ ಸಲ್ಲಿಸುವ ಮೂಲಕ ಪಾಸ್ ಪಡೆಯಬಹುದಾಗಿದೆ ಎಂದು ಮೈಸೂರು ನಗರ ಸಾರಿಗೆ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಲಿತ ಮುಖ್ಯಮಂತ್ರಿ ಆಯ್ಕೆಗೆ ಆಗ್ರಹಿಸಿ ದಲಿತಪರ ಸಂಘಟನೆಗಳ ಪ್ರತಿಭಟನೆ



ಪುರಭವನ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 29(ವಿವಿಹೆಚ್)– ರಾಜ್ಯದಲ್ಲಿ ಕಾಂಗ್ರೆಸ್ ದಲಿತ ಮುಖ್ಯಮಂತ್ರಿ ಆಯ್ಕೆ ಮಾಡಬೇಕೆಂದು ಒತ್ತಾಯಿಸಿ, ದಲಿತ ಸಂಘಟನೆಗಳ ಒಕ್ಕೂಟದಿಂದ ನಗರದ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ವಕೀಲ ಹಾಗೂ ಕಾಂಗ್ರೆಸ್ ಮುಖಂಡ ಎ.ಆರ್.ಕಾಂತರಾಜು ಮಾತನಾಡಿ, ನಾಳಿನ ಶಾಸಕಾಂಗ ಸಭೆಯಲ್ಲಿ ದಲಿತ ಸಿಎಂ ಪ್ರಕಟಿಸಬೇಕು ಎಂದು ಆಗ್ರಹಿಸಿದರು.

ಕಳೆದ 75 ವರ್ಷದಲ್ಲಿ ದೇಶದ ಉದ್ದಗಲಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರಲು ದಲಿತರ ಮತಬ್ಯಾಂಕ್ ಕಾರಣ. ದಲಿತರಿಗೆ ಅಧಿಕಾರ ಕೊಡದಿದ್ದರೆ ದಲಿತರನ್ನು ಹೊರಗಿಟ್ಟು ಸರ್ಕಾರ ಮಾಡಿ ಎಂದು ಸವಾಲೆಸೆದರು.

ದೇಶಕ್ಕೆ ಸೈನಿಕರು ಹೇಗೋ, ಕಾಂಗ್ರೆಸ್ ಪಕ್ಷಕ್ಕೆ ದಲಿತರು ಹಾಗೆ. ಮೊದಲು ಸಿಎಂ ಖುರ್ಚಿ ಖಾಲಿ ಇಲ್ಲ ಎಂದು ಹೇಳುತ್ತಿದ್ದರು. ಈಗ ಖುರ್ಚಿ ಖಾಲಿ ಇದೆ. ಇಂತಹ ಅವಕಾಶದಲ್ಲಿ ಕಾಂಗ್ರೆಸ್ ದಲಿತರಿಗೆ ಮುಖ್ಯಮಂತ್ರಿ ಮಾಡದಿದ್ದರೆ ತೀವ್ರ ಹೋರಾಟ ಮಾಡಲಾಗುವುದು ಎಂದರು.

ದಲಿತ ಮಕ್ಕಳನ್ನು ಮತ ಭಿಕ್ಷೆಗಾಗಿ ಕಳುಹಿಸುತ್ತಿದ್ದೀರಿ. ಗೆದ್ದ ಬಳಿಕ ಅವರನ್ನು ಮೂಲೆಗುಂಪು ಮಾಡಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದೀರಿ. ನಾವು ಬಾಬಾ ಸಾಹೇಬರ ಸಂವಿಧಾನವನ್ನು ತಿಳಿದು ರಾಜಕೀಯ ಮಾಡುವವರು. ಅವರ ಆಶಯಗಳನ್ನು ಪೂರೈಸಲು ಯಾವುದೇ ಸ್ಥಾನಕ್ಕೂ ತೆರಳಲು ಸಿದ್ಧವಿದ್ದೇವೆ. ಕಾಂಗ್ರೆಸ್ ಇದನ್ನು ಮನಗಾಣಬೇಕು ಎಂದರು.

2018ರಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಹಿಡಿದಾಗ ಡಾ.ಜಿ.ಪರಮೇಶ್ವರ್ ರಾಜ್ಯಾಧ್ಯಕ್ಷರಾಗಿದ್ದರು. ಆಗಿದ್ದರೂ ಅವರು ಅಧಿಕಾರದಿಂದ ವಂಚಿತರಾದರು. ಈಗ 2026ರಲ್ಲಿ ಸಿದ್ದರಾಮಯ್ಯ ಅವರಿಂದ ತೆರವಾದ ಸ್ಥಾನವನ್ನು ದಲಿತರಿಗೆ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ದೇಶಾದ್ಯಂತ ದಲಿತರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೋಗಲಿದ್ದಾರೆ. ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ ಕಾಂಗ್ರೆಸ್ ಪಕ್ಷ ದಲಿತರ ಋಣ ತೀರಿಸಲಿ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಈ ವೇಳೆ ಮುಡಾ ಮಾಜಿ ಸದಸ್ಯ ಸಿ.ಜಿ. ಶಿವಕುಮಾರ್, ದಲಿತ ಮುಖಂಡರಾದ ಭರತ್ ರಾಮಸ್ವಾಮಿ, ವೆಂಕಟರಾಜ್, ನಾಗರಾಜ್, ವಕೀಲರಾದ ತಿಮ್ಮಯ್ಯ, ಗುರುರಾಜ್, ಡಾ.ಜಿ.ಪರಮೇಶ್ವರ್ ಅಭಿಮಾನಿ ಬಳಗದ ಅಧ್ಯಕ್ಷ ಮಂಜುನಾಥ್, ಮಹೇಂದ್ರ, ರವಿ ಸೇರಿದಂತೆ ದಲಿತ ಮುಖಂಡರು ಹಾಜರಿದ್ದರು.

ನಾಳೆ ಮೈಸೂರಲ್ಲಿ 30 ಜೊತೆ ನಾಡಕುಸ್ತಿ ಪಂದ್ಯಾವಳಿ

ಮೈಸೂರು, ಮೇ29(ಜಿವಿ)–ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ ದಲಿತ ಸಂಘರ್ಷ ಸಮಿತಿ ವತಿಯಿಂದ ನಗರದ ದಸರಾ ವಸ್ತು ಪ್ರದರ್ಶನ ಆವರಣದ ಡಿ. ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಮೇ 31ರ ಮಧ್ಯಾಹ್ನ 3 ಗಂಟೆಗೆ ಅಶೋಕಪುರಂ ಫ್ರೆಂಡ್ಸ್ ಬಳಗದ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ 30 ಜೊತೆ ನಾಡಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಅಶೋಕಪುರಂಗೂ ಕುಸ್ತಿ ಚಟುವಟಿಕೆಗೂ ದೊಡ್ಡ ಸಂಬಂಧವಿದೆ. ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಕುಡಿತ, ಮಾದಕ ವಸ್ತು ಸೇವನೆ ಮೊದಲಾದವಕ್ಕೆ ದಾಸವಾಗುತ್ತಿದೆ. ಹೀಗಾಗಿ ಇದರಿಂದ ಇವರನ್ನು ಹೊರ ತರಲು ಕುಸ್ತಿ ಚಟುವಟಿಕೆ ಆರಂಭಿಸಲು ತಮ್ಮ ಸಂಘಟನೆ ಗಮನ ನೀಡಿದೆ. ಈ ನಿಟ್ಟಿನಲ್ಲಿ ಈ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದರು.

ಅಂದು ಕಾಂಗ್ರೆಸ್ ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನಟ ದುನಿಯಾ ವಿಜಯ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್ ಮತ್ತಿತರರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೆ.ನಂಜಪ್ಪ ಬಸವನಗುಡಿ, ಬನ್ನೂರು ರವಿ, ಅಭಿಷೇಕ್ ಅಶೋಕಪುರಂ, ಪೈಲ್ವಾನ್ ಸಿದ್ದರಾಜು, ಅಕ್ಮಲ್ ಪಾಷಾ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೆಆರ್ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗೆ ಚಾಲನೆ



ಕೃಷ್ಣರಾಜ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಮಾ 29– ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆಯಡಿ ಮೈಸೂರಿನ ಕೆ.ಆರ್.ಕ್ಷೇತ್ರದ ವಲಯ ಕಚೇರಿ ಎರಡು ಹಾಗೂ ಮೂರರ ವ್ಯಾಪ್ತಿಯ ವಾರ್ಡ್ ನಂಬರ್ 57, 59. 60, 62, 64 ಮತ್ತು 65ರಲ್ಲಿ ಸುಮಾರು 20 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಬಾಕ್ಸ್‌ಡ್ರೈನ್ ಮತ್ತು ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯರಾದ ಶಾರದಮ್ಮ ಈಶ್ವರ್, ರಮೇಶ್, ಜಯರಾಮ್ ಮುಖಂಡರಾದ ವಿಶ್ವೇಶ್ವರಯ್ಯ, ನಾಗರಾಜ್ ಬಿಲ್ಲಯ್ಯ, ಕೃಷ್ಣ ರವಿ, ಪ್ರದೀಪ್ ಕುಮಾರ್, ಮಧುಸೂದನ್, ದೀಪಕ್, ದೇವರಾಜೇಗೌಡ ರಾಘವೇಂದ್ರ, ಅಕ್ಷಯ್, ಚಂದ್ರು, ಹೇಮಂತ್, ರಾಜೇಶ್, ರವಿ, ಮಂಜು, ಸತೀಶ, ಮನೋಜ್, ರೂಪ, ರೇಣುಕಾ ಹಾಗೂ ವಲಯ ಕಚೇರಿ 2 ಮತ್ತು 3ರ ಸಹಾಯಕ ಆಯುಕ್ತರಾದ ಗಿರೀಶ್ ಮತ್ತು ಸಂದೀಪ್, ಅಭಿವೃದ್ಧಿ ಅಧಿಕಾರಿಗಳಾದ ಚೇತನ್ ಬಾಬು ಹಾಗೂ ಸತ್ಯಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಬಸವಮಾರ್ಗ ಫೌಂಡೇಶನ್‌ನಿಂದ

'ವಚನಗಳಲ್ಲಿ ವ್ಯಸನಮುಕ್ತ ಜೀವನ' ದತ್ತಿ ಉಪನ್ಯಾಸ ಕಾರ್ಯಕ್ರಮ



ಹೆಬ್ಬಾಳದ ಬಸವಮಾರ್ಗ ಫೌಂಡೇಶನ್ ಆಶ್ರಮ ಶಾಖೆಯಲ್ಲಿ ನಡೆದ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕುದೇರು ಮಠದ ಶ್ರೀ ಗುರುಶಾಂತಸ್ವಾಮಿಗಳು ಉದ್ಘಾಟಿಸಿದರು.

ಮೈಸೂರು, ಮೇ 29– ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು ಮತ್ತು ಬಸವಮಾರ್ಗ ಫೌಂಡೇಶನ್ ವತಿಯಿಂದ ಹೆಬ್ಬಾಳದ ಬಸವಮಾರ್ಗ ಫೌಂಡೇಶನ್ ಆಶ್ರಮ ಶಾಖೆಯಲ್ಲಿ ಶುಕ್ರವಾರ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಡಾ.ಪಿ. ಶಿವರಾಜು, ದುಶ್ಚಟಗಳು, ವಿವೇಚನಾ ರಹಿತ ಸಾಮಾಜಿಕ ಜಾಲತಾಣಗಳ ಬಳಕೆ, ಮತ್ತು ಮಾರ್ಗದರ್ಶನದ ಕೊರತೆಯಿಂದಾಗಿ ಯುವಕರು ಹಾದಿ ತಪ್ಪುತ್ತಿದ್ದಾರೆ ಎಂದರು.

ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯ ರೀಲ್ಸ್ ನೋಡುವುದು ಮತ್ತು ಗೇಮಿಂಗ್‌ಗೆ ಅತಿಯಾಗಿ ಸಮಯ ವ್ಯಯಿಸುವುದನ್ನು ನಿಯಂತ್ರಿಸಿ, ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಯೋಗ, ಧ್ಯಾನ ಮತ್ತು ದೈಹಿಕ ವ್ಯಾಯಾಮಗಳನ್ನು ದಿನಚರಿಯಲ್ಲಿ ಅಳವಡಿಸಿಕೊಳ್ಳುವುದರಿಂದ ಏಕಾಗ್ರತೆ ಹೆಚ್ಚುತ್ತದೆ ಮತ್ತು ದುಶ್ಚಟಗಳಿಂದ ದೂರವಿರಬಹುದು ಎಂದು ಸಲಹೆ ನೀಡಿದರು.

ಮೈಸೂರಿನ ಕುದೇರು ಮಠದ ಶ್ರೀ ಗುರುಶಾಂತಸ್ವಾಮಿಗಳು ಪ್ರವಚನ ನೀಡಿ, 12ನೇ ಶತಮಾನದ ವಚನ ಸಾಹಿತ್ಯವು ಕೇವಲ ಭಕ್ತಿಯ ಮಾರ್ಗವಲ್ಲ, ಬದಲಿಗೆ ವ್ಯಸನಮುಕ್ತ ಮತ್ತು ಮೌಲ್ಯಾಧಾರಿತ ಜೀವನಕ್ಕೆ ಬುನಾದಿಯಾಗಿದೆ. ಬಸವಣ್ಣ, ಅಲ್ಲಮಪ್ರಭು ಮುಂತಾದ ಶರಣರು ದುರಾಸೆ, ಮಾದಕತೆ ಮತ್ತು ಅನೈತಿಕ ಆಸಕ್ತಿಗಳಿಂದ ದೂರವಿದ್ದು, ಕಾಯಕ ಹಾಗೂ ದಾಸೋಹದ ಮೂಲಕ ಪರಿಶುದ್ಧ ಬದುಕು ನಡೆಸಲು ಕರೆ ನೀಡಿದ್ದಾರೆ ಎಂದರು.

ಈ ವೇಳೆ ಬಸವ ಬಳಗದ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶರಣ ದೇವರಾಜು ಪಿ.ಚಿಕ್ಕಹಳ್ಳಿ, ಬಸವ ಮಾರ್ಗ ಫೌಂಡೇಶನ್ ಸಂಸ್ಥಾಪಕ ಎಸ್. ಬಸವಣ್ಣ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 29– ಮೈಸೂರಿನ ಭಾರತೀಯ ವಿದ್ಯಾರ್ಥಿ ಸಂಘ (ಬಿವಿಎಸ್)ದ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ತಿ.ನರಸೀಪುರ ತಾಲೂಕಿನ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜೂನ್ 6 ರಂದು ತಿ.ನರಸೀಪುರ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ ಮೊ: 9945835334, 9880361209 ಮೂಲಕ ಸಂಪರ್ಕಿಸಬಹುದು.

ಸಾಮಾಜಿಕ ಜಾಲತಾಣದ ತಪ್ಪು ಮಾಹಿತಿಗಳನ್ನೇ ನಂಬಲಾಗುತ್ತಿದೆ

● ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಆತಂಕ ● ವಿದ್ಯಾರ್ಥಿಗಳು ಡಿಜಿಟಲ್ ನೆಟ್‌ವರ್ಕ್‌ಗಳನ್ನೇ ಅವಲಂಬಿಸಿದ್ದಾರೆ;ವಿಷಾದ



ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಜ್ರ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ರಾಷ್ಟ್ರೀಯ ಶೃಂಗಸಭೆಯಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಡಾ.ಶಾಲಿನಿ ಆರ್.ಅರಸ್, ಎನ್.ವಿ.ಸತ್ಯನಾರಾಯಣ, ಡಾ.ಪಿ.ವೈ. ರಾಜೇಂದ್ರ ಕುಮಾರ್, ಡಾ.ಚೌಡಪ್ಪ ಅವರ ಪರವಾಗಿ ಪತ್ನಿ ಉಷಾ, ಪ್ರೊ.ಖೈಸರ್ ಜಹನ್ ಬೇಗಂ, ಪ್ರೊ.ಮಲ್ಲಿನಾಥ ಕುಂಬಾರ್ ಅವರಿಗೆ ಡಿಜೆಎಸ್ ಎಕ್ಸಲೆನ್ಸ್ ಅವಾರ್ಡ್ ನೀಡಿ ಗೌರವಿಸಲಾಯಿತು. ಈ ವೇಳೆ ಮೈಸೂರು ವಿವಿ ಕುಲಪತಿ ಪ್ರೊಎನ್.ಕೆಲೋಕನಾಥ್, ಇತಿಹಾಸ ತಜ್ಞ ಡಾ.ವಿಕ್ರಂ ಸಂಪತ್, ವಿಭಾಗದ ಮುಖ್ಯಸ್ಥ ಡಾ.ಎನ್.ಎಸ್. ಹರಿನಾರಾಯಣ ಸೇರಿದಂತೆ ಇತರರಿದ್ದರು.

ಮೈಸೂರು, ಮೇ 29(ಎಸ್‌ಪಿಎನ್)– ಪ್ರಸ್ತುತ ನಮ್ಮ ಬೆರಳ ತುದಿಯಲ್ಲೇ ಕೋಟ್ಯಾಂತರ ಮಾಹಿತಿಗಳು ಮೊಬೈಲ್‌ನಲ್ಲಿ ಲಭ್ಯವಿದೆ. ಇದರಲ್ಲಿ ಯಾವುದು ನಿಜ, ಯಾವುದು ಸುಳ್ಳು ಎಂದು ಪತ್ತೆ ಹಚ್ಚುವುದೇ ಇಂದಿನ ಯುವಕರಿಗೆ ದೊಡ್ಡ ಸವಾಲಿನ ವಿಷಯವಾಗಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದಲ್ಲಿ ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಇನ್‌ಫರ್ಮೇಷನ್ ಅಂಡ್ ಲೈಬ್ರರಿ ಸೈನ್ಸ್ ಅಲುಮ್ನಿ ನೆಟ್‌ವರ್ಕ್ (ಮಿಲನ್) ಸಹ ಯೋಗದೊಂದಿಗೆ ವಜ್ರ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ರಾಷ್ಟ್ರೀಯ ಶೃಂಗಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಾಟ್ಸಾಪ್, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲಿ ನಿತ್ಯ ಹರಿದು ಬರುವ ತಪ್ಪು ಮಾಹಿತಿಗಳನ್ನು ಜನರು ಸುಲಭವಾಗಿ ನಂಬುತ್ತಿದ್ದಾರೆ. ಇದನ್ನು ಹೋಗಲಾಡಿಸಬೇಕಾದರೆ, ಪುಸ್ತಕಗಳಿಂದ ಮಾತ್ರ ಸಾಧ್ಯ. ಈ ಹಿಂದೆ ಮಾಹಿತಿಗಳು ಸಂಗ್ರಹಿಸಬೇಕಿದ್ದರೆ, ವಿದ್ಯಾರ್ಥಿಗಳು ವಿವಿ ಗ್ರಂಥಾಲಯಕ್ಕೆ ಎಡತಾಕುತ್ತಿದ್ದರು. ಆ ಕಾಲಕ್ಕೆ ಗ್ರಂಥಾಲಯಗಳು ಜ್ಞಾನದ ಭೌತಿಕ ದ್ವಾರಗಳಾಗಿದ್ದವು. ಇಂದು ಮೊಬೈಲ್‌ನಲ್ಲಿ ಬರುವ ಅಪಾರ ಮಾಹಿತಿಗಳು ನಂಬಲಾಗದ ವೇಗದಲ್ಲಿ ಹರಿಯುತ್ತಿರುವುದು ಬೇಸರದ ಸಂಗತಿ ಎಂದರು.

ವಿದ್ಯಾರ್ಥಿಗಳು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣದವರೆಗೂ ಡಿಜಿಟಲ್ ನೆಟ್‌ವರ್ಕ್‌ಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದಾರೆ. ಇದರಿಂದ ಪುಸ್ತಕ ಓದುವ ಸಂಸ್ಕೃತಿಯಿಂದ ವಿದ್ಯಾರ್ಥಿಗಳು ಹಿಂಮುಖರಾಗಿದ್ದು, ಈ ಕುರಿತು ವಿದ್ಯಾರ್ಥಿಗಳು ಮತ್ತು ಸಂಶೋಧಕರು ಹೆಚ್ಚು ಅಧ್ಯಯನ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಇಂತಹ ಸವಾಲಿನ ಸಂದರ್ಭದಲ್ಲಿ ಸಾರ್ವಜನಿಕರಿಗೆ ನಿಖರ ಹಾಗೂ ವಿಶ್ವಾಸಾರ್ಹ ಜ್ಞಾನವನ್ನು ಒದಗಿಸುವಲ್ಲಿ ಗ್ರಂಥಾಲಯ ಮತ್ತು ವಿಜ್ಞಾನದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಗಳಲ್ಲಿ ಅಧ್ಯಯನದ ಶಿಸ್ತು ಕಡಿಮೆಯಾಗುತ್ತಿದೆ. ಇಂದಿನ ಪೀಳಿಗೆ ತಾಳ್ಮೆ, ಸಹನೆ ಕಳೆದು ಕೊಳ್ಳುತ್ತಿದ್ದಾರೆ. ವಿವಿ ವಿದ್ಯಾರ್ಥಿಗಳು ಸಂಶೋಧನಾ ಪ್ರಬಂಧಗಳನ್ನು ಬಿಡಿಬಿಡಿಯಾಗಿ ಓದುವ ಬದಲು ಸಂಪೂರ್ಣವಾಗಿ ಓದಿ, ವಿಮರ್ಶಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಲ್ಲಾ ಮಾಹಿತಿಗಳು ಮೊಬೈಲ್‌ನಲ್ಲಿ ಲಭ್ಯವಿರುವಾಗ ಪುಸ್ತಕಗಳ ಏಕೆ ಓದಬೇಕು ಎನ್ನುವ ಯುವಕರೂ ಇದ್ದಾರೆ. ಇಂತಹ ಸಂದರ್ಭದಲ್ಲಿ ಜ್ಞಾನವನ್ನು ವಿವೇಕವನ್ನಾಗಿ ಪರಿವರ್ತಿಸಿ, ಜ್ಞಾನ ಸಂಪಾದನೆಗಾಗಿ ನಾವು ಪುಸ್ತಕಗಳನ್ನು ಓದಬೇಕು. ಉನ್ನತ ಶಿಕ್ಷಣದಲ್ಲಿರುವ ಪ್ರತಿಯೊಬ್ಬರಿಗೂ ಗ್ರಂಥಾಲಯ ಅತೀಮುಖ್ಯ ಎಂದ ಕುಲಪತಿಗಳು, ಗ್ರಂಥಾಲಯ ವಿಜ್ಞಾನವು ಕೇವಲ ಒಂದು ವಿಷಯಕ್ಕೆ ಸೀಮಿತವಾಗಿಲ್ಲ. ಅದು ಭೌತವಿಜ್ಞಾನ, ಮಾನವಿಕ, ವಾಣಿಜ್ಯ ಸೇರಿದಂತೆ ಎಲ್ಲಾ ವಿಭಾಗಗಳನ್ನು ಒಟ್ಟಿಗೆ ಜೋಡಿಸುವ ಅದ್ಭುತ ಕೊಂಡಿಯಾಗಿದೆ ಎಂದರು.

ಬೆಂಗಳೂರಿನ ಆರ್.ವಿ. ವಿಶ್ವವಿದ್ಯಾನಿಲಯದಲ್ಲಿ ನೂತನ ಗ್ರಂಥಾಲಯ ತಂತ್ರಜ್ಞಾನವನ್ನು ಉಲ್ಲೇಖಿಸಿದ ಅವರು, ಅಲ್ಲಿ ಗ್ರಂಥಾಲಯ ಒಳಗಡೆ ಸಂಪೂರ್ಣ ಶಬ್ದರಹಿತವಾದ ಅಪ್ಲಿಕೇಷನ್ ಸೆಂಟರ್ ನಿರ್ಮಿಸಲಾಗಿದೆ. ಇಂತಹ ಅತ್ಯಾಧುನಿಕ ತಂತ್ರಜ್ಞಾನಗಳು ವಿದ್ಯಾರ್ಥಿಗಳನ್ನು ಜ್ಞಾನದ ಕಡೆಗೆ ಆಕರ್ಷಿಸುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

1970–80ರ ದಶಕದಲ್ಲಿ ಮೈಸೂರು ವಿವಿ ಗ್ರಂಥಾಲಯ ವಿಭಾಗಕ್ಕೆ ಸಾಕಷ್ಟು ವಿದ್ಯಾರ್ಥಿಗಳು ಭೇಟಿ ನೀಡಿ ಜ್ಞಾನ ಸಂಪಾದನೆ ಮಾಡುತ್ತಿದ್ದರು. ಈ ಹವ್ಯಾಸವನ್ನು ಇಂದಿನ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಸನ್ಮಾನ: ಈ ವೇಳೆ ನಿವೃತ್ತ ಪ್ರಾಧ್ಯಾಪಕರಾದ ಡಾ.ಶಾಲಿನಿ ಆರ್.ಅರಸ್, ಎನ್.ವಿ. ಸತ್ಯನಾರಾಯಣ, ಡಾ.ಪಿ.ವೈ. ರಾಜೇಂದ್ರ ಕುಮಾರ್, ಡಾ.ಚೌಡಪ್ಪ ಅವರ ಪರವಾಗಿ ಪತ್ನಿ ಉಷಾ, ಪ್ರೊ.ಖೈಸರ್ ಜಹನ್ ಬೇಗಂ, ಪ್ರೊಮಲ್ಲಿನಾಥ ಕುಂಬಾರ್ ಅವರಿಗೆ ಡಿಜೆಎಸ್ ಎಕ್ಸಲೆನ್ಸ್ ಅವಾರ್ಡ್ ನೀಡಿ ಗೌರವಿಸಲಾಯಿತು. ಬಳಿಕ ಡಾ.ಎಂ.ವಿ. ಸುನಿಲ್ ಅವರ ನೇತೃತ್ವದಲ್ಲಿ ಶಿಕ್ಷಣ ಮತ್ತು ವೃತ್ತಿ ಬದುಕಿನ ಸಾಧಕ–ಬಾದಕಗಳ ಕುರಿತು ಸಂವಾದ ನಡೆಯಿತು. ಪ್ರೊಎನ್.ಎಸ್.ಹರಿನಾರಾಯಣ ರಚಿತ ಮಾಸ್ಟರಿಂಗ್ ಆರ್‌ಡಿಎ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ ಎನ್.ಎಸ್.ಹರಿ ನಾರಾಯಣ, ಡಾ.ಎನ್. ವಸಂತರಾಜು, ಡಾ.ಶೈಲೇಂದ್ರಕುಮಾರ್, ಡಾ.ಎಂ. ಸುನಿಲ್ ಕುಮಾರ್, ಡಾ.ಜೆ. ಲೋಹಿತ್, ಬಿ.ಪಿ.ಪ್ರಕಾಶ್ ಉಪಸ್ಥಿತರಿದ್ದರು.

> " ಭಾರತದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರಕ್ಕೆ ಹಲವು ವರ್ಷಗಳ ಇತಿಹಾಸವಿದ್ದು. ನಳಂದಾ ವಿವಿ ಬಿಹಾರದ ರಾಜಧಾನಿ ಪಾಟ್ನಾ ಬಳಿಯಿರುವ ಜಗತ್ತಿನ ಅತ್ಯಂತ ಪ್ರಾಚೀನ ಬೌದ್ಧವಿಹಾರ ಮತ್ತು ವಿವಿಯಾಗಿದ್ದು, 5ನೇ ಶತಮಾನದಲ್ಲಿ ಗುಪ್ತರ ಆಳ್ವಿಕೆಯಲ್ಲಿ ಸ್ಥಾಪಿತವಾದ ಈ ವಿವಿಯು ಗ್ರಂಥಾಲಯ, ಜಪಾನ್, ಚೀನಾ ಮತ್ತು ಕೊರಿಯಾ ಸೇರಿದಂತೆ ಹಲವು ದೇಶಗಳ ವಿದ್ವಾಂಸರನ್ನು ಆಕರ್ಷಿಸಿತ್ತು. ಚೀನಾ ಪ್ರವಾಸಿಗ ಹ್ಯುಯೆನ್ ತ್ಸಾಂಗ್ ಸೇರಿದಂತೆ ವಿದೇಶಗಳಿಂದ ಹತ್ತು ಸಾವಿರ ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಎರಡು ಸಾವಿರ ಬೋಧಕರಿದ್ದರು. 12ನೇ ಶತಮಾನದಲ್ಲಿ ವಿದೇಶಿ ಆಕ್ರಮಣಕಾರರಿಂದ ನಳಂದ ವಿವಿ ಗ್ರಂಥಾಲಯದ ಅಮೂಲ್ಯ ಪುಸ್ತಕಗಳು ಸುಟ್ಟು ಕರಕಲಾಯಿತು ಎಂದು ಇತಿಹಾಸದ ಪುಟದಲ್ಲಿ ದಾಖಲಾಗಿದೆ. ನಳಂದ ವಿವಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪರಿಗಣಿಸಿ ಯುನೆಸ್ಕೋ ಸಂಸ್ಥೆ 'ವಿಶ್ವ ಪಾರಂಪರಿಕ ತಾಣ ಎಂದು ಘೋಷಿಸಿದೆ.
>
> **– ಡಾ.ವಿಕ್ರಂ ಸಂಪತ್,** ಇತಿಹಾಸ ತಜ್ಞ

ಭೀಮಾ ತೀರದಲ್ಲಿ ಮತ್ತೆ 6 ಜನರ ಭೀಕರ ಹತ್ಯೆ

ವಿಜಯಪುರ, ಮೇ 29– ಭೀಮಾ ತೀರದಲ್ಲಿ ಮತ್ತೆ ನೆತ್ತರು ಹರಿದಿದೆ ಆಸ್ತಿ ವಿವಾದದ ಹಿನ್ನೆಲೆ 6 ಜನರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹಾಗೂ ಗುಂಡು ಹಾರಿಸಿ ಭೀಕರವಾಗಿ ಹತ್ಯೆ ಮಾಡಲಾಗಿದೆ. ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ಈ ಭೀಕರ ಕೊಲೆ ನಡೆದಿದೆ. ನಿರಾಳೆ ಹಾಗೂ ಗೋಳಗಿ ಕುಟುಂಬಗಳ ನಡುವೆ ಜಮೀನು ವ್ಯಾಜ್ಯವಿತ್ತು ಇದೇ ಕಾರಣಕ್ಕೆ ಈ ಹತ್ಯೆ ನಡೆದಿದೆ ಎನ್ನಲಾಗಿದೆ

ಕೊಲೆಯಾದವರು: ಎರಡು ಕುಟುಂಬಗಳ ಗಲಾಟೆಯಲ್ಲಿ ರೇವಣಸಿದ್ದಪ್ಪ ನಿರಾಳೆ, ದುಂಡಪ್ಪ ರೇವಣಸಿದ್ದಪ್ಪ ನಿರಾಳೆ, ಶಿವಪುತ್ರ ರೇವಣಸಿದ್ದಪ್ಪ ನಿರಾಳೆ, ಚಂದ್ರಶೇಖರ್ ನಿರಾಳೆ, ಶಬ್ಬಿರ್ ನದಾಫ್ ಹತ್ಯೆಯಾಗಿದ್ದಾರೆ.



ಹತ್ಯೆಯಾದವರು

ಎಂಎಲ್ಸಿ ಡಾ.ತಿಮ್ಮಯ್ಯ ಅವರಿಗೆ ಸಚಿವ ಸ್ಥಾನ ಕಲ್ಪಿಸುವಂತೆ ಆದಿಜಾಂಬವ ಸಂಘ ಆಗ್ರಹ


ನವದೆಹಲಿ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರಿಗೆ ಸಚಿವ ಸ್ಥಾನ ನೀಡುವಂತೆ ರಾಜ್ಯ ಆದಿಜಾಂಬವ ಸಂಘದ ಮೈಸೂರು ವಿಭಾಗೀಯ ಸಮಿತಿ ಮನವಿ ಮಾಡಿದೆ.



ಆದಿಜಾಂಬವ ಸಮುದಾಯವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದು, ಎಲ್ಲಾ ರೀತಿಯಲ್ಲೂ ವಂಚಿತವಾಗಿದೆ. ಪರಿಶಿಷ್ಟ ಜಾತಿಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆ ಇರುವ ನಮ್ಮ ಸಮುದಾಯಕ್ಕೆ ಸಿಗಬೇಕಾದ ಪ್ರಾಮುಖ್ಯತೆ ದಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಹಾಗೂ ವಿಧಾನ ಪರಿಷತ್ ಸದಸ್ಯ ಡಾ||ಡಿ.ತಿಮ್ಮಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಅತ್ಯಂತ ಕಳಕಳಿಯಿಂದ ಒತ್ತಾಯಿಸುತ್ತೇವೆ ಎಂದು ಸಂಘದ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಮೈಸೂರು ವಿಭಾಗದಲ್ಲಿ ವ್ಯವಸ್ಥಿತ ಸಂಘಟನೆ ಜೊತೆಗೆ ನಮ್ಮ ಜನಾಂಗದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಡಾ.ಡಿ.ತಿಮ್ಮಯ್ಯ ಕಳೆದ ಲೋಕಸಭೆ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಹಾಗೂ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ನಮ್ಮ ಜನಾಂಗವನ್ನು ಸಂಘಟಿಸಿ ಪಕ್ಷದ ಅಭ್ಯರ್ಥಿಗಳ ಗೆಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ಸುಮಾರು 25 ವರ್ಷಗಳಿಂದ ನಮ್ಮ ಜನಾಂಗದ ನಾಯಕರಿಗೆ ಸಚಿವ ಸ್ಥಾನ ದೊರೆತಿಲ್ಲ. ಈ ಶೂನ್ಯತೆಯನ್ನು ತುಂಬಲು ಉನ್ನತ ಶೈಕ್ಷಣಿಕ ಅರ್ಹತೆ ಹೊಂದಿರುವ ಡಾ.ತಿಮ್ಮಯ್ಯರಿಗೆ ಅವಕಾಶ ನೀಡಲೇಬೇಕು. ಈ ಮೂಲಕ ಆದಿ ಜಾಂಬವ ಜನಾಂಗಕ್ಕೆ ನ್ಯಾಯ ಒದಗಿಸಬೇಕು ಎಂದು ಸಂಘದ ಪರವಾಗಿ ವಿಭಾಗೀಯ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್, ಕಾರ್ಯದರ್ಶಿ ಡಿ.ಕುಮಾರ್, ಉಪಾಧ್ಯಕ್ಷ ವಿಜಯ್ ಕುಮಾರ್ ಹಾಗೂ ಎಂ.ಲೋಕೇಶ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾದ ಸ್ಥಳೀಯ ಪದಾಧಿಕಾರಿಗಳಿಗೆ ಅಭಿನಂದನೆ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ನಗರ ಹಾಗೂ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು ಹಾಗೂ ನಿರ್ದೇಶಕರನ್ನು ಶ್ರೀ ಸಿದ್ದಗಂಗಾ ಶ್ರೀಗಳ ಭಕ್ತವೃಂದದ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಮಾ 29– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ನಗರ ಹಾಗೂ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳು ಹಾಗೂ ನಿರ್ದೇಶಕರನ್ನು ಶ್ರೀ ಸಿದ್ದಗಂಗಾ ಶ್ರೀಗಳ ಭಕ್ತವೃಂದದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮಹಾಸಭಾದ ಮೈಸೂರು ಘಟಕದ ಅಧ್ಯಕ್ಷ ಪ್ರಕಾಶ್, ನಿರ್ದೇಶಕರಾದ ಮಹೇಶ್, ಕಿಶೋರ್, ನಾಗೇಂದ್ರ ಹಾಗೂ ತಾಲೂಕು ಘಟಕದ ನಿರ್ದೇಶಕರಾದ ಮಾರಶೆಟ್ಟಹಳ್ಳಿ ಮಹದೇವು, ಕೂಡನಹಳ್ಳಿ ನಾಗರಾಜ್, ದೇವಲಾಪುರದ ಡಿ.ಪಿ.ಸುರೇಶ್, ಗುರುಪಾದ ಸ್ವಾಮಿ, ತಳೂರು ಮಹದೇವಸ್ವಾಮಿ, ಮಾರ್ಬಳ್ಳಿ ಗಿರೀಶ್, ಎನ್.ಬಿ.ರಾಜು ಮತ್ತು ಡಿ.ಎ.ಮಹಾದೇವಸ್ವಾಮಿ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಸಿದ್ದಗಂಗಾ ಶ್ರೀಗಳ ಭಕ್ತವೃಂದದ ಪ್ರಮುಖರಾದ ಅಂಬಳೆ ಶಿವಣ್ಣ, ಗೆಜ್ಜಗಳ್ಳಿ ಶಂಕರ್, ಸಂದೀಪ್ ಚಂದ್ರಶೇಖರ್, ಗೌರಿಶಂಕರ ನಗರ ಬಸವರಾಜು, ದೇವಲಾಪುರ ಮಹೇಶ್, ಜಂತಕಳ್ಳಿ ಪಾಪಣ್ಣ, ಮುರುಡಗಳ್ಳಿ ಶಿವಣ್ಣ, ಯಡಹಳ್ಳಿ ಕಾಂತರಾಜು, ಸಾತಗಳ್ಳಿ ಜಯಣ್ಣ, ಹಡಜನ ಪಾಟೀಲ್ ಮಹಾದೇವ್, ಕೆ.ಆರ್.ಬ್ಯಾಂಕ್ ಭಾಸ್ಕರ್, ಕೂಡನಹಳ್ಳಿ ಸೋಮಣ್ಣ, ಮಾರ್ಬಳ್ಳಿ ಡೈರಿ ಕುಮಾರ್, ಉದ್ಬೂರ್ ಪಿತಾಮಹ, ಹಡಜನ ಡೈರಿ ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.

1008 ಶ್ರೀ ಸತ್ಯಾತ್ಮ ತೀರ್ಥ ಪಾದಂಗಳವರ ಮೈಸೂರು ದಿಗ್ವಿಜಯ

ನಾಳೆ ಮೈಸೂರಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಮಾತನಾಡಿದರು.

ಮೈಸೂರು, ಮೇ29(ಜಿಎ)–1008 ಶ್ರೀ ಸತ್ಯಾತ್ಮ ತೀರ್ಥ ಪಾದಂಗಳವರ ಮೈಸೂರು ದಿಗ್ವಿಜಯ–2026 ಅಧಿಕ ಮಾಸ ನಿಮಿತ್ತ ಉತ್ತರಾದಿ ಮಠ ರೋಗ ಮೋಚನ ಧನ್ವಂತರಿ ಸನ್ನಿಧಾನ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್ ಮತ್ತು ಆರೋಗ್ಯ ವರ್ಲ್ಡ್ ಇಂಡಿಯಾ ನೇತೃತ್ವದಲ್ಲಿ ಸ್ವಸ್ಥ ಮೈಸೂರು ಗುರಿಯೊಂದಿಗೆ ಮೇ 31 ರಂದು ಉತ್ತರಾಧಿ ಮಠದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ರಾಜ ವಂಶಸ್ಥೆ ಹಾಗೂ ಫೌಂಡೇಷನ್ ಮುಖ್ಯಸ್ಥರಾದ ಡಾ.ಪ್ರಮೋದಾದೇವಿ ಒಡೆಯರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಸ್ಟ್ ವತಿಯಿಂದ ಈಗಾಗಲೇ ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತಮ್ಮ ಪೂರ್ವಜರು ಮೈಸೂರಿನ ಎಲ್ಲ ರೀತಿಯ ಬೆಳವಣಿಗೆಗೆ ಶ್ರಮಿಸಿದರು. ಸರ್ಕಾರದ ಹೊರಗೂ ಈ ರೀತಿಯ ಜನಸೇವೆ ಮಾಡಬಹುದೆಂಬುದಕ್ಕೆ ಈ ರೀತಿಯ ಕಾರ್ಯಕ್ರಮ ಉದಾಹರಣೆಯಾಗಿವೆ ಎಂದರು.

ವಯಸ್ಸು ಕಳೆದಂತೆ ಸಾಮಾನ್ಯವಾಗಿ ಜನರು ಆರೋಗ್ಯದ ಕಡೆ ಒತ್ತು ನೀಡುವುದಿಲ್ಲ. ಮಹಿಳೆಯರೂ ಕಡೆಗಣಿಸುತ್ತಾರೆ. ಹೀಗಾಗಿ ಎಲ್ಲರಿಗೂ ಆರೋಗ್ಯದ ಮಹತ್ವ ಅರಿವು ಮೂಡಿಸಲಾಗುತ್ತಿದೆ. ಅಂದು ಬೆಳಗ್ಗೆ 9ಗಂಟೆಯಿಂದ ಮಧ್ಯಾಹ್ನ 1ರವರೆಗೆ ಶಿಬಿರ ನಡೆಯಲಿದ್ದು, ಸುಮಾರು 1500 ಮಂದಿಗೆ ತಪಾಸಣೆ ನಡೆಸುವ ಉದ್ದೇಶವಿದ್ದರೂ ವೈದ್ಯರ ಸಂಖ್ಯೆಯೇ 150 ರಷ್ಟಿರುವ ಕಾರಣ ಪ್ರಯೋಜನ ಪಡೆಯುವವರ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ. ಜೊತೆಗೆ ಎಲ್ಲ ರೀತಿಯ ಆರೋಗ್ಯ ತಪಾಸಣೆ ಉಚಿತವಾಗಿ ನಡೆಯುತ್ತಿದ್ದು, ಆರೋಗ್ಯ ಸಮಸ್ಯೆ ಕಂಡು ಬಂದವರಿಗೆ ಜಿಲ್ಲಾಸ್ಪತ್ರೆ ಮೊದಲಾದ ಕಡೆ ಚಿಕಿತ್ಸೆ ಪಡೆಯಲು ನೆರವಾಗುವುದು ಎಂದು ವಿವರಿಸಿದರು.

ಈ ಸಂದರ್ಭದಲ್ಲಿ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ಶಿಬಿರಕ್ಕೆ ನೀಡುವರು. ಮುಖ್ಯ ಅತಿಥಿಗಳಾಗಿ ಸ್ವಸ್ಥ ಮೈಸೂರಿನ ಟ್ರಸ್ಟಿ ಡಾ.ಪ್ರತಿಭಾ ಪೆರೇರಾ, ಜಿಆರ್‌ಸಿ ಮೈಸೂರಿನ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶೆಣೈ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಠದ ಆಡಳಿತಾಧಿಕಾರಿ ಅನಿರುದ್ಧಾಚಾರ್ಯ, ಡಾ. ಪ್ರತಿಭಾ ಪೆರೇರಾ, ಡಾ.ಲಕ್ಷ್ಮೀನಾರಾಯಣ ಶೆಣೈ, ವೆಸ್ಲಿ. ಡಾ.ತೇಜಸ್ವಿನಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅವರೊಂದಿಗೆ ಯಾವ ದ್ವೇಷವೂ ಇಲ್ಲ: ಪ್ರಮೋದಾ ದೇವಿ ಸ್ಪಷ್ಟನೆ

ಮೈಸೂರು, ಮೇ29(ಜಿಎ)–ಸಿದ್ದರಾಮಯ್ಯ ಅವರಿಗೂ ನಮಗೂ ಯಾವುದೇ ದ್ವೇಷವಿಲ್ಲ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಂಬಂಧ 'ಮೈಸೂರು ಮಿತ್ರ'ನ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ರಾಜಕೀಯವಾಗಿ ದೂರವಿರುವುದರಿಂದ ಸಿದ್ದರಾಮಯ್ಯ ಅವರು ನಮಗೆ ಹತ್ತಿರವೂ ಇಲ್ಲ. ದೂರವೂ ಇಲ್ಲ. ಈ ಹಿಂದೆ ನನ್ನ ಪತಿ ರಾಜಕೀಯದಲ್ಲಿ ಇದ್ದಾಗ ಮತ್ತು ಈಗ ಮಗ ರಾಜಕೀಯಕ್ಕೆ ಹತ್ತಿರವಾಗಿದ್ದಾರೆ. ನಾನೂ ಈಗಲೂ ರಾಜಕೀಯದಿಂದ ದೂರ ಎಂದರು.

ಮೈಸೂರಿನ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ ಅಭಿವೃದ್ಧಿ ಕುಂಠಿತವಾಗಲಿದೆಯೇ ಎಂದು ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಂದೆ ಯಾರು ಅಧಿಕಾರ ವಹಿಸಿಕೊಳ್ಳುತ್ತಾರೆ ಅವರು ಮೈಸೂರು ಅಭಿವೃದ್ಧಿಗೆ ಕುಂಠಿತವಾಗದಂತೆ ನೋಡಿಕೊಳ್ಳಬೇಕಿದೆ. ಇಲ್ಲವಾದರೆ, ಜನರು ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕಿ ಕೆಲಸ ಮಾಡಿಸಬೇಕಾಗುತ್ತದೆ. ನೂತನವಾಗಿ ಮುಖ್ಯಮಂತ್ರಿಯಾಗಿ ಆಯ್ಕೆ ಆಗುವವರಿಗೆ 3 ರಿಂದ 6 ತಿಂಗಳು ಸೆಟಲ್ ಆಗಲು ಕಾಲಾವಕಾಶ ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಕಾಮೆಡ್–ಕೆ ಫಲಿತಾಂಶ ಪ್ರಕಟ: ಜಾರ್ಖಂಡ್‌ನ ದರ್ಶಿಲ್ ಮೋದಿಗೆ ಮೊದಲ ಸ್ಥಾನ

ಬೆಂಗಳೂರು, ಮೇ 29– ಕರ್ನಾಟಕದ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) 2026–27ನೇ ಶೈಕ್ಷಣಿಕ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಮೇ 9ರಂದು ನಡೆಸಿದ್ದ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಮೊದಲ 100 ಶ್ರೇಯಾಂಕಗಳ ಪಟ್ಟಿಯಲ್ಲಿ ಕರ್ನಾಟಕದ 30 ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ.

10 ಶ್ರೇಯಾಂಕಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಸ್ಥಾನ ಪಡೆದಿಲ್ಲ. 90ರಿಂದ 100 ಪರ್ಸೆಂಟೈಲ್ ನಡುವೆ 11,207 ಅಭ್ಯರ್ಥಿಗಳು, 80ರಿಂದ 90 ಪರ್ಸೆಂಟೈಲ್ ನಡುವೆ 11,385 ಅಭ್ಯರ್ಥಿಗಳು ಮತ್ತು 70 ರಿಂದ 80 ಪರ್ಸೆಂಟೈಲ್ ನಡುವೆ 10,940 ಅಭ್ಯರ್ಥಿಗಳಿದ್ದಾರೆ.

ಮೊದಲ ಆರು ರ್‍ಯಾಂಕ್‌ಗಳಲ್ಲಿ ಐದರಲ್ಲಿ ಜಾರ್ಖಂಡ್ ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಜಾರ್ಖಂಡ್‌ನ ರಾಂಚಿಯ ದರ್ಶಿಲ್ ಮೋದಿ ಮೊದಲ ಸ್ಥಾನ ಪಡೆದಿದ್ದಾರೆ. ದೇಶಾದ್ಯಂತ 171 ನಗರಗಳ 303 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. 1,10,774 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಕೌನ್ಸೆಲಿಂಗ್ ಪ್ರಕ್ರಿಯೆ ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿ ನಡೆಯಲಿದೆ. ಅಭ್ಯರ್ಥಿಗಳು ದಾಖಲೆಗಳನ್ನು ತಮ್ಮ ಲಾಗಿನ್ ಮೂಲಕ ವೆಬ್‌ಸೈಟ್‌ನಲ್ಲಿ (www.comedk.org) ಅಪ್‌ಲೋಡ್ ಮಾಡಿಕೊಳ್ಳಬೇಕು. ಲಭ್ಯವಿರುವ ಸೀಟುಗಳ ಸಂಖ್ಯೆ, ಶುಲ್ಕ, ಕೌನ್ಸಿಲಿಂಗ್ ದಿನಾಂಕಗಳನ್ನು ಪ್ರಕಟಿಸಲಾಗುವುದು ಎಂದು ಕಾಮೆಡ್–ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಎಸ್.ಕುಮಾರ್ ಹೇಳಿದ್ದಾರೆ.

ಅಂಬರೀಶ್‌ರಂತೆ ಜನಸೇವೆಗೆ ನಾವು ಬದ್ದ

ಕೆ.ಎಂ.ದೊಡ್ಡಿಯಲ್ಲಿ ಮಾಜಿ ಸಂಸದೆ ಸುಮಲತಾ ಅಂಬರೀಶ್ ಭರವಸೆ



ಕಾರ್ಯಕ್ರಮದಲ್ಲಿ ಎನ್.ಅಂಕೇಗೌಡ, ಡಾ.ಎಚ್.ಎಸ್.ರವಿಕುಮಾರ್, ಎಂ.ಸಿ.ಲಂಕೇಶ್ ಅವರುಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಭಾರತೀನಗರ: ಜನಸೇವೆ ನಮ್ಮ ಆದ್ಯ ಕರ್ತವ್ಯವಾಗಿದ್ದು, ನಿಮ್ಮ ನೆಚ್ಚಿನ ಅಂಬರೀಶ್ ಅವರಂತೆ ನಾವು ಕೂಡ ನಿಮ್ಮ ಸೇವೆಗೆ ಬದ್ದರಾಗಿದ್ದೇವೆ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಶ್ ತಿಳಿಸಿದ್ದಾರೆ.

ಕೆ.ಎಂ.ದೊಡ್ಡಿ ಪೊಲೀಸ್ ಠಾಣೆ ಮುಂಭಾಗ ಅಂಬರೀಶ್ ಅಭಿಮಾನಿಗಳ ಸಂಘದ ಕಚೇರಿ ಬಳಿ ಡಾ.ಎಂ.ಎಚ್. ಅಂಬರೀಶ್ ಫೌಂಡೇಶನ್, ಅಂಬರೀಶ್ ಅಭಿಮಾನಿಗಳ ತಾಲೂಕು ಒಕ್ಕೂಟ, ಅಖಿಲ ಕರ್ನಾಟಕ ಅಂಬರೀಶ್ ಅಭಿಮಾನಿಗಳ ಸಂಘದ ಇವುಗಳ ಸಂಯುಕ್ತಾಶ್ರಯದಲ್ಲಿ ದಿ.ರೇಬಲ್ ಸ್ಟಾರ್ ಅಂಬರೀಶ್ ಅವರ 74ನೇ ಜನ್ಮದಿನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಅಂಬರೀಶ್ ಸಮಾಜ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಂಬರೀಶ್ ಅವರಿಗೆ ಜನರೆಂದರೇ ಒಂದು ರೀತಿಯ ತುಡಿತ. ಕಷ್ಟ ಎಂದು ಬಂದವರನ್ನು ಎಂದಿಗೂ ನಿರಾಶೆ ಗೊಳಿಸಿರಲಿಲ್ಲ. ಅವರ ಆ ರೀತಿಯ ಸೇವೆಯನ್ನು ಅವರ ಪತ್ನಿಯಾದ ನಾನು ಮತ್ತು ನನ್ನ ಪುತ್ರ ಅಭಿಷೇಕ್ ಮುಂದುವರೆಸಿಕೊಂಡು ಹೋಗುತ್ತೇವೆ. ಆ ಮೂಲಕ ಜನರ ಪ್ರೀತಿ ಸಂಪಾದಿಸುತ್ತೇವೆಂದು ಹೇಳಿದರು.

ನಾನು ರಾಜಕೀಯಕ್ಕೆ ಬಂದಾಗ ಇಲ್ಲಿಯ ಸೊಸೆ ಎಂದು ಭಾವಿಸಿ ಜನರು ಅಧಿಕಾರ ಕೊಟ್ಟಿದ್ದಾರೆ. ಅದನ್ನು ನಾನು ಎಂದಿಗೂ ಮರೆಯುವುದಿಲ್ಲ. ಹಾಗೇಯೇ ಜಿಲ್ಲೆಯಲ್ಲಿ ಸಾಕಷ್ಟು ಮಂದಿ ಸಾಧಕರಿದ್ದು, ಇಲ್ಲಿಯ ಸೊಸೆಯಾಗಿ ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು.

ಅಂಬರೀಶ್‌ರವರು ನಮ್ಮನ್ನು ಅಗಲಿ ಏಳೆಂಟು ವರ್ಷಗಳಾದರೂ ಅವರ ಮೇಲಿನ ಪ್ರೀತಿ, ವಿಶ್ವಾಸ, ಗೌರವ ಇಂದಿಗೂ ಅಜರಾಮರವಾಗಿ ಉಳಿದಿದೆ. ನಮ್ಮ ಕುಟುಂಬಸ್ಥರೆಲ್ಲರೂ ನಮ್ಮ ಕೊನೆಯ ಉಸಿರು ಇರುವ ವರೆಗೂ ನಿಮಗೆ ಸದಾ ಚಿರ ಋಣಿಯಾಗಿರುತ್ತೇವೆ ಎಂದರು.

ಅಂಬರೀಶ್ ಪುತ್ರ ಅಭಿಷೇಕ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಸುಮಲತಾ ಅಂಬರೀಶ್, ಅಭಿಷೇಕ್ ಅಂಬರೀಶ್ ಮತ್ತಿತರರು ದೊಡ್ಡರಸಿನಕೆರೆ ಗ್ರಾಮಕ್ಕೆ ತೆರಳಿ ಅಂಬರೀಶ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪಾಂಡವಪುರ ತಾಲೂಕಿನ ಪುಸ್ತಕದ ಮನೆಯ ಎನ್.ಅಂಕೇಗೌಡ, ಹೊಳಲು ಗ್ರಾಮದ ಕೀಲು, ಮೂಳೆ ತಜ್ಞ ಡಾ.ಎಚ್.ಎಸ್.ರವಿಕುಮಾರ್, ನೆಲದನಿ ಬಳಗದ ಅಧ್ಯಕ್ಷ ಎಂ.ಸಿ. ಲಂಕೇಶ್ ಅವರಿಗೆ 25 ಸಾವಿರ ನಗದು, ಪ್ರಶಸ್ತಿ ಪತ್ರ, ಸ್ಮರಣಿಕೆ ನೀಡಿ ಶಾಲು ಹೊದಿಸಿ ಹಾರ ಹಾಕಿ ಅಂಬರೀಶ್ ಸಮಾಜ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಗೊಂಡ ನಾಗಮಂಗಲ ತಾಲೂಕಿನ ಕರಡಹಳ್ಳಿ ಗ್ರಾಮದ ಆರ್.ಧನಂಜಯ, ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ 5ನೇ ರ್‍ಯಾಂಕ್ ಪಡೆದ ಶ್ರೀಲಕ್ಷ್ಮಿ, ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಪಾಂಡವಪುರ ತಾಲೂಕಿನ ಕಿನಹುರುಳಿಯ ಎಸ್‌ಟಿಜಿ ಪಿಯು ಕಾಲೇಜಿನ ಟಿ.ಎಸ್.ಸಹನಾ, ರಾಜ್ಯಕ್ಕೆ 7ನೇ ರ್‍ಯಾಂಕ್ ಗಳಿಸಿದ ಮಾಂಡವ್ಯ ಎಕ್ಸಲೆನ್ಸ್ ಪಿಯು ಕಾಲೇಜಿನ ಕೆ.ವೈ.ಸಂಜನಾ, ಜಿಲ್ಲೆಗೆ ಪ್ರಥಮ ಸ್ಥಾನಗಳಿಸಿದ ಪಿಇಎಸ್ ಪಿಯು ಕಾಲೇಜಿನ ಎಚ್.ಬಿ.ತೇಜಸ್ವಿನಿ, ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನಗಳಿಸಿದ ಕಾರ್ಮೆಲ್ ಬಾಲಕೀಯರ ಪಿಯು ಕಾಲೇಜಿನ ಫೈಜಾ ಅಲಿ ಸೈಯದ್ ಅವರಿಗೆ 10 ಸಾವಿರ ನಗದು, ಸ್ಮರಣಿಕೆ, ಪ್ರಶಸ್ತಿ ಪತ್ರ ನೀಡಿ, ಶಾಲು, ಪೇಟಾ, ಹಾರ ಹಾಕಿ ಅಭಿನಂದಿಸಲಾಯಿತು.

ಮಳವಳ್ಳಿ ತಾಲೂಕು ಟಿಎಚ್‌ಓ ಡಾ.ವೀರಭದ್ರಪ್ಪ, ವೈದ್ಯರಾದ ಡಾ. ನಾಗರಾಜು ಮತ್ತಿತರರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಅಂಬರೀಶ್ ಸಂಬಂಧಿ ಮಧನ್, ಅಖಿಲ ಕರ್ನಾಟಕ ಅಂಬರೀಶ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬೇಲೂರು ಸೋಮಶೇಖರ್, ಅಂಬರೀಶ್ ಅಭಿಮಾನಿಗಳ ಮದ್ದೂರು ತಾಲೂಕು ಒಕ್ಕೂಟದ ಅಧ್ಯಕ್ಷ ಮುಟ್ಟನಹಳ್ಳಿ ಮಹೇಂದ್ರ, ಜಿ.ಪಂ ಮಾಜಿ ಸದಸ್ಯ ಬಿ.ವಿವೇಕಾನಂದ, ಮುಖಂಡರಾದ ಶಶಿಕುಮಾರ್, ತೊರೆಚಾಕನಹಳ್ಳಿ ಶಂಕರೇಗೌಡ, ತೈಲೂರು ಸಿದ್ದರಾಜು, ಹಾಗಲಹಳ್ಳಿ ಎಂ.ಬಸವರಾಜು, ಕ್ಯಾತಘಟ್ಟ ನಾಡಗೌಡ ಮರಿಸ್ವಾಮಿ, ಪಿಡಿಓ ಎನ್.ಸುಧಾ, ಬಿ.ಎಸ್.ಬೋರೇಗೌಡ, ದೊಡ್ಡರಸಿನಕೆರೆ ಶಿವಕುಮಾರ್, ಪಾರ್ಥ, ಮುಟ್ಟನಹಳ್ಳಿ ರವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅವರ ರಾಜೀನಾಮೆ ನಿರೀಕ್ಷಿತ

ಮಂಡ್ಯ: ಸಿದ್ದರಾಮಯ್ಯನವರ ರಾಜೀನಾಮೆ ನಿರೀಕ್ಷಿತ ಬೆಳವಣಿಗೆ. ಎರಡು ವರ್ಷಗಳಿಂದ ಈ ಬಗ್ಗೆ ಚರ್ಚೆ ನಡೆಯುತ್ತಿದೆ. ಇದರಲ್ಲಿ ಶಾಕ್ ಆಗುವಂತಹದ್ದೇನಿಲ್ಲ. ಯಾರೇ ಮುಖ್ಯಮಂತ್ರಿಯಾದರೂ ಒಳ್ಳೆಯ ಆಡಳಿತ ಕೊಡಬೇಕಷ್ಟೆ. ಜನರು ಕೂಡ ಅದನ್ನೇ ನಿರೀಕ್ಷೆ ಮಾಡುವುದು ಎಂದು ಸುಮಲತಾ ಅಂಬರೀಶ್ ಹೇಳಿದ್ದಾರೆ.

ರಾಜ್ಯದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕುರಿತು ಮಾತನಾಡಿ, ದಲಿತ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವುದು ಅವರ ಪಕ್ಷಕ್ಕೆ ಬಿಟ್ಟ ವಿಚಾರ. ಕಾಂಗ್ರೆಸ್‌ನವರು ನಮ್ಮದು ಅಲ್ಪಸಂಖ್ಯಾತರ ಪಕ್ಷ ಅಂತ ಹೇಳಿಕೊಳ್ಳುತ್ತಾರೆ. ಅದನ್ನು ಉಳಿಸಿಕೊಳ್ಳುವುದು ಅಥವಾ ಬಿಡುವುದು ಅವರಿಗೆ ಬಿಟ್ಟ ವಿಚಾರ. ಅವಧಿ ಪೂರ್ಣ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ನಾಯಕತ್ವ ಬದಲಾವಣೆ ಹೊಸತೇನು ಅಲ್ಲ ಹಾಗೂ ಬದಲಾವಣೆ ಮಾಡುವುದು ತಪ್ಪಲ್ಲ. ಜನರು ಅದನ್ನು ಒಪ್ಪಿಕೊಳ್ಳುತ್ತಾರೆ ಎಂದಿದ್ದಾರೆ.

ಪುತ್ರ ಅಭಿಷೇಕ್ ಅಂಬರೀಶ್ ರಾಜಕೀಯ ಭವಿಷ್ಯದ ಬಗ್ಗೆ ಮಾತನಾಡಿ, ಅಭಿಷೇಕ್ ರಾಜಕೀಯದ ಬಗ್ಗೆ ನಾನು ನಿರ್ಧಾರ ಮಾಡುವುದಿಲ್ಲ. ರಾಜಕೀಯ ಅಥವಾ ಸಿನಿಮಾ ರಂಗ ಯಾವುದರಲ್ಲಿ ಮುಂದುವರಿಯಬೇಕು ಎನ್ನುವುದು ಅವರಿಷ್ಟ, ನಾನು ಬಿಜೆಪಿ ಪಕ್ಷದಲ್ಲಿದ್ದೇನೆ. ಪಕ್ಷ ಯಾವ ರೀತಿ ಸೂಚನೆ ನೀಡುತ್ತದೋ ಆ ಪ್ರಕಾರ ನಡೆದುಕೊಳ್ಳುತ್ತೇನೆ ಎಂದರು.

ಮೈಶುಗರ್ ಅನುಪಯುಕ್ತ ಬಿ.ಮಿಲ್ ಟೆಂಡರ್ ಮೂಲಕ ಮಾರಾಟ

ಮಂಡ್ಯ, ಮೇ29– ಮೈಶುಗರ್ ಸಕ್ಕರೆ ಕಾರ್ಖಾನೆಯಲ್ಲಿನ ಅನುಪಯುಕ್ತ ಬಿ.ಮಿಲ್ ಅನ್ನು ಟೆಂಡರ್ ಮೂಲಕ ಉತ್ತಮ ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದು



ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ಕಿಡಿಗೇಡಿಗಳು ಕಾರ್ಖಾನೆಯ ಅನುಪಯುಕ್ತ ವಸ್ತುಗಳು ಹಾಗು ಬಿ.ಮಿಲ್ ಅನ್ನು ಗುಜರಿ ಲೆಕ್ಕದಲ್ಲಿ ಮಾರಾಟ ಮಾಡಲಾಗಿದೆ. ಬಿ.ಮಿಲ್ ಬಳಕೆಗೆ ಯೋಗ್ಯವಾಗಿದ್ದರೂ ಮಾರಾಟ ಮಾಡಲಾಗಿದೆ ಎಂದು ವಿನಃ ಕಾರಣ ಆರೋಪ ಮಾಡುವುದಕ್ಕೆ ಖಂಡನೆ ವ್ಯಕ್ತಪಡಿಸಿದರು.

ಈ ರೀತಿಯ ಅಪಪ್ರಚಾರದಲ್ಲಿ ತೊಡಗಿರುವ ಕಿಡಿಗೇಡಿಗಳು ಖಾಸಗಿ ಕಾರ್ಖಾನೆಗಳ ಜತೆ ಹೊಂದಾಣಿಕೆ ಮಾಡಿಕೊಂಡು ಆರೋಪ ಮಾಡುತ್ತಿದ್ದಾರೆ. ಅನುಪಯುಕ್ತ ವಸ್ತುಗಳ ಗರಿಷ್ಟ ಮಾರಾಟದ ವೆಚ್ಚ 4 ಕೋಟಿ 86 ಸಾವಿರ ರೂಗಳಿದ್ದು, ಟೆಂಡರ್‌ನಲ್ಲಿ ಒಟ್ಟು 6 ಸಂಸ್ಥೆಗಳು ಭಾಗವಹಿಸಿದ್ದವು. ಅದರಲ್ಲಿ ಅತಿಹೆಚ್ಚು ಬಿಡ್ ಮಾಡಿದ ಎಸ್.ಎನ್ ಟ್ರೇಡರ್ಸ್ ಸಂಸ್ಥೆಗೆ 3.92 ಕೋಟಿ ರೂ.ಗಳಿಗೆ ಮಾರಾಟ ಮಾಡಲಾಗಿದೆ ಎಂದು ದಾಖಲೆಗಳನ್ನು ಒದಗಿಸಿದರು.

ಈ ಎಲ್ಲವುಗಳ ಸಂಬಂಧ ಮೇ 7 ಮತ್ತು 23ರಂದು ರೈತ ಮುಖಂಡರ ಹಾಗೂ ರೈತ ಹಿತರಕ್ಷಣಾ ಸಮಿತಿ ಜತೆ ಸಭೆ ನಡೆಸಲಾಗಿದೆ. ಅವರೂ ಇದಕ್ಕೆ ಸಹಮತ ವ್ಯಕ್ತಪಡಿಸಿದ್ದು, ಈ ಬಾರಿ ಹೆಚ್ಚು ಕಬ್ಬು ಅರೆಯುವಂತ ಸಲಹೆ ನೀಡಿದ್ದಾರೆ. ಮೈಶುಗರ್‌ನಿಂದ ಒಟ್ಟು 5.90 ಮೆಟ್ರಿಕ್ ಟನ್ ನಷ್ಟು ಕಬ್ಬನ್ನು ಒಪ್ಪಿಗೆ ಮಾಡಿಕೊಳ್ಳಲಾಗಿದೆ. ದಿನಕ್ಕೆ 3 ಸಾವಿರ ಟನ್‌ನಂತೆ ಕಬ್ಬನ್ನು ನುರಿಸಲಾಗುವುದು. ಹಂಗಾಮು ಮುಗಿಯುವಷ್ಟರಲ್ಲಿ ಕನಿಷ್ಠ ಎಂದರೂ 4.90 ಮೆಟ್ರಿಕ್ ಟನ್‌ನಷ್ಟು ಕಬ್ಬನ್ನು ಅರಿಯಲಾಗುವುದು ಎಂದು ಭರವಸೆ ನೀಡಿದರು.

ಕಳೆದ ಹಂಗಾಮಿನ ಟನ್ ಕಬ್ಬಿಗೆ ಸರ್ಕಾರದಿಂದ ನೀಡಲಾಗುವ ಹೆಚ್ಚುವರಿ 50ರೂ ಹಣವನ್ನು ಮುಂದಿನ ವಾರದಲ್ಲಿ ನೀಡಲಾಗುವುದು. ಮೈಶುಗರ್ ಕಾರ್ಖಾನೆಯಿಂದ ನೀಡಬೇಕಾದ ಹಣವನ್ನು ಜೂನ್ ಅಂತ್ಯದೊಳಗೆ ಪಾವತಿ ಮಾಡಿ, ಜುಲೈ 2ನೇ ವಾರದಲ್ಲಿ ಕಾರ್ಖಾನೆಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಆರತಿ ಉಕ್ಕಡ ದೇಗುಲದಲ್ಲಿ ಹಣ ಸುಲಿಗೆ



ತಾಲೂಕು ಕರವೇ ಪ್ರಭಾರ ತಹಶೀಲ್ದಾರ್‌ಗೆ ದೂರು ಸಲ್ಲಿಸಿದರು.

ಶ್ರೀರಂಗಪಟ್ಟಣ: ತಾಲೂಕಿನ ಆರತಿ ಉಕ್ಕಡದ ಅಹಲ್ಯಾದೇವಿ ಮಾರಮ್ಮ ದೇವಾಲಯದಲ್ಲಿ ತಡೆ, ಕಟ್ಟೆ ಮತ್ತು ಮೊಟ್ಟೆ ಒಡೆಯುವರು ಭಕ್ತರಿಂದ ಹೆಚ್ಚುವರಿಯಾಗಿ ಹಣ ವಸೂಲಿ ಮಾಡುತ್ತಿದ್ದು, ಅದನ್ನು ತಡೆಯಬೇಕು ಎಂದು ಆಗ್ರಹಿಸಿ ಬುಧವಾರ ತಾಲೂಕು ಕರವೇ ಪದಾಧಿಕಾರಿಗಳು ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಅಹಲ್ಯಾದೇವಿ ದೇವಾಲಯದಲ್ಲಿ ತಡೆ ಒಡೆಯಲು, ಕಲ್ಯಾಣಿಯಲ್ಲಿ ಕಟ್ಟೆ ಒಡೆಯಲು ಮತ್ತು ಮೊಟ್ಟೆ ಒಡೆಯಲು ಪ್ರತ್ಯೇಕವಾಗಿ ಹಣ ಕೇಳುತ್ತಾರೆ. ಹಣ ಸುಲಿಗೆ ಮಾಡುತ್ತಿದ್ದಾರೆ. ಪ್ರಶ್ನಿಸಿದರೆ ಧಮಕಿ ಹಾಕುತ್ತಾರೆ. ಕೇಳಿದಷ್ಟು ಹಣ ಕೊಡದಿದ್ದರೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಆಗಾಗ ಭಕ್ತರ ಮೇಲೆ ಹಲ್ಲೆ ಪ್ರಕರಣಗಳೂ ನಡೆಯುತ್ತಿವೆ. ಮುಜರಾಯಿ ಇಲಾಖೆ ಅಧಿಕಾರಿಗಳಿಗೆ ದೂರು ನೀಡಿದರೂ ಕ್ರಮ ವಹಿಸುತ್ತಿಲ್ಲ ಎಂದು ಕರವೇ ತಾಲೂಕು ಘಟಕದ ಅಧ್ಯಕ್ಷ ಚಂದಗಾಲು ಶಂಕರ್ ದೂರಿದರು.


ಈ ಬಗ್ಗೆ ತಾಲೂಕು ಆಡಳಿತ ಗಮನ ಹರಿಸಿ ಭಕ್ತರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು ಎಂದು ಅರಕೆರೆ ಎ.ಎಂ. ಜಗದೀಶ್ ಮನವಿ ಮಾಡಿದರು.

ಅಹಲ್ಯಾದೇವಿ ಮಾರಮ್ಮನ ಭಕ್ತರಿಂದ ದೇವಾಲಯದಲ್ಲಿ ಅನಗತ್ಯವಾಗಿ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಸಾಕಷ್ಟು ದೂರುಗಳು ಬಂದಿವೆ. ಆದಷ್ಟು ಶೀಘ್ರ ಧಾರ್ಮಿಕ ಆಚರಣೆ ನಡೆಸುವವರು ಮತ್ತು ವ್ಯಾಪಾರಿಗಳ ಸಭೆ ನಡೆಸಲಾಗುವುದು. ಭಕ್ತರಿಗೆ ತೊಂದರೆ ನೀಡದಂತೆ ಸೂಚನೆ ನೀಡಲಾಗುವುದು.

ಎಚ್.ಎಸ್. ಮಹೇಶ್, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 29 – ಚಿಕ್ಕಮಂಡ್ಯ ಎಂ.ಯು.ಎಸ್.ಎಸ್ ನಿಂದ ಹೊರಡುವ ಎಫ್–12 ಗೋಪಾಲಪುರ ಐ.ಪಿ ಮಾರ್ಗದ ಲಿಂಕ್ ಲೈನ್ ಕಾಮಗಾರಿ ಇರುವುದರಿಂದ



ಮೇ 30 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಗೋಪಾಲಪುರ, ಹೆಚ್. ಕೋಡಿಹಳ್ಳಿ, ಹೆಚ್.ಕೋಡಿಹಳ್ಳಿ ಫಾರಂ, ಹೆಚ್.ಮಲ್ಲಿಗೆರೆ, ಹೆಚ್.ಮಲ್ಲಿಗೆರೆ ಫಾರಂ, ಜೀಗುಂಡಿಪಟ್ಟಣ, ಮತ್ತು ಬಿ. ಹೊಸೂರು ಕಾಲೋನಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಚಾವಿಸ ನಿನಿ ಕೆರಗೋಡು ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಎಸ್.ಶ್ರೀಕಾಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.4ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆಗೆ ಒತ್ತಾಯ

ಮಂಡ್ಯ: ರಾಜ್ಯ ಹಾಗೂ ಜಿಲ್ಲೆಯ ಎಲ್ಲಾ ಜನತೆ ಜೂ.4ರಂದು ಮೈಸೂರು ಭಾಗದ ಅಭಿವೃದ್ಧಿಯ ಹರಿಕಾರ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿಯನ್ನು ಆಚರಿಸಬೇಕು ಎಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್‌ನ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜಿಲ್ಲೆಯ ಎಲ್ಲ ಹಳ್ಳಿಗಳು, ಪಟ್ಟಣಗಳ ಜನರು ಸ್ವಯಂ ಪ್ರೇರಣೆಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ ಆಚರಣೆ ಮಾಡಬೇಕು ಎಂದರು.

ಜಿಲ್ಲಾಡಳಿತ, ಜಿ.ಪಂ ಸಿಇಓ ಅವರು ವಿಶೇಷ ಆದೇಶ ಹೊರಡಿಸಿ ಜಿಲ್ಲಾದ್ಯಂತ ಇರುವ ಶಾಲೆ–ಕಾಲೇಜುಗಳು, ಹಾಸ್ಟೆಲ್‌ಗಳು, ವಸತಿ ಶಾಲೆಗಳು, ಗ್ರಾಪಂ ಕಚೇರಿ, ನಾಡಾ ಕಚೇರಿ ಹಾಗೂ ಎಲ್ಲ ಸರಕಾರಿ ಕಚೇರಿಗಳಲ್ಲಿ ಮಹಾರಾಜರ ಜಯಂತಿ ಆಚರಣೆ ಮಾಡಿ, ಉಪನ್ಯಾಸ ನೀಡುವ ಮೂಲಕ ಅವರನ್ನು ಸ್ಮರಿಸುವಂತೆ ಮಾಡಬೇಕೆಂದು ಕೋರಿದರು.

ಜಿಲ್ಲೆಯ ಎಲ್ಲ ಸಂಘ ಸಂಸ್ಥೆಗಳು, ಸಾರ್ವಜನಿಕರು ಸಹ ಸ್ವಯಂಪ್ರೇರಣೆಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ, ಅನ್ನದಾನ ಮಾಡುವ ಮೂಲಕ ಗೌರವ ಸಮರ್ಪಿಸಲು ಮುಂದಾಗಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಕೆ.ಟಿ.ಜಗದೀಶ್, ಸಹಕಾರ್ಯದರ್ಶಿ ಬಿ.ಎಂ.ದೇವೇಗೌಡ, ಸಾಂಸ್ಕೃತಿ ಕಾರ್ಯದರ್ಶಿ ಟಿ.ಡಿ.ನಾಗರಾಜು, ಪ್ರಧಾನ ಸಂಚಾಲಕ ಚಂದ್ರಶೇಖರ ದ.ಕೋ.ಹಳ್ಳಿ ಇದ್ದರು.

ನದಿಯಲ್ಲಿ ಮುಳುಗಿ ಬಾಲಕ ಸಾವು

ಶ್ರೀರಂಗಪಟ್ಟಣ: ಬಾಲಕನೊಬ್ಬ ಕಾವೇರಿ ನದಿಯಲ್ಲಿ ಸ್ನೇಹಿತರೊಂದಿಗೆ ಈಜಲು ಹೋಗಿ ಮೃತ ಪಟ್ಟಿರುವ ಘಟನೆ ಚಂದಗಾಲು ಗ್ರಾಮದ ಬಳಿ ನದಿಯಲ್ಲಿ ಸಂಭವಿಸಿದೆ



ನಗುವನಹಳ್ಳಿ ಗ್ರಾಮದ ರವಿ ಎಂಬುವರ ಪುತ್ರ ಮಾದೇಶ (15) ಮೃತ ಬಾಲಕ. ಈತ 9 ನೇ ತರಗತಿಯಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದು, ಬೇಸಿಗೆ ರಜೆ ಹಿನ್ನೆಲೆ ಸ್ನೇಹಿತರೊಂದಿಗೆ ಪಕ್ಕದ ಕಾವೇರಿ ನದಿಯಲ್ಲಿ ನೀರಲ್ಲಿ ಈಜಾಡುವ ವೇಳೆ ನೀರಲ್ಲಿ ಮುಳುಗಿ ಸಾವನ್ನಪ್ಪಿರುವ ಮಾಹಿತಿ ಲಭ್ಯವಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ

ತಿರುಮಲೇಗೌಡ ನಿಧನ



ಶ್ರೀರಂಗಪಟ್ಟಣ: ಕೆ.ಆರ್.ಸಾಗರ ಗ್ರಾಮದ ಹಿರಿಯ ನಾಗರೀಕರಾದ ನಿವೃತ್ತ ಹಿರಿಯ ಆರೋಗ್ಯ ನಿರೀಕ್ಷಕ ತಿರುಮಲೇಗೌಡ(91) ಶುಕ್ರವಾರ ನಿಧನ ಹೊಂದಿದ್ದಾರೆ. ತಿರುಮಲೇಗೌಡ ಹಲವು ದಿನಗಳಿಂದ ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮೃತರು ಪತ್ನಿ, ಹೊನ್ನಮ್ಮ, ನಾಲ್ವರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಮೃತರ ಅಂತ್ಯಕ್ರಿಯೆ ಶನಿವಾರ ಕೆ.ಆರ್.ಸಾಗರದ ಕಾವೇರಿ ನದಿ ತೀರದ ರುದ್ರ ಭೂಮಿಯಲ್ಲಿ ನಡೆಯಲಿದೆ.

ಮೂರನೇ ಪುಟದಿಂದ

ಮುಂದುವರೆಯುತ್ತೇನೆ; ಡಿಕೆಶಿ ವಾಗ್ದಾನ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ, ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿ ಅವರೊಂದಿಗೆ ಕಾರ್ಯನಿರ್ವಹಿಸಿದ್ದು ನನ್ನ ಸುದೈವ. ಕರ್ನಾಟಕದ ಜನತೆಗೆ ಅವರ ಸೇವೆ ಮತ್ತು ನಾಯಕತ್ವಕ್ಕಾಗಿ ಹೃತ್ಪೂರ್ವಕ ಕೃತಜ್ಞತೆ ಮತ್ತು ಆಳವಾದ ಗೌರವ ವ್ಯಕ್ತಪಡಿಸುತ್ತೇನೆ. ಅವರ ಅಧಿಕಾರಾವಧಿಯಲ್ಲಿ ಜಾರಿಗೆ ತಂದ ಹಲವು ಸಾರ್ವಜನಿಕ ಕಲ್ಯಾಣ ಯೋಜನೆ ಮತ್ತು ಅನೇಕ ಅಭಿವೃದ್ಧಿ ಉಪಕ್ರಮಗಳ ಪ್ರಭಾವ ಕರ್ನಾಟಕದ ಬೆಳವಣಿಗೆಯ ಇತಿಹಾಸದಲ್ಲಿ ಮಹತ್ವದ ಅಧ್ಯಾಯಗಳಾಗಿ ಉಳಿಯಲಿವೆ.

ಸಾರ್ವಜನಿಕ ಜೀವನದಲ್ಲಿ ಐದು ದಶಕಗಳ ಕಾಲ ಜನಕೇಂದ್ರಿತ ಆಡಳಿತ ಮತ್ತು ಅಂತರ್ಗತ ನಾಯಕತ್ವದ ಮೂಲಕ ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಸ್ವರೂಪ ರೂಪಿಸಿದ್ದಾರೆ. ನನಗೆ ಕೆಪಿಸಿಸಿ ಅಧ್ಯಕ್ಷರಾಗಿ 2020ರಲ್ಲಿ ಜವಾಬ್ದಾರಿ ವಹಿಸಿದ ಸಮಯದಿಂದ ಇದುವರೆಗೆ ನನ್ನ ಪಕ್ಕದಲ್ಲಿ ಒಂದು ಬಲಿಷ್ಠ ಸ್ತಂಭದಂತೆ ದೃಢವಾಗಿ ನಿಂತಿದ್ದಾರೆ. ನಾವಿಬ್ಬರೂ ಹೆಗಲಿಗೆ ಹೆಗಲು ಕೊಟ್ಟು ಪಕ್ಷ ಬಲಪಡಿಸಲು ಮತ್ತು ದೂರದೃಷ್ಟಿಯನ್ನು ಜನರಿಗೆ ತಲುಪಿಸಲು ಒಟ್ಟಾಗಿ ಶ್ರಮಿಸಿದ್ದೇವೆ. ಅವರ ಅನುಭವ, ಬುದ್ಧಿವಂತಿಕೆ ಹಾಗೂ ರಾಜಕೀಯ ದೂರದೃಷ್ಟಿಯಿಂದ ನಿರಂತರವಾಗಿ ಕಲಿಯುವುದು ನನ್ನ ಸೌಭಾಗ್ಯ, ಕರ್ನಾಟಕದ ಪ್ರಗತಿ ಮತ್ತು ಕಲ್ಯಾಣಕ್ಕಾಗಿ ಶ್ರಮಿಸುವಾಗ, ಮುಂಬರುವ ವರ್ಷಗಳಲ್ಲಿ ಅವರ ಮಾರ್ಗದರ್ಶನ ನಮ್ಮೆಲ್ಲರಿಗೂ ಸ್ಫೂರ್ತಿ ಮತ್ತು ಶಕ್ತಿ ನೀಡುತ್ತಾ ಮುಂದುವರಿಯುತ್ತದೆ ಎಂಬುದಾಗಿ ಪ್ರಾಮಾಣಿಕವಾಗಿ ಆಶಿಸುತ್ತೇನೆ. ಗಾದೆ ಮಾತಿನಲ್ಲಿ ಹೇಳುವುದಾದರೆ ನೀವು ವೇಗವಾಗಿ ನಡೆಯಬೇಕಾದರೆ, ಒಬ್ಬರೇ ನಡೆಯಿರಿ, ಆದರೆ ನೀವು ಸುದೀರ್ಘ ದೂರ ಸಾಗಬೇಕಾದರೆ, ಒಟ್ಟಿಗೆ ನಡೆಯಿರಿ ಎಂಬುದಾಗಿದ್ದು, ಕರ್ನಾಟಕದ ಜನತೆಗಾಗಿ ಪಯಣವನ್ನು ಒಟ್ಟಿಗೆ ಮುನ್ನಡೆಸಲು ಎದುರು ನೋಡುತ್ತಿದ್ದೇನೆ ಎಂದಿದ್ದಾರೆ.

ರಾಮನಗರದಿಂದ 50 ಸಾವಿರ ಜನ!

ವಚನ ಸ್ವೀಕರಿಸಬೇಕು ಎನ್ನುವುದು ಇಡೀ ರಾಮನಗರ ಜಿಲ್ಲೆಯ ಜನರ ಕನಸು. ಈಗ ಆ ಸುದಿನ ಹತ್ತಿರ ಬಂದಿದೆ. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ನಮ್ಮ ಜಿಲ್ಲೆಯಿಂದ ಜನರನ್ನು ಕರೆದುಕೊಂಡು ಹೋಗುವುದು ನಮ್ಮ ಜವಾಬ್ದಾರಿ. ಇದಕ್ಕಾಗಿ ಬಸ್ಸು, ವಾಹನಗಳು ಹಾಗೂ ಊಟ–ತಿಂಡಿಯ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಇದು ನಮ್ಮದೇ ಕಾರ್ಯಕ್ರಮ ಎಂಬಂತೆ ಪ್ರತಿಯೊಬ್ಬರೂ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ ಎಂದರು.

ಜಿಲ್ಲೆಯ ಸಿದ್ಧತೆಗಳ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲೆಯಿಂದ ಒಟ್ಟು 40 ರಿಂದ 50 ಸಾವಿರ ಜನ ಭಾಗಿಯಾಗುವ ನಿರೀಕ್ಷೆಯಿದೆ. ಜಿಲ್ಲೆಯ ಪ್ರತಿ ವಿಧಾನ ಸಭಾ ಕ್ಷೇತ್ರದಿಂದ ಕನಿಷ್ಠ 10 ಸಾವಿರ ಕಾರ್ಯಕರ್ತರನ್ನು ಕರೆತರಲು ಯೋಜನೆ ರೂಪಿಸಲಾಗಿದೆ. ಬಹುಶಃ ಮುಂದಿನ ಬುಧವಾರದೊಳಗೆ ಅಥವಾ ಅದಕ್ಕಿಂತ ಮೊದಲೇ ಪ್ರಮಾಣ ವಚನ ಕಾರ್ಯಕ್ರಮ ನಡೆಯುವ ಸಾಧ್ಯತೆಯಿದೆ. ಶನಿವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ (CLP) ಪ್ರಮುಖ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ದಿನಾಂಕ ಸೇರಿದಂತೆ ಎಲ್ಲಾ ಅಂತಿಮ ತೀರ್ಮಾನಗಳು ಹೊರಬೀಳಲಿವೆ ಎಂದು ತಿಳಿಸಿದರು.

ನಾಯಕರ ಭೇಟಿಯಾದ ಸಿದ್ದರಾಮಯ್ಯ




ದೆಹಲಿಯಲ್ಲಿ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿಯಾಗಿ ಮಾತುಕತೆ ನಡೆಸಿದರು.

ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುವ ಮೂಲಕ ಸಮಾನತೆ, ಸಾಮರಸ್ಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಶ್ರಮಿಸಿದ್ದಾರೆ. ಸಾರ್ವಜನಿಕ ಜೀವನ ಮತ್ತು ಕರ್ನಾಟಕ ಮತ್ತು ಕಾಂಗ್ರೆಸ್‌ಗೆ ನೀಡಿದ ಕೊಡುಗೆಗೆ ಕೃತಜ್ಞರಾಗಿದ್ದು, ಅವರಿಗೆ ಉತ್ತಮ ಆರೋಗ್ಯ ಲಭಿಸಲಿ, ಜನರ ನಿರಂತರ ಸೇವೆಯಲ್ಲಿ ತೊಡಗಿಸಿಕೊಳ್ಳಲಿ ಎಂದು ಆಶಿಸಿದ್ದಾರೆ.

ಪಕ್ಷದ ವರಿಷ್ಠರ ಮಾತಿಗೆ ಬೆಲೆಕೊಟ್ಟು ಮುಖ್ಯಮಂತ್ರಿ ಸ್ಥಾನ ತ್ಯಜಿಸಿದ ಸಿದ್ದರಾಮಯ್ಯ ಅವರ ಬಗ್ಗೆ ರಾಹುಲ್ ಗಾಂಧಿ ಪ್ರಶಂಸಿಸಿ ತುಂಬ ಪ್ರೀತಿ ತೋರಿದ್ದಾರೆ. ಅಧಿನಾಯಕಿ ಸೋನಿಯಾ ಗಾಂಧಿ ನಿವಾಸಕ್ಕೆ ಪ್ರವೇಶಿಸುತ್ತಿದ್ದಂತೆ ಅವರನ್ನು ಗಟ್ಟಿಯಾಗಿ ತಬ್ಬಿಕೊಂಡು, ಅಭಿನಂದನೆ ಸಲ್ಲಿಸಿದರು. ಅವರ ಕೈಹಿಡಿದುಕೊಂಡೇ ಸೋನಿಯಾ ಗಾಂಧಿ ಬಳಿ ಕರೆದೊಯ್ದು, ರಾಜಕೀಯ ವಿಚಾರಗಳ ಕುರಿತು ಚರ್ಚಿಸಿದರು ಎನ್ನಲಾಗಿದೆ

ಪಕ್ಷಿಧಾಮದ ದ್ವೀಪಗಳ ಸಂರಕ್ಷಣೆ



ಪ್ರಾಧಿಕಾರವು ರಂಗನ ತಿಟ್ಟು ಪಕ್ಷಿಧಾಮದ ಕಡೆಗೆ ಹೈವೆಯಿಂದ ಹಸಿರು ವಲಯ ನಿರ್ಮಾಣ ಮಾಡಬೇಕು. ಹೈವೆಯಲ್ಲಿ ಪರಿಸರ ಸಂರಕ್ಷಣೆ, ಪಕ್ಷಿಧಾಮದ ಕುರಿತು ಜಾಗೃತಿ ಫಲಕ ಅಳವಡಿಸಬೇಕು. ಪಕ್ಷಿಧಾಮದಲ್ಲಿ ಕೆರೆಗಳಿದ್ದರೆ ಅವುಗಳನ್ನು ಅಭಿವೃದ್ಧಿಪಡಿಸಬೇಕೆಂಬ ನಿಯಮ ರೂಪಿಸಲಾಗಿತ್ತು. ಆದರೆ ಪಕ್ಷಿಧಾಮದಲ್ಲಿ ಕೆರೆಗಳಿಲ್ಲದ ಕಾರಣ ಪ್ರಮುಖ ದ್ವೀಪಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸೂಚಿಸಲಾಗಿತ್ತು.

ಗೇಬಿಯನ್ ಸ್ಟ್ರಕ್ಚರ್: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಂಗನತಿಟ್ಟಿನಲ್ಲಿನ 6 ದ್ವೀಪಗಳನ್ನು ಗೇಬಿಯನ್ ಸ್ಟ್ರಕ್ಚರ್ ಮೂಲಕ ಅಭಿವೃದ್ಧಿಪಡಿಸುತ್ತಿದೆ. ಇದು ನೈಸರ್ಗಿಕ ವಿಧಾನವಾಗಿದ್ದು, ಪರಿಸರದ ಮೇಲೆ ಯಾವುದೇ ಕೆಟ್ಟ ಪರಿಣಾಮ ಬೀರುವುದಿಲ್ಲ. ದ್ವೀಪದ ರಕ್ಷಣೆಗೆ ಬೃಹತ್ ಗಾತ್ರದ ಕಲ್ಲು, ಸೈಜುಗಲ್ಲನ್ನು ಬಳಸಲಾಗುತ್ತಿದ್ದು, ಇದರಿಂದ ಪ್ರವಾಹದ ನೀರಿನಿಂದ ದ್ವೀಪಗಳನ್ನು ರಕ್ಷಣೆ ಮಾಡಿದಂತಾಗಲಿದೆ. ಕಲ್ಲನ್ನು ಜೋಡಣೆ ಮಾಡಿದ ಬಳಿಕ ಸುತ್ತಲೂ ಮೆಶ್ ಅಳವಡಿಸಲಾಗುತ್ತಿದೆ. ಇದರಿಂದ ಜೋಡಣೆ ಮಾಡಿರುವ ಕಲ್ಲುಗಳು ಕದಲದಂತೆ ರಕ್ಷಣೆ ಒದಗಿಸಿದಂತಾಗಿದೆ. ಕಲ್ಲುಗಳ ನಡುವೆ ಸಿಮೆಂಟ್ ಸೇರಿದಂತೆ ಏನನ್ನು ಬಳಸಿಲ್ಲ. ಇದರಿಂದ ಜೋಡಣೆ ಮಾಡಿರುವ ಕಲ್ಲುಗಳ ನಡುವೆ ರಂಧ್ರಗಳಿದ್ದು, ನೀರಿನಲ್ಲಿ ಕೊಚ್ಚಿಕೊಂಡು ಬರುವ ಮಣ್ಣು(ಜೇಡಿ ಮಣ್ಣು) ಇಲ್ಲಿ ಸಂಗ್ರಹವಾಗುವುದರಿಂದ ಕಲ್ಲುಗಳು ಬಿಗಿಗೊಳ್ಳಲಿವೆ. ಇದರಿಂದ ದ್ವೀಪ ಹಾದು ಬರುವ ನೀರು ಸರಾಗವಾಗಿ ನದಿಗೆ ಸೇರಲು ಕಲ್ಲುಗಳ ನಡುವೆ ಇರುವ ರಂಧ್ರಗಳು ನೆರವಾಗಲಿದೆ.

ರಕ್ಷಣೆಯ ತಡೆಗೋಡೆಯಲ್ಲಿ ಕಾಮಗಾರಿ: ರಂಗನತಿಟ್ಟು ಪಕ್ಷಿಧಾಮದಲ್ಲಿ 200ಕ್ಕೂ ಹೆಚ್ಚು ಮೊಸಳೆಗಳಿವೆ. ಬಹುತೇಕ ಎಲ್ಲಾ ದ್ವೀಪಗಳಲ್ಲೂ ಮೊಸಳೆಗಳಿದ್ದು, ಅವುಗಳಿಂದ ರಕ್ಷಣೆ ಪಡೆದು ದ್ವೀಪಗಳ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಪರಿಣಿತ ಕಾರ್ಮಿಕರು ದ್ವೀಪದ ದುರಸ್ತಿ ಕಾರ್ಯದಲ್ಲಿ ತೊಡಗಿದ್ದಾರೆ. ಕಾಮಗಾರಿ ನಡೆಸುವ ವೇಳೆ ದ್ವೀಪದ ಸುತ್ತಲೂ ಕಬ್ಬಿಣದ ರಾಡ್‌ನ ಮೆಶ್ ಅನ್ನು ಅಳವಡಿಸಿ, ಅದರ ರಕ್ಷಣೆಯಲ್ಲಿ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ.

ಸದ್ಯ ಹಂಗಾಮಿ ಮುಖ್ಯಮಂತ್ರಿ

ಅಂಗೀಕರಿಸಿ, ಮಂತ್ರಿಮಂಡಲ ವಿಸರ್ಜಿಸಿದರು. ಹೊಸ ಸರ್ಕಾರ ರಚನೆಗೊಳ್ಳುವವರೆಗೂ ಹಂಗಾಮಿ ಮುಖ್ಯಮಂತ್ರಿಯಾಗಿ ಮುಂದುವರೆಯುವಂತೆಯು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ. ಮಂತ್ರಿಮಂಡಲ ವಿಸರ್ಜನೆ ಆಗುತ್ತಿದ್ದಂತೆ ಆಡಳಿತ ಮತ್ತು ಸಿಬ್ಬಂದಿ ಇಲಾಖೆ ಸಚಿವರ ಕೊಠಡಿಗಳಿಗೆ ತೂಗುಹಾಕಿದ್ದ ನಾಮಫಲಕಗಳನ್ನು ಕೆಳಗಿಳಿಸಿ, ಕೋಣೆಗಳನ್ನು ಸುಪರ್ದಿಗೆ ತೆಗೆದುಕೊಂಡಿತು.

ನೂತನ ನಾಯಕ ಆಯ್ಕೆ

ಗಳಿಗೆಯಲ್ಲಿ ಪ್ರಮಾಣ ವಚನ ಸಮಾರಂಭವನ್ನು ಕಂಠೀರವ ಕ್ರೀಡಾಂಗಣಕ್ಕೆ ಸ್ಥಳಾಂತರ ಮಾಡುವ ಸಿದ್ಧತೆಯೂ ನಡೆದಿದೆ. ಶಿವಕುಮಾರ್ ಹಾಗೂ ಅವರ ಸಹೋದರ ಡಿ.ಕೆ.ಸುರೇಶ್, ಕೆಲವು ಶಾಸಕರು ಮತ್ತು ಪಕ್ಷದ ಮುಖಂಡರನ್ನು ಸಂಪರ್ಕಿಸಿ, ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆಯುವ ಪ್ರಮಾಣವಚನ ಸಮಾರಂಭಕ್ಕೆ ಆಹ್ವಾನಿಸುತ್ತಿದ್ದಾರೆ.

ಭಾನುವಾರ, ಸೋಮವಾರ ಇಲ್ಲವೇ ಬುಧವಾರದಂದು ಪ್ರಮಾಣವಚನ ಸ್ವೀಕಾರಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ.

ಸಿದ್ದರಾಮಯ್ಯ ಲೋಕಭವನಕ್ಕೆ ತೆರಳಿ ರಾಜೀನಾಮೆ ನೀಡುತ್ತಿದ್ದಂತೆ ಗುರುವಾರ ರಾತ್ರಿಯೇ ದೆಹಲಿಗೆ ದೌಡಾಯಿಸಿದ ಶಿವಕುಮಾರ್, ಇಂದು ಇಡೀ ದಿನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ವರಿಷ್ಠ ನಾಯಕರಲ್ಲಿ ಸರ್ಕಾರ ರಚನೆ ಕುರಿತು ಸಮಾಲೋಚಿಸಿದ್ದಾರೆ. ನಂತರ ಶಾಸಕಾಂಗ ಪಕ್ಷದ ಸಭೆ ನಿಗದಿ ಮಾಡಲಾಯಿತು. ಈ ವೇಳೆ ದೆಹಲಿಯಲ್ಲೇ ಪುತ್ರನೊಂದಿಗೆ ಬಿಡಾರ ಹೂಡಿದ್ದ ಸಿದ್ದರಾಮಯ್ಯ ಅವರನ್ನೂ ಎರಡು–ಮೂರು ಬಾರಿ ಭೇಟಿ ಮಾಡಿ ಸಮಾಲೋಚಿಸಿದರು.

ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ವೇಳೆಯೇ ಮಂತ್ರಿಮಂಡಲಕ್ಕೆ ಯಾರನ್ನು ಸೇರ್ಪಡೆಗೊಳಿಸಬೇಕೆಂಬ ಕುರಿತು ಶಿವಕುಮಾರ್, ವರಿಷ್ಠರಿಗೆ ಸಂಭವನೀಯ ಸಚಿವರ ಪಟ್ಟಿ ನೀಡಿದ್ದಾರೆ ಎನ್ನಲಾಗಿದೆ. ಕಳೆದ ಮೂರು ದಿನಗಳಿಂದ ಮೌನವಾಗಿದ್ದ ಶಿವಕುಮಾರ್, ಇಂದು ದೆಹಲಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ಶನಿವಾರ ಸಂಜೆ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ ಎಂದರು.

ಪಕ್ಷದ ಎಲ್ಲಾ ಶಾಸಕರು ಬೆಂಗಳೂರಿನಲ್ಲೇ ಇರುವಂತೆ ಸೂಚಿಸಲಾಗಿದೆ, ವರಿಷ್ಠರ ಆದೇಶದ ಮೇರೆಗೆ ಸಮಯ ನಿಗದಿ ಪಡಿಸಲಾಗಿದೆ ಎಂದರು. ಮೊದಲು ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಂತರ ಉಳಿದೆಲ್ಲಾ ಪ್ರಕ್ರಿಯೆಗಳು ಪ್ರಾರಂಭವಾಗಲಿದೆ ಎಂದರಲ್ಲದೆ, ಇನ್ನಾವುದೇ ಪ್ರಶ್ನೆಗಳಿಗೆ ಉತ್ತರ ನೀಡಲಿಲ್ಲ.

ನಾಳೆ ಆರ್‌ಸಿಬಿ–ಜಿಟಿ ಈ ಸಾಲಿನ ಐಪಿಎಲ್ ಕಪ್‌ಗೆ ಹಣಾಹಣಿ

ಶುಭ್‌ಮನ್ ಗಿಲ್ ಶತಕದಾಟ; ಜಿಟಿ ಫೈನಲ್ಸ್‌ಗೆ–ಆರ್‌ಆರ್ ಮನೆಗೆ



ನ್ಯೂ ಚಂಡೀಗಢ, ಮೇ 29(ವಿವಿಹೆಚ್)– ನಾಯಕ ಶುಭ್‌ಮನ್ ಗಿಲ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನದಿಂದ ರಾಜಸ್ಥಾನ್ ರಾಯಲ್ ನೀಡಿದ್ದ ಕಠಿಣ ಸವಾಲನ್ನು ಸರಾಗವಾಗಿ ಬೆನ್ನತ್ತಿದ್ದ ಗುಜರಾತ್ ಟೈಟನ್ಸ್ ಐಪಿಎಲ್–2026ರ ಫೈನಲ್ಸ್‌ಗೆ ಅರ್ಹತೆ ಪಡೆದುಕೊಂಡಿತು.

ಇದೇ ಮೇ.31 ರಂದು ಗುಜರಾತ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ಸ್ ಪಂದ್ಯದಲ್ಲಿ ಟ್ರೋಫಿಗಾಗಿ ಡಿಫೆಂಡಿಂಗ್ ಚಾಂಪಿಯನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. ಇಲ್ಲಿನ ಮುಲ್ಲನ್‌ಪುರ ಮಹಾರಾಜ ಯಾದವೀಂದ್ರಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಕ್ವಾಲಿಫೈಯರ್–2 ರ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 214 ರನ್ ಪೇರಿಸಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಗುಜರಾತ್ 18.4 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದು ಕೊಂಡು 219 ರನ್ ಗಳಿಸಿ 7 ವಿಕೆಟ್‌ಗಳ ಅಂತರದಿಂದ ಗೆಲುವು ದಾಖಲಿಸಿತು.

ಮೊದಲು ಇನ್ನಿಂಗ್ಸ್ ಆರಂಭಿಸಿದ ರಾಯಲ್ಸ್‌ಗೆ ಅಲ್ಪ ಹಿನ್ನಡೆಯಾಯಿತು. ಯಶಸ್ವಿ ಜೈಸ್ವಾಲ್ ಕೇವಲ 1(2) ಧ್ರುವ ಜುರೇಲ್ 7(6) ಮೊದಲೆರಡು ವಿಕೆಟ್ ಬೇಗನೇ ಕಳೆದುಕೊಂಡಿತು. ಈ ವೇಳೆ ಜೊತೆಯಾದ ವೈಭವ್ ಸೂರ್ಯವಂಶಿ ಹಾಗೂ ರವೀಂದ್ರ ಜಡೇಜಾ ಜೋಡಿ ಮೂರನೇ ವಿಕೆಟ್ 65 ಎಸೆತಗಳಲ್ಲಿ 127 ರನ್ ಕಲೆಹಾಕಿದರು. ಈ ಹಂತದಲ್ಲಿ ಜಡೇಜಾ ಗಾಯಗೊಂಡು ಕೆಲಕಾಲ ಹೊರನಡೆಯಬೇಕಾಯಿತು.

ಈ ವೇಳೆ 47 ಎಸೆತಗಳಲ್ಲಿ 8 ಬೌಂಡರಿ, 7 ಸಿಕ್ಸರ್ ಸಹಿತ 96 ರನ್ ಗಳಿಸಿದ್ದ ವೈಭವ್ ಕ್ಯಾಚಿತ್ತು ಪೆವಿಲಿಯನ್ ಸೇರಿದರು. ಗಾಯದಿಂದ ಚೇತರಿಕೆ ಕಂಡು ಮತ್ತೊಮ್ಮೆ ಕ್ರೀಸ್‌ಗಿಳಿದ ಜಡೇಜಾ, ಡೊನೊವನ್ ಫೆರಾರಿಯಾ ಜೊತೆಗೂಡಿ ಕೇವಲ 16 ಎಸೆತಗಳಲ್ಲಿ 42 ರನ್ ಚಚ್ಚಿದರು. ಫೆರಿರ್‍ರಾ 11 ಎಸೆತಗಳಲ್ಲಿ ಅಜೇಯ 38 ರನ್ ಬಾರಿಸಿದರೆ, ಜಡೇಜಾ ನಾಟ್‌ಔಟ್ ಆಗಿ 45(35) ರನ್ ಕಲೆಹಾಕಿದರು. ಜಿಟಿ ಪರ ಕಗಿಸೊ ರಬಾಡ ಜೇಸನ್ ಹೋಲ್ಡರ್ ತಲಾ 2 ವಿಕೆಟ್, ಮೊಹಮ್ಮದ್ ಸಿರಾಜ್ ಮತ್ತು ಪ್ರಸಿದ್ಧ ಕೃಷ್ಣ ಒಂದೊಂದು ವಿಕೆಟ್ ಪಡೆದರು.

ಆರ್‌ಆರ್ ನೀಡಿದ ಸ್ಪರ್ಧಾತ್ಮಕ ಮೊತ್ತವನ್ನು ಚೇಸ್ ಮಾಡಲು ಮುಂದಾದ ಟೈಟನ್ಸ್‌ಗೆ ಭರ್ಜರಿ ಆರಂಭ ಸಿಕ್ಕಿತು. ಸಾಯಿ ಸುದರ್ಶನ್ ಹಾಗೂ ನಾಯಕ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 167(77) ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಗೆಲುವನ್ನು ಸನಿಹಗೊಳಿಸಿದರು.

ಈ ವೇಳೆ 58(32) ರನ್‌ಗಳಿಸಿ ಆಟವಾಡುತ್ತಿದ್ದ ಸುದರ್ಶನ್, ಬ್ರಿಜೇಶ್ ಶರ್ಮಾ ಓವರ್‌ನಲ್ಲಿ ಪಾಯಿಂಟ್‌ನತ್ತ ರನ್ ಕದಿಯಲು ಹೋಗಿ ಹಿಟ್‌ವಿಕೆಟ್ ಔಟಾಗಿ ಹೊರನಡೆದರು. ಇತ್ತ ಜವಾಬ್ದಾರಿಯಿಂದ ಬ್ಯಾಟಿಂಗ್ ಮಾಡಿದ ನಾಯಕ ಗಿಲ್ 53 ಎಸೆತಗಳಲ್ಲಿ 15 ಬೌಂಡರಿ, 3 ಸಿಕ್ಸರ್ ಸಹಿತ 104ರನ್‌ಗಳೊಂದಿಗೆ ಶತಕ ಪೂರೈಸಿ ಹೊರನಡೆದರು. ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ 16(9), ರಾಹುಲ್ ತೆವಾಟಿಯಾ ಅಜೇಯ 17(9) ಹಾಗೂ ಜಾಸ್ ಬಟ್ಲರ್ ಅಜೇಯ 9(9) ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಆರ್‌ಆರ್ ಪರ ಆರ್ಚರ್, ಬರ್ಗರ್ ಹಾಗೂ ಬ್ರಿಜೇಶ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದರು.

ಮೈಸೂರಲ್ಲಿ ಧಾರಾಕಾರ ಮಳೆ

ಮೈಸೂರು, ಮೇ 29(ಎಸ್‌ಪಿಎನ್)– ಮೈಸೂರಿನಲ್ಲಿ ಶುಕ್ರವಾರ ಸಿಡಿಲು–ಗುಡುಗಿನೊಂದಿಗೆ ಧಾರಾಕಾರ ಮಳೆ ಸುರಿಯಿತು.

ಮೈಸೂರಿನ ಕುವೆಂಪುನಗರ, ರಾಮಕೃಷ್ಣನಗರ, ಸಿದ್ಧಾರ್ಥನಗರ, ಶಾರದಾದೇವಿ ನಗರ ಎನ್.ಆರ್.ಮೊಹಲ್ಲಾ, ಬನ್ನಿ ಮಂಟಪ, ದಟ್ಟಗಳ್ಳಿ, ಕೇರ್ಗಳ್ಳಿ, ಮೂಕಾಂಬಿಕಾ ನಗರದಲ್ಲಿ ಮಳೆ ಸುರಿದಿದೆ. ನಗರದ ಹೃದಯ ಭಾಗ ಹಾಗೂ ಹೊರವಲಯ ದಲ್ಲಿ ನೀರು ಪ್ರವಾಹದಂತೆ ಹರಿದ ಪರಿಣಾಮ ಸಂಚಾರ ಅಸ್ತವ್ಯಸ್ತಗೊಂಡಿತು. ರಾತ್ರಿ ಸುಮಾರು 9 ಗಂಟೆಗೆ ಮಳೆ ಆರಂಭವಾಯಿತು. ಆಗಾಗ ಮಿಂಚು–ಗುಡುಗುಗಳ ಆರ್ಭಟ ಕೂಡ ಕೇಳಿ ಬಂತು. ಸುಮಾರು ಎರಡು ಗಂಟೆ ಕಾಲ ಮಳೆ ಸುರಿದೆ. ತಡರಾತ್ರಿವರೆಗೂ ಮಳೆ ಬರುತ್ತಲೇ ಇತ್ತು. ಇದರಿಂದ ಅಲ್ಲಲ್ಲಿ ಮರದ ಸಣ್ಣಪುಟ್ಟ ರೆಂಬೆ–ಕೊಂಬೆಗಳು ರಸ್ತೆಗೆ ಬಿದ್ದು ವಾಹನಗಳ ಸಂಚಾರಕ್ಕೆ ಸ್ವಲ್ಪ ತೊಂದರೆಯಾಗಿದೆ. ಯಾವುದೇ ಅಪಾಯವಾಗಿಲ್ಲ ಈ ಕುರಿತು ಸಾರ್ವಜನಿಕರಿಂದ ಯಾವುದೇ ಮಾಹಿತಿ ಬಂದಿಲ್ಲ ಎಂದು ಜಿಲ್ಲಾಧಿಕಾರಿಗಳ ಕಂಟ್ರೋಲ್ ರೂಂ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಾಳೆ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ



ಮೈಸೂರು, ಮೇ29(ಜಿಎ)–ಮೈಸೂರಿನ ಚಾಮುಂಡಿಪುರಂನಲ್ಲಿರುವ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಶತಮಾನೋತ್ಸವ ಸಂಭ್ರಮ ಕಾರ್ಯ ಕ್ರಮವನ್ನು ಮೇ 31 ರಂದು ನಗರದ ದಟ್ಟಗಳ್ಳಿಯ ಸಾ.ರಾ. ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8 ಗಂಟೆಗೆ ಲೋಕ ಕಲ್ಯಾಣಾರ್ಥವಾಗಿ 180ಕ್ಕೂ ಹೆಚ್ಚು ದಂಪತಿಗಳಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ. ಬಳಿಕ 11ಗಂಟೆಗೆ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನಡೆಯಲಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಕೆ.ಆರ್. ಮಂಜುನಾಥ್ ಮಾತನಾಡಿ, ಮೈಸೂರಿನಲ್ಲಿ ಸಮುದಾಯದವರ ಸಂಖ್ಯೆ ಏಳರಿಂದ ಎಂಟು ಸಾವಿರ ಇದೆ. ಇದಲ್ಲದೆ ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಸುಮಾರು ನಾಲ್ಕರಿಂದ ಐದು ಲಕ್ಷ ಜನಸಂಖ್ಯೆಯಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹೆಚ್.ಎಸ್. ನಾಗ ಶಯನ, ಹೊಮ್ಮ ಮಂಜುನಾಥ್ ಉಪಸ್ಥಿತರಿದ್ದರು.

ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ

ರೋಟರಿ ಹೆರಿಟೇಜ್ ಕ್ಲಬ್‌ನಿಂದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ



ಮೈಸೂರಿನ ಚೆಲುವಾಂಬ ಮಕ್ಕಳ ಆಸ್ಪತ್ರೆ ಆವರಣದಲ್ಲಿ 'ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು' ವತಿಯಿಂದ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ಮಾ 29– ಮೈಸೂರಿನ ಚೆಲುವಾಂಬ ಮಕ್ಕಳ ಆಸ್ಪತ್ರೆ ಆವರಣದಲ್ಲಿ 'ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು' ವತಿಯಿಂದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.

ಸುಮಾರು ಮೂರು ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಿರುವ ಆರ್‌ಓ ಪ್ಲಾಂಟ್‌ನಲ್ಲಿ ಒಂದು ರೂ.ಗೆ ಒಂದು ಲೀಟರ್ ಶುದ್ಧ ಕುಡಿಯುವ ನೀರು ಪಡೆಯಬಹುದಾಗಿದೆ. ಈ ಘಟಕದಿಂದ ಆಸ್ಪತ್ರೆಗೆ ಬರುವವರು 20–30 ರೂ. ನೀಡಿ ನೀರಿನ ಬಾಟಲ್ ಖರೀದಿಸುವುದು ತಪ್ಪುತ್ತದೆ. ಈ ಮೂಲಕ ಆಸ್ಪತ್ರೆ ಆವರಣದಲ್ಲೇ ಶುದ್ಧ ನೀರು ಪಡೆಯುವುದರ ಜೊತೆಗೆ ಒಂದಷ್ಟು ಹಣವೂ ಉಳಿತಾಯವಾಗಲಿದೆ.

ಈ ಆರ್‌ಓ ಪ್ಲಾಂಟ್ ಲೋಕಾರ್ಪಣೆಗೊಳಿಸಿದ ಸಂದರ್ಭದಲ್ಲಿ ಅಂತರರಾಷ್ಟ್ರೀಯ ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ರೊಟೇರಿಯನ್ ಪಿ.ಕೆ.ರಾಮಕೃಷ್ಣ, ಅಸಿಸ್ಟೆಂಟ್ ಗವರ್ನರ್ ರಾಘವೇಂದ್ರ ಪ್ರಸಾದ್, ಜೋನಲ್ ಲೆಫ್ಟಿನೆಂಟ್ ರೊ.ರವಿ, ಚಿನ್ನ ಬೆಳ್ಳಿ ರೋಟರಿ ಹೆರಿಟೇಜ್ ರತ್ನ ಹಾಗೂ ಕ್ಲಬ್‌ನ ಅಧ್ಯಕ್ಷ ಎಂ.ಎಸ್ ರಾಜು, ಕಾರ್ಯದರ್ಶಿ ಬಾಲಸುಬ್ರಹ್ಮಣ್ಯ, ಕ್ಲಬ್‌ನ ಸಂಸ್ಥಾಪಕ ಅಧ್ಯಕ್ಷ ಮಂಜುನಾಥ್, ಸಮುದಾಯ ಸೇವೆ ನಿರ್ದೇಶಕ ಹೆಚ್.ಎಂ.ವೆಂಕಟೇಶ್, ರೋಟರಿ ಇಮೇಜ್ ಡೆವಲಪ್‌ಮೆಂಟ್ ಚೇರ್ಮನ್ ಕೆ.ಶಿವಪ್ರಕಾಶ್, ಆಸ್ಪತ್ರೆ ಅಧೀಕ್ಷಕ ಲಕ್ಷ್ಮಿಕಾಂತ್, ಕ್ಲಬ್‌ನ ಸದಸ್ಯ ರೊಟೇರಿಯನ್‌ಗಳಾದ ಶಿವಕುಮಾರ್, ರಾಜೇಶ್, ರಮೇಶ್, ಜಗದೀಶ್, ಮಿಂಚು, ಗಣೇಶ್ ಭಟ್, ನಾರಾಯಣ ನಾಯಕ್, ಕೇಶವ ಬಿದರೆ, ಇಸ್ಮಾಯಿಲ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಸೌರಮಾನ ನರಸಿಂಹ ಜಯಂತಿ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶನಿವಾರ (ಮೇ30) ಸೌರಮಾನ ನರಸಿಂಹ ಜಯಂತಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ಅಭಿಷೇಕ ಆರಂಭವಾಗಿ ಮಧ್ಯಾಹ್ನ 12 ಗಂಟೆಗೆ ಮುಕ್ತಾಯಗೊಳ್ಳಲಿದೆ. ನಂತರ ಪ್ರಸಾದ ವಿತರಣೆ ಮಾಡಲಾಗುವುದು ಎಂದು ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ತಿಳಿಸಿದ್ದಾರೆ.

ಚಾಮುಂಡಿಪುರಂ ರಸ್ತೆಯ ದುರಾವಸ್ಥೆ



ಇದು ಮೈಸೂರಿನ ಚಾಮುಂಡಿಪುರಂ ಒಂದನೇ ಮುಖ್ಯ ರಸ್ತೆಯ ದುರಾವಸ್ಥೆ. ಸುಮಾರು ಎರಡು ತಿಂಗಳ ಹಿಂದೆ ಸುಮಾರಾಗಿದ್ದ ಬಡಾವಣೆಯ ರಸ್ತೆಯನ್ನು ಡಾಂಬರೀಕರಣ ಮಾಡುವುದಾಗಿ ಅಗೆದು ಹಾಳು ಮಾಡಿದ್ದು, ನಿವಾಸಿಗಳು ಓಡಾಡಲು ವಾಹನ ಸವಾರರು ಸಂಚರಿಸಲು ಪರದಾಡುವ ಸ್ಥಿತಿ ನಿರ್ಮಿಸಿದ್ದಾರೆ. ಪ್ರತಿನಿತ್ಯ ಇಲ್ಲಿ ಸಣ್ಣಪುಟ್ಟ ಅಪಘಾತಗಳು ಸಂಭವಿಸಿ, ಎದ್ದು ಬಿದ್ದು ಓಡಾಡುವಂತಾಗಿದೆ. ಗುರುವಾರ ಸುರಿದ ಸಾಧಾರಣ ಮಳೆಗೆ ನೀರು ನಿಂತು ಜನಜೀವನ ಅಸ್ತವ್ಯಸ್ತಗೊಂಡಿದೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಬಡಾವಣೆಯ ಬಗ್ಗೆ ತಾತ್ಸಾರ ಮನೋಭಾವ ತಳೆದಿರುವ ಕಾರಣವಾದರೂ ತಿಳಿಯುತ್ತಿಲ್ಲ.

ಮೈಸೂರಿನಲ್ಲಿ ಯಾರ‍್ಯಾರಿಗೆ ಸಚಿವರಾಗುವ ಯೋಗ?

● ಎರಡು ಮಂತ್ರಿ ಸ್ಥಾನಕ್ಕೆ ನಾಲ್ವರಲ್ಲಿ ತೀವ್ರ ಪೈಪೋಟಿ ● ಯಾರು ಹಿತವರು ಡಿಕೆಶಿಗೆ ಈ ನಾಲ್ವರಲ್ಲಿ?



ಮಹದೇವಪ್ಪ | ಕೆ.ವೆಂಕಟೇಶ್ | ತನ್ವೀರ್ ಸೇಠ್ | ಡಾ.ಯತೀಂದ್ರ

ಮೈಸೂರು, ಮೇ29(ಬಿಎಲ್‌ಯು)– ಡಿ.ಕೆ.ಶಿವಕುಮಾರ್ ನೇತೃತ್ವದ ಹೊಸ ಸರ್ಕಾರದಲ್ಲಿ ಮೈಸೂರು ಜಿಲ್ಲೆಯಿಂದ ಯಾರು ಸಚಿವರಾಗುತ್ತಾರೆ ಎಂಬ ಸಹಜ ಕುತೂಹಲವಿದೆ. ಮೈಸೂರು ಜಿಲ್ಲೆಗೆ ಎರಡು ಸಚಿವ ಸ್ಥಾನ ಖಚಿತ. ಹಾಗಾಗಿ ನಾಲ್ವರಲ್ಲಿ ತೀವ್ರ ಪೈಪೋಟಿ ಎದುರಾಗಲಿದೆ.

ಬೆಂಗಳೂರಿನಲ್ಲಿ ನಾಳೆ ಸಿಎಲ್‌ಪಿ ಸಭೆ ನಡೆಯಲಿದ್ದು, ಶಾಸಕಾಂಗ ಪಕ್ಷದ ನೂತನ ನಾಯಕನನ್ನು ಆಯ್ಕೆ ಮಾಡಲಾಗುತ್ತಿದೆ. ಡಿ.ಕೆ.ಶಿವಕುಮಾರ್ ಅವರೇ ಮುಂದಿನ ಮುಖ್ಯಮಂತ್ರಿ ಎಂಬುದು ಖಚಿತವಾಗಿದೆ.

ಹಾಗಾದರೆ ಹೊಸ ಸರ್ಕಾರದಲ್ಲಿ ಮೈಸೂರು ಜಿಲ್ಲೆಯಿಂದ ಯಾರ‍್ಯಾರು ಮಂತ್ರಿಗಳಾಗುತ್ತಾರೆ ಎಂಬ ಸಹಜ ಕುತೂಹಲವಿದೆ. ಮೈಸೂರು ಜಿಲ್ಲೆಗೆ ಎರಡು ಸಚಿವ ಸ್ಥಾನ ಲಭ್ಯವಿದ್ದು, ನಾಲ್ವರಲ್ಲಿ ತೀವ್ರ ಪೈಪೋಟಿ ಏರ್ಪಡಲಿದೆ.

ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ನಡುವೆ ಸಚಿವ ಸ್ಥಾನಕ್ಕೆ ಬಿರುಸಿನ ಪೈಪೋಟಿ ನಡೆಯಲಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರು ಮಗನನ್ನು ಉಪಮುಖ್ಯಮಂತ್ರಿ ಮಾಡಬೇಕೆಂಬ ಬೇಡಿಕೆಗೆ ರಾಹುಲ್ ಗಾಂಧಿ ಅವರು ಸಮ್ಮತಿ ಸೂಚಿಸಿದ್ದಾರೆ ಎನ್ನಲಾಗಿದೆ. ಈ ಮೂಲಕ ಯತೀಂದ್ರ ಅವರಿಗೆ ಸಚಿವ ಸ್ಥಾನ ದೊರೆಯುವುದು ಬಹುತೇಕ ಖಚಿತ ಎನ್ನಬಹುದು.

ಇನ್ನೊಂದು ಸಚಿವ ಸ್ಥಾನ ತನ್ವೀರ್ ಸೇಠ್ ಅವರಿಗೆ ದಕ್ಕುವ ಸಾಧ್ಯತೆ ಇದೆ. ತನ್ವೀರ್ ನರಸಿಂಹರಾಜ ಕ್ಷೇತ್ರದ ಉಪ ಚುನಾವಣೆಗೆ ಸ್ಪರ್ಧೆ ಮಾಡಿದಾಗ ಇದೇ ಡಿ.ಕೆ.ಶಿವಕುಮಾರ್ ಅವರು ಮೈಸೂರಿನಲ್ಲೆ 15 ದಿನ ವಾಸ್ತವ್ಯ ಹೂಡಿ ತನ್ವೀರ್ ಸೇಠ್ ಗೆಲ್ಲಿಸಿಕೊಂಡಿದ್ದರು. ಈ ಮೂಲಕ ಹಲವು ವರ್ಷಗಳಿಂದ ತನ್ವೀರ್‌ಸೇಠ್‌ಗೆ ಡಿ.ಕೆ.ಶಿವಕುಮಾರ್ ಅವರೊಡನೆ ಒಡನಾಟವಿದೆ. ಅಲ್ಲದೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಸಚಿವ ಸ್ಥಾನ ವಂಚಿತರಾಗಿದ್ದ ತನ್ವೀರ್ ಸೇಠ್ ಅವರಿಗೆ ಈ ಬಾರಿ ಅಧಿಕಾರ ನೀಡಲು ಡಿ.ಕೆ.ಶಿವಕುಮಾರ್ ಖಂಡಿತ ಮುಂದಾಗುತ್ತಾರೆ ಎಂಬ ಮಾತುಗಳು ಕೇಳಿ ಬಂದಿವೆ.

ಇನ್ನು ಡಾ.ಮಹದೇವಪ್ಪ ಹಾಗೂ ವೆಂಕಟೇಶ್ ಅವರ ಸಚಿವ ಸ್ಥಾನ ಸಿಗುವುದೇ ಎಂಬ ಸಂಶಯ ಎದುರಾಗಿದೆ. ಈ ಇಬ್ಬರು ಸಿದ್ದರಾಮಯ್ಯ ಅವರ ಅತ್ಯಾಪ್ತರು. ಅಲ್ಲದೆ ಆರಂಭದಿಂದಲೇ ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿಕೊಂಡು ಬಂದವರು.

ಎಲ್ಲವನ್ನೂ ಕಾಲ ನಿರ್ಧರಿಸುತ್ತದೆ ಎಂದು ಡಿ.ಕೆ.ಶಿವಕುಮಾರ್ ಹೇಳಿಕೆ ನೀಡಿದಾಗಲೆಲ್ಲಾ, ಸದ್ಯಕ್ಕೆ ಮುಖ್ಯಮಂತ್ರಿ ಖುರ್ಚಿ ಖಾಲಿ ಇಲ್ಲ ಎಂದು ತಿರುಗೇಟು ನೀಡುತ್ತಿದ್ದರು. ಇದರಿಂದ ಡಾ.ಮಹದೇವಪ್ಪ ಹಾಗೂ ವೆಂಕಟೇಶ್ ಅವರಿಗೆ ಡಿ.ಕೆ. ಶಿವಕುಮಾರ್ ಅವರು ಮಣೆ ಹಾಕುವರೇ ಎಂಬುದ ಕಾದು ನೋಡಬೇಕಿದೆ.

ಮೂಲ ಕಾಂಗ್ರೆಸಿಗರೇ ಟಾನಿಕ್: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೆ ಹಲವು ವರ್ಷಗಳಿಂದ ಅಧಿಕಾರ ಇಲ್ಲದೆ ಮರೆಯಲ್ಲಿದ್ದ ಹಲವು ಮೂಲ ಕಾಂಗ್ರೆಸ್ ನಾಯಕರಿಗೆ ಅಧಿಕಾರ ದೊರೆಯಲಿದೆ ಎನ್ನಲಾಗಿದೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ವೇಳೆ ಜೆಡಿಎಸ್‌ನಲ್ಲಿ ತಮ್ಮೊಡನೆ ಇದ್ದ ಹಲವರಿಗೆ ಅಧಿಕಾರ ನೀಡಿದ್ದರು. ಇದರಿಂದ ಮೂಲ ಕಾಂಗ್ರೆಸಿಗರಿಗೂ, ವಲಸಿಗರಿಗೂ ಜಟಾಪಟಿ ನಡೆಯುತ್ತಿತ್ತು. ಈ ವಿಚಾರವಾಗಿ ಕಾಂಗ್ರೆಸ್ ಕಚೇರಿಯಲ್ಲಿ ಗಲಾಟೆಗಳೇ ನಡೆದಿತ್ತು. ಆದರೆ ಕಾಂಗ್ರೆಸ್‌ಗೆ ನಿಷ್ಠರಾಗಿರುವ ಡಿ.ಕೆ.ಶಿವಕುಮಾರ್ ಅವರು ಮೂಲ ಕಾಂಗ್ರೆಸ್ ನಾಯಕರನ್ನು ಗುರುತಿಸಿ ಅಧಿಕಾರ ನೀಡಲಿದ್ದಾರೆ ಎಂಬ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಕೇಳಿ ಬರುತ್ತಿವೆ.

ಇದರಿಂದ ಅಧಿಕಾರದ ಆಸೆ ಬಿಟ್ಟು ನಿರಾಸೆಯಲ್ಲಿದ್ದ ಮೂಲ ಕಾಂಗ್ರೆಸ್‌ನವರಿಗೆ ಈಗ ಟಾನಿಕ್ ಸಿಕ್ಕಿದಂತಾಗಿದ್ದು, ಯಾರ‍್ಯಾರಿಗೆ ಅಧಿಕಾರ ದೊರೆಯುತ್ತದೆ ಎಂಬ ಸಹಜ ಕುತೂಹಲವಿದೆ.

ಫೆವಿಕಾಲ್‌ನಂತೆ ಅಂಟಿಕೊಂಡಿದ್ದ ಅಧಿಕಾರಿಗಳಿಗೆ ಗೇಟ್ ಪಾಸ್ ನಿಶ್ಚಿತ

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಮೂರು ವರ್ಷಗಳು ಹಲವು ಹಿರಿಯ ಅಧಿಕಾರಿಗಳು ಜಾಗ ಬಿಟ್ಟು ಕದಲಿಲ್ಲ. ಪೊಲೀಸ್, ಕಂದಾಯ ಸೇರಿದಂತೆ ಇತರೆ ಇಲಾಖೆಗಳಲ್ಲಿ ಜಾಂಡ ಹೂಡಿರುವ ಅಧಿಕಾರಿಗಳಿಗೆ ಡಿ.ಕೆ.ಶಿವಕುಮಾರ್ ಅವರು ಗೇಟ್ ಪಾಸ್ ನೀಡುವುದಂತೂ ನಿಶ್ಚಿತ ಎನ್ನಲಾಗಿದೆ.

ಜಾತಿ, ರಾಜಕೀಯ ಪ್ರಭಾವ, ಹಣ ಸೇರಿದಂತೆ ಇತರೆ ಕಾರಣಗಳಿಂದ ಹಲವು ಅಧಿಕಾರಿಗಳು ಮೂರು ವರ್ಷಗಳಿಂದ ಫೆವಿಕಾಲ್ ಹಾಕಿ ಅಂಟಿಕೊಂಡಿದ್ದಾರೆ. ಬೆಳಿಗ್ಗೆ ವರ್ಗಾವಣೆಯಾದರೆ ಸಂಜೆ ವೇಳೆಗೆ ಅದನ್ನು ರದ್ದು ಮಾಡಿ ಅದೇ ಸ್ಥಾನದಲ್ಲಿ ಮುಂದುವರೆಯುವಷ್ಟು ಪ್ರಭಾವಿಗಳಾಗಿದ್ದಾರೆ.

ಆದರೆ, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೆ ಈ ಅಧಿಕಾರಿಗಳಿಗೆ ಕೊಕ್ ಕೊಟ್ಟು ತಮಗೆ ನಿಷ್ಠರಾಗಿರುವವರನ್ನು ನೇಮಕ ಮಾಡುತ್ತಾರೆ ಎನ್ನಲಾಗಿದೆ. ಒಂದು ಸರ್ಕಾರ ಅಧಿಕಾರ ಕಳೆದುಕೊಂಡಾಗ ಅಸ್ತಿತ್ವಕ್ಕೆ ಬರುವ ಹೊಸ ಸರ್ಕಾರದ ಅವಧಿಯಲ್ಲಿ ಅಧಿಕಾರಿಗಳ ವರ್ಗಾವಣೆ ಸರ್ವೆ ಸಾಮಾನ್ಯವಾದ ಪ್ರಕ್ರಿಯೆ ಆಗಿರುತ್ತದೆ.

ರೆಬೆಲ್ ಸ್ಟಾರ್ ಅಂಬರೀಷ್ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಲ್ಲಿ ಸಂಗೀತ ಗಾಯನ



ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಮೇ 29(ವಿವಿಹೆಚ್)– ರೆಬೆಲ್ ಸ್ಟಾರ್ ಅಂಬರೀಷ್ ಹುಟ್ಟುಹಬ್ಬದ ಪ್ರಯುಕ್ತ ನಗರದ ಪುರಭವನ ಆವರಣದಲ್ಲಿ ಗಾನ ನಂದನ ವತಿಯಿಂದ ಶುಕ್ರವಾರ ಆಯೋಜಿಸಲಾಗಿದ್ದ 'ಕಿನ್ನರ ಲೋಕದ ಗಿಣಿಯೇ' ಸಂಗೀತ ಗಾಯನ ಕಾರ್ಯಕ್ರಮದಲ್ಲಿ ಅಂಬರೀಷ್ ಅವರ ಗೀತೆಗಳು ಮೇಳೈಸಿದವು.

ಗಾಯಕರಾದ ಡಾ.ಎ.ಎಸ್.ಪೂರ್ಣಿಮಾ, ಡಾ.ಲತಾ ಮನೋಹರ್, ನಾಗೇಂದ್ರ, ಚೇತನ್, ಕವಿತಾ, ಶಾಂತಿ ಶಿವಕುಮಾರ್ ತಮ್ಮ ಕಂಠದ ಮೂಲಕ ದೇವಲೋಕ, ಪ್ರೇಮಲೋಕ, ನಿಜ ಹೇಳುವೆನು, ಸ್ವೀಟಿ ನನ್ನ ಜೋಡಿ, ಕಲಿಯುಗ ಕರ್ಣನೆ, ದುಂಬಿ ದುಂಬಿ, ದೇಹಕೆ ಉಸಿರೇ, ಸಂತಸ ಅರಳುವ ಸಮಯ, ಆನಂದವೇ ಮೈತುಂಬಿದೆ, ಚಿನ್ನಾ ನೆಲೆಸಿರುವೇ, ಅಂದವೋ ಅಂದವೂ, ಕಿನ್ನರ ಲೋಕದ ಗಿಣಿಯೇ, ಆಲಯ ಮೃಗಾಲಯ, ನೀ ಬಂದರೆ ಮೆಲ್ಲನೇ, ಬೆಳ್ಳಿರಥದಲ್ಲಿ ಸೂರ್ಯ ತಂದ ಕಿರಣ, ಚಳಿಚಳಿ ತಾಳೆನು, ಗಿರಿನವಿಲು ಎಲ್ಲೋ, ಒಲವಿನ ಉಡುಗೊರೆ ಕೊಡಲೇನು, ಕೆಂಪು ಗುಲಾಬಿ, ಚಕ್ರವ್ಯೂಹ, ಕನ್ನಡಮ್ಮನ ದೇವಾಲಯ ಸೇರಿದಂತೆ ಹತ್ತು ಹಲವು ಅಂಬರೀಷ್ ಗೀತೆಗಳ ಸಾದರ ಪಡಿಸಿದರು.

ಅಂಬರೀಷ್ ಅವರ ಆಯ್ದ ಗೀತೆಗಳ ಗಾಯನ ನೆರೆದಿದ್ದವರ ಮೋಡಿ ಮಾಡಿತು. ಅಂಬರೀಷ್ ಅವರ ಗೀತೆಗಳಿಗೆ ನೆರೆದಿದ್ದ ಅಭಿಮಾನಿ ಬಳಗ ಶಿಳ್ಳೆ, ಚಪ್ಪಾಳೆ ಮೂಲಕ ಹುರಿದುಂಬಿಸಿದರು.

ಬಳಿಕ ಮಾತನಾಡಿದ ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ ಮಾತನಾಡಿ, ಅಂಬರೀಷ್ ಎಂದರೆ ನಮಗೆ ರೋಮಾಂಚನ. ಕನ್ನಡ ಚಿತ್ರರಂಗವನ್ನು ಉತ್ತುಂಗಕ್ಕೆ ಕೊಂಡೊಯ್ದ ಪ್ರಮುಖರಲ್ಲಿ ಇವರು ಒಬ್ಬರು. ಹೆಸರಿಗಷ್ಟೆ ರೆಬಲ್ ಸ್ಟಾರ್, ಆದರೆ ಮಗು ಮನಸ್ಸಿನ ವ್ಯಕ್ತಿತ್ವ ಹೊಂದಿದ್ದ ಮೇರು ನಟ ಎಂದರು.

ಚಿತ್ರರಂಗದಲ್ಲಿ ಬೆಳೆದು, ರಾಜಕೀಯಕ್ಕೆ ಎಂಟ್ರಿಕೊಟ್ಟು, ವಿವಿಧ ಹುದ್ದೆಗಳನ್ನು ಅಲಂಕರಿಸಿ, ಜನಸೇವೆ ಮಾಡಿದ ವ್ಯಕ್ತಿ ಕನ್ನಡದಲ್ಲಿ ಇವರೊಬ್ಬರೆ. ಅಂಬರೀಷ್ ಅವರಿಗೆ ಮೈಸೂರು ಎಂದರೆ ಬಹು ಪ್ರೀತಿ. ಅದರಲ್ಲೂ ನಾಟಕಗಳ ವೀಕ್ಷಣೆಗಾಗಿ ಪುರಭವನಕ್ಕೆ ಬರುತ್ತಿದ್ದರು. ಅವರ ಎಲ್ಲಾ ಚಿತ್ರಗಳಲ್ಲಿಯೂ ಒಂದಲ್ಲಾ ಒಂದು ದೃಶ್ಯವನ್ನು ಮೈಸೂರಿನಲ್ಲಿ ಚಿತ್ರೀಕರಿಸಬೇಕಿತ್ತು ಎಂದು ನೆನೆದರು.

ಈ ವೇಳೆ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜಸೇವಕ ಡಾ.ರಘುರಾಂ ವಾಜಪೇಯಿ, ಬಿಜೆಪಿ ಒಬಿಸಿ ನಗರಾಧ್ಯಕ್ಷ ಎಸ್.ಜಗದೀಶ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಗಾಯನ ನಂದನ ಅಧ್ಯಕ್ಷ ಎಸ್.ಬೆಟ್ಟೇಗೌಡ, ಡಾ.ವೈ.ಡಿ.ರಾಜಣ್ಣ ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯ ವಿವಿಧೆಡೆ

ರಸ್ತೆ ಮೂಲ ಸೌಕರ್ಯ ಅಭಿವೃದ್ಧಿಗೆ ಕೇಂದ್ರ ರಸ್ತೆ ನಿಧಿಯಿಂದ 50 ಕೋಟಿ ಅನುದಾನ

ಮೈಸೂರು, ಮಾ 29– ಮೈಸೂರು ಜಿಲ್ಲೆಯಲ್ಲಿ ರಸ್ತೆ ಸಂಪರ್ಕ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹಲವು ಕಾಮಗಾರಿಗಳನ್ನು ಮಂಜೂರು ಮಾಡಿಸಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಯದುವೀರ್

ಮೈಸೂರು, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳನ್ನೊಳಗೊಂಡಂತೆ ಹಲವು ಪ್ರಮುಖ ರಸ್ತೆ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳನ್ನು ಮಂಜೂರು ಮಾಡಿಸಲಾಗಿದ್ದು, ಇದರಿಂದ ಸುಮಾರು 50 ಕೋಟಿ ರೂ. ಕೇಂದ್ರ ರಸ್ತೆ ನಿಧಿ ಮೂಲಕ ಕೈಗೆತ್ತಿಕೊಳ್ಳಲಾಗುತ್ತಿರುವ ರಸ್ತೆ ಸಂಪರ್ಕ ಸುಧಾರಣೆ, ಸುರಕ್ಷಿತ ಸಂಚಾರ, ವಾಹನ ದಟ್ಟಣೆ ನಿವಾರಣೆ ಹಾಗೂ ಗ್ರಾಮೀಣ ಅಭಿವೃದ್ಧಿಗೆ ನೆರವಾಗಲಿದೆ ಎಂದು ಹೇಳಿದ್ದಾರೆ.

ಈ ಯೋಜನೆಗಳಡಿ ಹುಣಸೂರು ತಾಲೂಕಿನ ರಾಮನಾಥಪುರ–ತೆರಕನಾಂಬಿ ವಿಭಾಗದ ರಾಜ್ಯ ಹೆದ್ದಾರಿ–86ರ ಕಿಮೀ 50.75 ರಿಂದ 64.87ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣಾ ಕಾಮಗಾರಿಗೆ 6 ಕೋಟಿ ಹಾಗೂ ಹಾಡ್ಯದಿಂದ ಅರ್ತಿವರೆಗೆ, ಕಿತ್ತೂರು, ಅತ್ತಿಗೋಡು, ಬೆಟ್ಟದಪುರ ಹಾಗೂ ಚಿಕ್ಕನೇರಳೆ ಮಾರ್ಗವಾಗಿ ಪಿರಿಯಾಪಟ್ಟಣ ತಾಲೂಕಿನ ಕಿಮೀ 24.75 ರಿಂದ 30.31ರವರೆಗಿನ ಎಸ್‌ಹೆಚ್–289ರ ಅಭಿವೃದ್ಧಿಗೆ 3.75 ಕೋಟಿ ರೂ. ಹಾಗೆಯೇ ಹುಣಸೂರಿನಿಂದ ಪಿರಿಯಾಪಟ್ಟಣದವರೆಗೆ ನಿಲುವಾಗಿಲು, ರಾಮೇನಹಳ್ಳಿ, ಹೊನ್ನೇನಹಳ್ಳಿ, ಹನಗೋಡು, ಪಂಚವಳ್ಳಿ ಹಾಗೂ ಸತ್ಯಗಾಲ ಮಾರ್ಗವಾಗಿ ಕಿಮೀ 36.69 ರಿಂದ 37.69ರವರೆಗಿನ ಎಸ್‌ಹೆಚ್–297ರ ಅಭಿವೃದ್ಧಿಗೆ 1 ಕೋಟಿ ಮಂಜೂರಾಗಿದೆ.

ಮೈಸೂರು ತಾಲೂಕಿನ ಇಲವಾಲ–ಕೆ.ಆರ್.ನಗರ ನಡುವಿನ ಎಸ್‌ಹೆಚ್–117ರಲ್ಲಿ ಕಿಮೀ 10.40 ರವರೆಗೆ ಆಯ್ದ ಭಾಗಗಳ ಸುಧಾರಣೆಗೆ 6 ಕೋಟಿ, ನಗರಾಭಿವೃದ್ಧಿ ಭಾಗವಾಗಿ ಚಾಮರಾಜ ಕ್ಷೇತ್ರದ ವಿಜಯನಗರ 2ನೇ ಮತ್ತು 3ನೇ ಹಂತ ಪ್ರದೇಶಗಳಿಂದ ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಗಳಿಗೆ 6 ಕೋಟಿ ರೂ. ನರಸಿಂಹರಾಜ ಕ್ಷೇತ್ರದ ನಾಯ್ಡು ನಗರದಿಂದ ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ 6 ಕೋಟಿ ಅನುದಾನ ನೀಡಲಾಗಿದೆ.

ಬಿಳಿಕೆರೆಯಿಂದ ಚೆಲ್ಲಹಳ್ಳಿ, ಗೆಜ್ಜಯ್ಯನ ವಡ್ಡರಗುಡಿಗೆ ಹಾಗೂ ಡಿ.ಕೊಪ್ಪಲು, ಹಳ್ಳಿಕೆರೆ, ಚೆಲ್ಲಹಳ್ಳಿ, ಮಹದೇವಪುರ ಹಾಗೂ ಧರ್ಮಾಪುರ ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ 15 ಕೋಟಿ, ಚೆಲ್ಲಹಳ್ಳಿ, ಹೊಸಪುರ, ತಿಪ್ಪೂರು, ಮಹದೇವಪುರ ರಸ್ತೆ ಅಭಿವೃದ್ಧಿಗೆ 7 ಕೋಟಿ ಮೀಸಲಿಡಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಂಸದ ಯದುವೀರ್ ಒಡೆಯರ್, ರಸ್ತೆ ಮೂಲಸೌಕರ್ಯ ಅಭಿವೃದ್ಧಿಯು ಆರ್ಥಿಕ ಪ್ರಗತಿ, ಗ್ರಾಮೀಣ ಸಂಪರ್ಕ, ಸಾರ್ವಜನಿಕ ಸುರಕ್ಷತೆ ಮತ್ತು ಸಮಗ್ರ ಪ್ರಾದೇಶಿಕ ಅಭಿವೃದ್ಧಿಗೆ ಪೂರಕವಾಗಿದೆ. ಮೈಸೂರು ಜಿಲ್ಲೆಗೆ ಇನ್ನಷ್ಟು ಅಭಿವೃದ್ಧಿ ಆಧಾರಿತ ಯೋಜನೆಗಳು ಹಾಗೂ ಮೂಲಸೌಕರ್ಯಗಳ ಹೂಡಿಕೆಗಳನ್ನು ತರಲು ತಾವು ಬದ್ಧರಾಗಿರುವುದಾಗಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 29– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣರ ಸಂಘದ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕಗಳಿಸಿದ ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 21 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಮೊ: 9449077168, 9448789015, 9141637888 ಗೆ ಸಂಪರ್ಕಿಸಿ.

ಬೋಧನೆಯೊಂದಿಗೆ ಪ್ರಾಧ್ಯಾಪಕರಲ್ಲಿ ಬರೆಯುವ ಹವ್ಯಾಸವಿದ್ದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಜ್ಞಾನ ಲಭ್ಯ

● ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ ● ಇತಿಹಾಸ ಪ್ರಾಧ್ಯಾಪಕ ಪ್ರೊ.ವೈ.ಹೆಚ್.ನಾಯಕವಾಡಿ ಅವರ 'ಸ್ಮೃತಿ ಹೆಜ್ಜೆಗಳು' ಪುಸ್ತಕ ಬಿಡುಗಡೆ



ಮೈಸೂರು ವಿವಿ ಇತಿಹಾಸ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ವೈ.ಹೆಚ್.ನಾಯಕವಾಡಿ ಅವರ 'ಸ್ಮೃತಿ ಹೆಜ್ಜೆಗಳು' ಅಭಿನಂದನಾ ಗ್ರಂಥವನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು. ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಮತ್ತಿತರರಿದ್ದರು.

ಮೈಸೂರು, ಮೇ 29(ಎಂಕೆ)– ಉನ್ನತ ಶಿಕ್ಷಣದಿಂದ ಮಾತ್ರವೇ ಸಾಮಾನ್ಯ ವಿದ್ಯಾರ್ಥಿ ಉನ್ನತ ಸ್ಥಾನಕ್ಕೇರಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಇತಿಹಾಸ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ವೈ.ಹೆಚ್.ನಾಯಕವಾಡಿ ಅವರ ಅಭಿನಂದನಾ ಸಮಾರಂಭ, 'ಸ್ಮೃತಿ ಹೆಜ್ಜೆಗಳು' ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಉಪನ್ಯಾಸವನ್ನೊಳಗೊಂಡ 'ಅಕ್ಷರ ನಮನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೇವೆಯಿಂದ ನಾಳೆ(ಮೇ 30) ನಿವೃತ್ತರಾಗುತ್ತಿರುವ ಪ್ರೊ.ವೈ.ಹೆಚ್. ನಾಯಕವಾಡಿ, ಉನ್ನತ ಶಿಕ್ಷಣ ಪಡೆದು ಏನೆಲ್ಲಾ ಸಾಧನೆ ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉನ್ನತ ಶಿಕ್ಷಣ ಪಡೆದ ಪ್ರಾಧ್ಯಾಪಕರಲ್ಲಿ ಬರೆಯುವ ಹವ್ಯಾಸವಿದ್ದರೆ, ಪರಿಣಾಮಕಾರಿ ಬೋಧನೆ ಜೊತೆಗೆ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿರುವುದಕ್ಕಿಂತ ಹೆಚ್ಚಿನ ಜ್ಞಾನ ನೀಡಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಪ್ರೊ.ವೈ.ಹೆಚ್.ನಾಯಕವಾಡಿ ಬರೆದಿರುವ ಹಲವು ಪುಸ್ತಕಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿವೆ ಎಂದರು.

ಮೈಸೂರು ವಿವಿಯಲ್ಲಿ ಪ್ರಾಧ್ಯಾಪಕರ ಸಂಖ್ಯೆ ಕಡಿಮೆಯಾಗುತ್ತಿದೆ. ನಿವೃತ್ತಿಯಾಗುವ ಪ್ರಾಧ್ಯಾಪಕರು ತಮ್ಮ ಬೋಧನಾ ವೃತ್ತಿಯನ್ನು ನಿಲ್ಲಿಸುತ್ತಿದ್ದಾರೆ. ಆದರೆ, ನಿವೃತ್ತಿಯ ಬಳಿಕವೂ ಅವರಲ್ಲಿನ ಜ್ಞಾನವನ್ನು ಹಂಚಲು ಹಲವು ಮಾರ್ಗಗಳಿದ್ದು, ಪ್ರೊ.ವೈ.ಹೆಚ್.ನಾಯಕವಾಡಿ ಅವರು ಕೂಡ ತಮ್ಮಲ್ಲಿರುವ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆಯುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಮೈಸೂರು ವಿವಿ ಕುಲಪತಿಗಳಾಗುವ ಎಲ್ಲಾ ಅರ್ಹತೆಯುಳ್ಳ ಪ್ರೊ.ವೈ.ಹೆಚ್. ನಾಯಕವಾಡಿ ಅವರಿಗೆ ಸ್ವಲ್ಪದರಲ್ಲೇ ಅವಕಾಶ ತಪ್ಪಿದೆ. ಗುಲ್ಬರ್ಗಾ ಕಡೆಯಿಂದ ಬಂದು ಮೈಸೂರು ವಿವಿಯಲ್ಲಿ 33 ವರ್ಷ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆ ಸದಾ ಸ್ಮರಣೀಯ. ಅವರಲ್ಲಿನ ಪರಿಶ್ರಮವೇ ಅವರನ್ನು ಉನ್ನತ ಸ್ಥಾನಕ್ಕೆ ಕರೆತಂದಿದ್ದು, ಅವರ ನಿವೃತ್ತಿಯ ಬದುಕು ಸಂತೋಷದಾಯಕವಾಗಿರಲಿ ಎಂದು ಶುಭ ಕೋರಿದರು.

ನಂತರ ಸೇವೆಯಿಂದ ನಿವೃತ್ತರಾಗುವ ಮೈಸೂರು ವಿವಿ ಇತಿಹಾಸ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ವೈ.ಹೆಚ್. ನಾಯಕವಾಡಿ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್, 'ಸ್ಮೃತಿ ಹೆಜ್ಜೆಗಳು' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದರು.

ನಾಲ್ವಡಿ ಅಧ್ಯಯನ ಪೀಠದ ಸಂದರ್ಶಕಿ ಪ್ರೊ.ಉಷಾದೇವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಹೈದರಾಬಾದ್ ಉಸ್ಮಾನಿಯಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಎ.ಸತ್ಯನಾರಾಯಣ, ಬಾಬು ಜಗಜೀವನ ರಾಮ್ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ, ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಜಿ.ಟಿ. ಸೋಮಶೇಖರ್, ಕರ್ನಾಟಕ ವಿವಿ ಕನ್ನಡ ಸಂಶೋಧನಾ ಸಂಸ್ಥೆಯ ಪ್ರೊ.ಎಸ್.ಕೆ. ಮೇಲಕಾರ, ಶಿಕ್ಷಕಿ ಶ್ರೀಮತಿ ವಿಜಯಲಕ್ಷ್ಮಿ ನಾಯಕವಾಡಿ ಮತ್ತಿತರರಿದ್ದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಮೈಸೂರು ನಗರ ಪಾಲಿಕೆ, ವಿವಿಧ ತಾಲೂಕು ಘಟಕಗಳ ನೂತನ ಪದಾಧಿಕಾರಿಗಳಿಗೆ ಅಭಿನಂದನೆ



ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಮೈಸೂರು ನಗರ ಪಾಲಿಕೆ ಘಟಕ, ಮೈಸೂರು ತಾಲೂಕು ಘಟಕ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಘಟಕಗಳಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು, ನಿರ್ದೇಶಕರು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳನ್ನು ಶುಕ್ರವಾರ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಮೇ 29(ಎಂಕೆ)– ಮೈಸೂರಿನ ಶ್ರೀರಾಂಪುರದಲ್ಲಿರುವ ಶಿವ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕ, ಮೈಸೂರು ತಾಲೂಕು ಘಟಕ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಘಟಕಗಳಿಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು, ನಿರ್ದೇಶಕರು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳನ್ನು ಶುಕ್ರವಾರ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರಿನ ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ನೇತೃತ್ವದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಮತ್ತು ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಕಾಂಗ್ರೆಸ್ ಮುಖಂಡ ಎಂ. ಪ್ರದೀಪ್‌ಕುಮಾರ್, ವೀರಶೈವ ಲಿಂಗಾಯಿತ ಸಮಾಜವು ಸಾಂಸ್ಕೃತಿಕ ನಾಯಕ ಬಸವಣ್ಣನವರ ನೇತೃತ್ವದಲ್ಲಿ 12ನೇ ಶತಮಾನದಿಂದಲೂ ಸರ್ಕಾರ ಮಾಡಬೇಕಾದ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಮಹಿಳಾ ಸಮಾನತೆ ಸೇರಿದಂತೆ ಎಲ್ಲಾ ಜಾತಿ–ಮತದವರು ಒಂದೇ ಎಂಬ ಮನೋಭಾವದೊಂದಿಗೆ ಒಂದಾಗಿ ಸಾಗಬೇಕೆನ್ನುವ ಸಂದೇಶ ನೀಡಿದೆ. ಹಾಗೆಯೇ ಸಮಾಜದಲ್ಲಿನ ಎಲ್ಲಾ ಜಾತಿ ಮತ್ತು ಅನ್ಯ ಧರ್ಮಿಯರೊಂದಿಗೆ ಅನ್ಯೋನ್ಯತೆ ಕಾಪಾಡುವುದು ನಮ್ಮೆಲ್ಲರ ಉದ್ದೇಶವಾಗಿದೆ ಎಂದರು.

ವೀರಶೈವ ಲಿಂಗಾಯಿತ ಸಮಾಜ ಇನ್ನೂ ಹೆಚ್ಚಿನ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಾದರೇ ಸಂವಿಧಾನಾತ್ಮಕ ರಾಜಕೀಯ ಸ್ಥಾನಮಾನಗಳು ಅತ್ಯಗತ್ಯವಾಗಿವೆ. ಈ ನಿಟ್ಟಿನಲ್ಲಿ ಸಮಾಜದ ಯಾರೇ ಚುನಾವಣೆಗಳಿಗೆ ಸ್ಪರ್ಧಿಸಿದರೂ, ಅವರಿಗೆ ಬೆಂಬಲವಾಗಿ ನಿಂತು ಪಕ್ಷಾತೀತವಾಗಿ ಕೆಲಸ ಮಾಡಬೇಕು ಎಂದು ಕೋರಿದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು ಮಾತನಾಡಿ, 'ಧರ್ಮೋ ರಕ್ಷತಿ ರಕ್ಷಿತಃ' ಶ್ಲೋಕದಂತೆ ಧರ್ಮವನ್ನು ನಾವು ರಕ್ಷಣೆ ಮಾಡಿದರೆ, ಧರ್ಮ ನಮ್ಮನ್ನು ರಕ್ಷಣೆ ಮಾಡುತ್ತದೆ ಎಂಬುದನ್ನು ಪ್ರತಿಯೊಬ್ಬರು ಮನಗಂಡು ಸಮಾಜಮುಖಿ ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದು ತಿಳಿಸಿದರು.

ಮೈಸೂರಿನ ಬಸವ ಬಳಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾ ಸಭಾ ಮೈಸೂರು ನಗರಾಧ್ಯಕ್ಷ ಕೆ.ಎಸ್.ಪ್ರಕಾಶ್, ಮೈಸೂರು ತಾಲೂಕು ಅಧ್ಯಕ್ಷ ಕಾವಿ ಬಸಪ್ಪ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ಕೆ.ಬಿ. ನಟರಾಜು, ಕೆ.ಆರ್.ತಾಲೂಕು ಅಧ್ಯಕ್ಷ ಸಿ.ಪಿ. ರಮೇಶ್, ನಂಜನಗೂಡು ತಾಲೂಕು ಅಧ್ಯಕ್ಷ ಕೆಂಪಣ್ಣ, ಹುಣಸೂರು ತಾಲೂಕು ಅಧ್ಯಕ್ಷ ಸೋಮಶೇಖರ್, ಟಿ.ನರಸೀಪುರ ತಾಲೂಕು ಅಧ್ಯಕ್ಷ ಪ್ರಕಾಶ್, ಸರಗೂರು ತಾಲೂಕು ಅಧ್ಯಕ್ಷ ನಟರಾಜ್, ಹೆಚ್.ಡಿ. ಕೋಟೆ ತಾಲೂಕು ಅಧ್ಯಕ್ಷ ರುದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಕೊಡಗನ್ನು ಕರ್ನಾಟಕದ ಕಾಶ್ಮೀರ ಅನ್ನೋದು ಸರಿಯಲ್ಲ

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಅಭಿಮತ



ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಡಾ.ತೀತಿರ ರೇಖಾ ವಸಂತ್ ಸಮ್ಮೇಳನಾಧ್ಯಕ್ಷ ಅಬ್ದುಲ್ ರಶೀದ್‌ರವರಿಗೆ ಅಧ್ಯಕ್ಷ ಸ್ಥಾನವನ್ನು ಹಸ್ತಾಂತರಿಸಿದರು.

ಮಡಿಕೇರಿ, ಮೇ 29–ಕೊಡಗನ್ನು ಕರ್ನಾಟಕದ ಕಾಶ್ಮೀರ ಎಂದು ಹೇಳುತ್ತಾರೆ. ಆದರೆ ಈ ಹೋಲಿಕೆ ಯಾಕೋ ಸರಿ ಬರುತ್ತಿಲ್ಲ ಎಂದು ಸಾಹಿತಿ ಅಬ್ದುಲ್ ರಶೀದ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸುಂಟಿಕೊಪ್ಪದ ಎಸ್.ಎಸ್.ಇಂಟರ್ ನ್ಯಾಷನಲ್ ಸಭಾಂಗಣದ ಕವಿಶಿಷ್ಯ ಪಂಜೆ ಮಂಗೇಶ ರಾಯರ ವೇದಿಕೆಯಲ್ಲಿ ಶುಕ್ರವಾರ ನಡೆದ ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು, ಕಾಶ್ಮೀರದ ಕಷ್ಟ ಕಾರ್ಪಣ್ಯಗಳ ಅರಿವು ಇರುವವರು, ಕೊಡಗಿನ ಚೆಲುವನ್ನು ಚೆನ್ನಾಗಿ ಬಲ್ಲವರು ಯಾರೂ ಸಹ ಈ ಹೋಲಿಕೆ ಸರಿಯಲ್ಲ ಎಂದೇ ಹೇಳುತ್ತಾರೆ. ಈ ನೆಲದ ಮಣ್ಣು, ಗಾಳಿ, ಇಲ್ಲಿನ ಗುಡಿಗಳು, ಭಗವತಿ, ಈಶ್ವರ, ಅಯ್ಯಪ್ಪ, ಕೊರತಿ, ಚಾಮುಂಡಿ, ದೇವರ ಕಲ್ಲುಗಳು, ದೇವರ ಕಾಡುಗಳ ಬಗ್ಗೆ ಮಾಹಿತಿ ಇದ್ದವರು ನನ್ನ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸುವರೆಂದರು.

ಕೊಡಗಿನ ಶಾಲೆಗಳಲ್ಲಿ ಅದರಲ್ಲೂ ಆದಿವಾಸಿ ಮಕ್ಕಳು ಕಲಿಯುವ ಆಶ್ರಮ ಶಾಲೆಗಳಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಂದ ಭಾಷೆಗಳ ಬಗ್ಗೆ ಮಾಹಿತಿ ಕೊಡಿಸಬೇಕು. ಕನ್ನಡ ಭಾಷೆ ಇಷ್ಟು ಶ್ರೀಮಂತವಾಗಿ ಬೆಳೆಯಲು ಕರ್ನಾಟಕದ ತುಂಬಾ ತುಂಬಿರುವ ಇಂತಹ ಸಣ್ಣ ಪುಟ್ಟ ಭಾಷೆಗಳು ಕಾರಣ ಈ ಪುಟ್ಟ ತೊರೆಗಳಿಂದ ಹರಿದು ಬರುವ ಭಾಷಾ ಹರವು ಕನ್ನಡವನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ. ಈ ಭಾಷೆಗಳು ಸೊರಗಿದರೆ, ಕನ್ನಡವು ಬಡವಾಗುತ್ತದೆ. ಜಿಲ್ಲೆಯಲ್ಲಿ ಕನ್ನಡ ಭಾಷೆ ಉಳಿಸುವುದೆಂದರೆ ಇಲ್ಲಿನ ಸಣ್ಣ ಪುಟ್ಟ ಭಾಷೆಗಳನ್ನು ಉಳಿಸುವುದು. ಅಳಿವಿನ ಅಂಚಿನಲ್ಲಿರುವ ಈ ಭಾಷೆಯನ್ನು ಆಡುವ ಜನರ ಜೀವವನ್ನು ಕಾಪಾಡುವುದು ಆಗಿದೆ ಎಂದರು.

ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಡಾ. ತೀತಿರ ರೇಖಾ ವಸಂತ್, ಜಿಲ್ಲಾ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಸಾಹಿತಿ ಎಂ.ಜಿ.ನಾಗರಾಜು, ತಾಲೂಕು ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವಿ.ಪಿ. ಶಶಿಧರ, ಪರಿಷತ್ತಿನ ಮಾಜಿ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಮಾತನಾಡಿದರು

> ಪುಸ್ತಕಗಳನ್ನು ಕಪಾಟಿನಲ್ಲಿ ಭದ್ರವಾಗಿ ಬಚ್ಚಿಡಲು ನೋಡುವುದಕ್ಕಿಂತ ಪುಸ್ತಕ ಕಳವಾದರು ಸರಿಯೇ. ಮಕ್ಕಳ ತಲೆಯೊಳಗೆ ಒಳ್ಳೆಯ ಓದಿನ ಭೂತ ಹೊಕ್ಕು ಬಿಡಲಿ ಎಂಬ ದೂರಾಲೋಚನೆ ಇರಬೇಕು.

ಇ.ಸುಲೇಮಾನ್‌ರ ರಾಗವಿಲ್ಲದ ಕವಿತೆ, ಎಚ್.ಮಂಜುನಾಥ್‌ರ ಮನುಷತ್ವದ ಸಾರ, ಜಯಪ್ರಕಾಶ್ ಪುತ್ತೂರುರ ವ್ಯಕ್ತಿತ್ವ ವಿಕಸನದ ವಿಚಾರಧಾರೆ., ಡಾ.ಬೆಸೂರು ಮೋಹನ್ ಪಾಳೇಗಾರ್‌ರ ಸ್ವಾತಂತ್ರ್ಯ ಕ್ರಾಂತಿಯ ಕಿಡಿ, ಗಣೇಶ್ ಶರ್ಮರ ಮಕ್ಕಳ ಕಥೆ, ಹೇಮಂತ್ ಪಾರೇರರ ಸ್ವಪ್ನದ ಹಕ್ಕಿ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಪ್ರಮುಖರಾದ ವಿಶಾಲ್ ಶಿವಪ್ಪ, ಸಬಾಸ್ಟಿನ್, ಮುನೀರ್ ಅಹಮದ್, ರೇವತಿ ರಮೇಶ್, ಜಲಜಾ ಶೇಖರ್, ವಾಸುರೈ, ಕಡ್ಲೇರ ತುಳಸಿ ಮೋಹನ್, ಅಂಬೆಕಲ್ಲು ನವೀನ್, ಇಒ ಪರಮೇಶ್, ಕೆ.ಎಸ್.ನಾಗೇಶ್, ದಂಬಾಚಂಗಪ್ಪ, ನಿಜಾಮುದ್ದೀನ್, ನಾಸೀರ್, ಇತರರು ಇದ್ದರು.

> ದೂರದಿಂದ ಮತ್ತು ಮೇಲೆ ಆಕಾಶದಿಂದ ನೋಡಿದರೆ ನಂದನವನ ದಂತೆ ಕಾಣುವ ಕೊಡಗಿನ ಕಾಡುಗಳ ಒಳ ಹೊಕ್ಕರೆ ಏನು ಕಾಣುತ್ತದೆ. ಪಕ್ಕದಲ್ಲಿರುವ ಹೆರೂರು ಹಾಡಿ, ಚಿಕ್ಲಿಹೊಳೆ ಕಾಡಿನ ಹಾಡಿಗಳಲ್ಲಿ ಬದುಕುತ್ತಿರುವ ಆದಿವಾಸಿಗಳ ಬದುಕು ಹೇಗಿದೆ. ಯಾಕೆ ಹಾಡಿಗಳಿಂದ ಒಬ್ಬ ಬರಹಗಾರ, ಒಬ್ಬ ಹಾಡುಗಾರ, ಒಬ್ಬ ಅಧಿಕಾರಿ, ಒಬ್ಬ ವಕೀಲ ಮೂಡಿ ಬರಲಿಲ್ಲ. ಯಾಕೆ ಮಕ್ಕಳು ಅಕ್ಷರದ ಇಂದ್ರಜಾಲದಿಂದ ವಂಚಿತರಾದರು ಎಂಬ ಎಂಬ ಬಗ್ಗೆ ಪ್ರತಿಯೊಬ್ಬರೂ ಚಿಂತಿಸಬೇಕಿದೆ.

ಸಮ್ಮೇಳನಾಧ್ಯಕ್ಷರ ಮೆರವಣಿಗೆ : ಮೆರವಣಿಗೆಯು ಸರ್ಕಾರಿ ಪ್ರಾಥಮಿಕ ಶಾಲೆಯಿಂದ ಮುಖ್ಯ ರಸ್ತೆಗೆ ಸಾಗಿ ಶ್ರೀ ಅಯ್ಯಪ್ಪ ದೇವಸ್ಥಾನದ ಬಳಿಯಿಂದ ಗುಂಡುಗುಟ್ಟಿ ಮಂಜನಾಥಯ್ಯ ಸಭಾಂಗಣದವರೆಗೆ ನಡೆಯಿತು. ಮೆರವಣಿಗೆಯಲ್ಲಿ ಮಂಗಳ ವಾದ್ಯ, ಚಂಡೆ ವಾದ್ಯ, ಕಳಸ ಹೊತ್ತ ಮಹಿಳೆಯರು, ಗೊಂಬೆಗಳು, ಪೂಜಾ ಕುಣಿತ, ಡೊಳ್ಳು ಕುಣಿತ, ಬ್ಯಾಂಡ್ ಸೆಟ್, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಂಜೀವಿನಿ ಮಹಿಳಾ ಒಕ್ಕೂಟ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ, ಅಂಗನವಾಡಿ ಸಂಘಟನೆ, ಸ್ತ್ರೀಶಕ್ತಿ ಒಕ್ಕೂಟ, ಆಶಾ ಕಾರ್ಯಕರ್ತೆಯರು, ಶಿಕ್ಷಕರು, ಆಟೋ ಮತ್ತು ವಾಹನ ಚಾಲಕರ ಸಂಘದವರು, ಎನ್‌ಸಿಸಿ ತಂಡ, ಸ್ಕೌಟ್ಸ್ ಮತ್ತು ಗೈಡ್ಸ್ ತಂಡದೊಂದಿಗೆ ಮೆರವಣಿಗೆ ನಡೆಯಿತು. ಸೆಸ್ಕ್ ಇಲಾಖೆಯಿಂದ ನಿರ್ಮಿಸಲಾಗಿದ್ದ ಸ್ತಬ್ಧಚಿತ್ರಗಳು ಗಮನಸೆಳೆಯಿತು.

ಡಿ.ಕೆ.ಶಿವಕುಮಾರ್‌ರಿಂದ ಬುಲಾವ್: ಶಾಸಕ ಡಾ.ಮಂತರ್ ಗೌಡ ದೆಹಲಿಗೆ ದೌಡು



ಡಿ.ಕೆ. ಶಿವಕುಮಾರ್‌ರೊಂದಿಗೆ ಶಾಸಕ ಡಾ.ಮಂತರ್ ಗೌಡ ತೆರಳುತ್ತಿರುವುದು.

ಮಡಿಕೇರಿ: ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಸೋಮವಾರ ಅಧಿಕಾರ ಸ್ವೀಕರಿಸುತ್ತಿರುವ ಬೆನ್ನಲ್ಲೇ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಶಾಸಕ ಡಾ.ಮಂತರ್ ಗೌಡ ದೆಹಲಿಗೆ ದೌಡಾಯಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಶಾಸಕ ಡಾ.ಮಂತರ್ ಗೌಡ ಅವರಿಗೆ ಕರೆ ಮಾಡಿ ತುರ್ತಾಗಿ ದೆಹಲಿಗೆ ಬರುವಂತೆ ಬುಲಾವ್ ನೀಡಿದ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಶಾಸಕರು ಬೆಂಗಳೂರು ಕೆಂಪೇಗೌಡ ಅಂತರ್ ರಾಷ್ಟ್ರೀಯ ವಿಮಾಣ ನಿಲ್ದಾಣದ ಮೂಲಕ ದೆಹಲಿಗೆ ತೆರಳಿದ್ದಾರೆ. ಈ ಬೆಳವಣಿಗೆ ಕ್ಷೇತ್ರ ಮತದಾರರ ಸಹಿತ ರಾಜಕೀಯ ವಲಯದಲ್ಲಿ ಚರ್ಚೆಗೆ ವಸ್ತುವಾಗಿದೆ.

ಶಿವಕುಮಾರ್ ಸಚಿವ ಸಂಪುಟದಲ್ಲಿ ಹೊಸಬರಿಗೆ, ಯುವಕರಿಗೆ ಸಚಿವ ಸ್ಥಾನ ನೀಡಬೇಕೆಂದು ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅಭಿಲಾಷೆ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಶಾಸಕ ಡಾ.ಮಂತರ್ ಗೌಡ ಅವರಿಗೆ ಸಚಿವ ಸ್ಥಾನ ದೊರಕುವ ನಿರೀಕ್ಷೆ ಮೂಡಿದೆ. ಮಾತ್ರವಲ್ಲದೆ ಡಾ.ಮಂತರ್ ಕುಟುಂಬ ಭಾವಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ನಿಕಟವರ್ತಿಯಾಗಿರುವುದು ಸಚಿವ ಸ್ಥಾನದ ಆಕಾಂಕ್ಷೆಯನ್ನು ಇಮ್ಮಡಿಗೊಳಿಸಿದೆ. ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ ಶಾಸಕ ಡಾ.ಮಂತರ್ ಗೌಡ ಅವರಿಗೆ ಸಚಿವ ಸ್ಥಾನ ದೊರಕಿದ್ದೇ ಆದಲ್ಲಿ ಕೊಡಗು, ಹಾಸನ, ವ್ಯಾಪ್ತಿಯಲ್ಲಿ ಪಕ್ಷದ ಸಂಘಟನೆಗೆ ನೆರವಾಗುವ ವಿಶ್ವಾಸ ಕಾಂಗ್ರೆಸ್ ವಲಯದಲ್ಲಿದೆ.

ಆದಿವಾಸಿ ಸಮುದಾಯದ ವಿದ್ಯಾವಂತರ ನೇರ ನೇಮಕಾತಿಗೆ ಆಗ್ರಹಿಸಿ ಮನವಿ



ನೇರ ನೇಮಕಾತಿಗೆ ಆಗ್ರಹಿಸಿ ಆದಿವಾಸಿ ಎಜುಕೇಷನ್ ಯೂತ್ ಫೌಂಡೇಶನ್ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿತು.

ಸಿದ್ದಾಪುರ, ಮೇ 29–ರಾಜ್ಯ ಸರ್ಕಾರ ಬಜೆಟ್‌ನಲ್ಲಿ ರಾಜ್ಯದ 13 ಆದಿವಾಸಿ ಸಮುದಾಯಗಳ ವಿದ್ಯಾವಂತರಿಗೆ ನೇರ ನೇಮಕಾತಿ ಮಾಡುವುದಾಗಿ ಘೋಷಿಸಿದ್ದು, ಇದುವರೆಗೂ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ. ತಕ್ಷಣವೇ ಜಾರಿಗೊಳಿಸುವಂತೆ ಒತ್ತಾಯಿಸಿ ಕೊಡಗು ಆದಿವಾಸಿ ಎಜುಕೇಷನ್ ಯೂತ್ ಫೌಂಡೇಶನ್ ಅಪರ ಜಿಲ್ಲಾಧಿಕಾರಿ ಡಾ. ಎಸ್.ಸಹನಾ ಅವರಿಗೆ ಮನವಿ ಸಲ್ಲಿಸಿತು.

ಯರವ ಸಮಾಜದ ಅಧ್ಯಕ್ಷ ಪಿ.ಕೆ. ಸಿದ್ದಪ್ಪ ಮಾತನಾಡಿ, ಸರ್ಕಾರ ಘೋಷಿಸಿದ ಯೋಜನೆ ಶೀಘ್ರ ಜಾರಿಗೆ ಬಂದು, ಆದಿವಾಸಿ ಸಮುದಾಯದ ವಿದ್ಯಾವಂತ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಅಲ್ಲದೆ, ಸಮುದಾಯದ ಯುವಕರು ಶಿಕ್ಷಣ ಪಡೆದಿದ್ದರೂ ಉದ್ಯೋಗಾವಕಾಶಗಳ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿದರು.

ವಕೀಲೆ ಜೆ.ಆರ್. ತುಳಸಿ ಕೊಡಗು ಆದಿವಾಸಿ ಎಜುಕೇಷನ್ ಯೂತ್ ಫೌಂಡೇಶನ್ ಸಂಯೋಜಕಿ ವೈ.ಆರ್. ಪುಷ್ಪಜಾ ಗಿರಿಜನ ಮುಖಂಡ ಭೋಜಪ್ಪ, ನೇತ್ರ, ಹಾಗೂ ಪಿ.ಬಿ. ಬೋಪಿತ್ ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಮಾವು ಮೇಳಕ್ಕೆ ಚಾಲನೆ



ಮಾವು ಮೇಳದಲ್ಲಿ ನಾಗರಿಕರು ಮಾವಿನ ಹಣ್ಣುಗಳನ್ನು ಆಸಕ್ತಿಯಿಂದ ಕೊಳ್ಳುತ್ತಿರುವುದು.

ವಿರಾಜಪೇಟೆ: ರಾಸಾಯನಿಕ ಮುಕ್ತವಾದ ಮಾವಿನ ಹಣ್ಣುಗಳ ಮಾರಾಟದ ವ್ಯವಸ್ಥೆಯನ್ನು ಹಾಫ್ ಕಾಮ್ಸ್ ಮಾಡಿದ್ದು, ಇದನ್ನು ಸ್ಥಳಿಯ ಜನರು ಸದುಪಯೋಗ ಪಡಿಸಿಕೊಳ್ಳಬೇಕೆಂದು ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಹೇಳಿದರು.

ತಾಲೂಕು ಮೈದಾನದಲ್ಲಿ ಜಿಲ್ಲಾ ಹಾಫ್ ಕಾಮ್ಸ್ ಸಂಸ್ಥೆ ಮತ್ತು ರೋಟರಿ ಕ್ಲಬ್ ವತಿಯಿಂದ ಗುರುವಾರದಿಂದ ಆರಂಭವಾದ ಮೂರು ದಿನಗಳ ಮಾವು ಮೇಳವನ್ನು ಉದ್ಘಾಟಿಸಿ, ಮಡಿಕೇರಿಯಲ್ಲಿ 6 ವರ್ಷಗಳಿಂದ ಈ ಮೇಳವನ್ನು ಯಶಸ್ವಿಯಾಗಿ ಆಯೋಜಿಸಲಾಗುತ್ತಿದ್ದು ಜನರಿಂದ ಉತ್ತಮ ಪ್ರತಿಕ್ರಿಯೆ ಲಭ್ಯವಾಗುತ್ತಿದೆ. ಅದೇ ರೀತಿ ಇಲ್ಲಿನ ಜನರಿಗೂ ಈ ವ್ಯವಸ್ಥೆ ಮಾಡಬೇಕೆಂಬ ಒತ್ತಾಯ ಇದ್ದುದರಿಂದ ಇಲ್ಲಿಯ ಜನರಿಗೂ ಮಾವಿನ ಸವಿ ಉಣ್ಣಬಡಿಸಲು ಈ ಮೇಳವನ್ನು ಆಯೋಜಿಸಲಾಗಿದೆ ಎಂದರು.

ಮೇಳದಲ್ಲಿ ರಸಪೂರಿ, ಮಲ್ಲಿಕಾ, ಮಲಗೋವ, ಬಾದಮಿ, ಸಿಂದೂರ, ಹಿಮಪಸಂದ್ ಮುಂತಾದ ವಿವಿಧ ತಳಿಯ ಮಾವುಗಳನ್ನು ಮಾರಾಟಕ್ಕೆ ಇಡಲಾಗಿದೆ.

ನಿವೇಶನಗಳ ವಿತರಣೆಗೆ ಆಗ್ರಹಿಸಿ ಆಂದೋಲನ ಸಮಿತಿ ಪ್ರತಿಭಟನೆ



ನಿವೇಶನಗಳ ವಿತರಣೆಗೆ ಆಗ್ರಹಿಸಿ ಆಂದೋಲನ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಮಡಿಕೇರಿ: ಜಿಲ್ಲೆಯಲ್ಲಿರುವ ವಸತಿ ಹಾಗೂ ನಿವೇಶನ ರಹಿತ ಬಡ ಜನರಿಗೆ ಜಿಲ್ಲಾಡಳಿತ ಕೂಡಲೇ ನಿವೇಶನಗಳನ್ನು ವಿತರಣೆ ಮಾಡುವಂತೆ ಆಗ್ರಹಿಸಿ ನವ ಕರ್ನಾಟಕ ನಿರ್ಮಾಣ ಆಂದೋಲನ ಸಮಿತಿ ನಗರದಲ್ಲಿ ಇಂದು ಪ್ರತಿಭಟನೆ ನಡೆಸಿತು.

ನಗರದ ಹಳೇ ಖಾಸಗಿ ಬಸ್ ನಿಲ್ದಾಣದಿಂದ ಜಿಲ್ಲಾಡಳಿತ ಭವನಕ್ಕೆ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು, ವಸತಿ ರಹಿತರು ಮತ್ತು ನಿವೇಶನ ರಹಿತ ಶೋಷಿತ ವರ್ಗವನ್ನು ಜಿಲ್ಲಾಡಳಿತ ಮತ್ತು ಸರಕಾರ ನಿರ್ಲಕ್ಷಿಸುತ್ತಿದೆ. ಜಿಲ್ಲೆಯಲ್ಲಿರುವ ಸರಕಾರಿ ಜಾಗಗಳ ಒತ್ತುವರಿ ತೆರವು ಮಾಡಬೇಕು, ಜಿಲ್ಲೆಯ 5 ತಾಲೂಕುಗಳಲ್ಲಿರುವ ನಿವೇಶನ ಮತ್ತು ವಸತಿ ರಹಿತರನ್ನು ಸರ್ವೇ ಮೂಲಕ ಪತ್ತೆ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಆಗ್ರಹಿಸಿದರು.

ಈಗಾಗಲೇ ನಿವೇಶನ ಹಂಚಿಕೆ ಉದ್ದೇಶಕ್ಕಾಗಿ ಕಾದಿರಿಸಿದ ಜಾಗಗಳನ್ನು ನಿವೇಶನಗಳನ್ನಾಗಿ ಪರಿವರ್ತಿಸಿ ಹಂಚಿಕೆ ಮಾಡಬೇಕು, ಜಿಲ್ಲೆಯ ಮಾದಾಪುರ, ಜಂಬೂರು ಗ್ರಾಮದಲ್ಲಿ ನಿವೇಶನ ಉದ್ದೇಶಕ್ಕಾಗಿ ಟೆಂಟ್‌ಗಳನ್ನು ನಿರ್ಮಿಸಿ ಹೋರಾಟ ನಡೆಸುತ್ತಿರುವವರಿಗೆ ತುರ್ತು ಅಗತ್ಯ ಎಂಬಂತೆ ಮಳೆಗಾಲಕ್ಕೂ ಮುನ್ನ ಪ್ರಾಕೃತಿಕ ವಿಕೋಪ ಸಂತ್ರಸ್ಥರಿಗೆ ನಿರ್ಮಿಸಲಾಗಿರುವ 260 ಮನೆಗಳನ್ನು ಹಂಚಿಕೆ ಮಾಡಬೇಕೆಂದು ಆಗ್ರಹಿಸಿದರು. ಸರಕಾರ ನಮ್ಮ ಬೇಡಿಕೆಗಳ ಈಡೇರಿಕೆಗೆ ಮುಂದಾಗದಿದ್ದಲ್ಲಿ, ಹೋರಾಟವನ್ನು ರಾಜ್ಯ ಮಟ್ಟಕ್ಕೆ ವಿಸ್ತರಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು. ಬಳಿಕ ಮನವಿಯನ್ನು ಅಪರ ಜಿಲ್ಲಾಧಿಕಾರಿಗಳಿಗೆ ನೀಡಿದರು.

ಆಲ್ ಇಂಡಿಯಾ ಬಿಎಸ್‌ಪಿ ಪ್ರಮುಖರಾದ ಮಾರಸಂದ್ರ ಮುನಿಯಪ್ಪ, ಹೆಚ್.ಡಿ. ಬಸವರಾಜು, ಆರ್.ಮುನಿಯಪ್ಪ, ದಸಂಸ ಪ್ರಮುಖರಾದ ವೆಂಕಟಗಿರಿಯಯ್ಯ, ಅಂಬೇಡ್ಕರ್ ಸೇನೆಯ ಪಿ.ಮೂರ್ತಿ, ಕೆ.ಮೊಣ್ಣಪ್ಪ, ನಿರ್ವಾಣಪ್ಪ ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಹಾಜರಿದ್ದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಿರುವ ಹಿನ್ನೆಲೆ

ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ



ಡಿಕೆಶಿ ಮುಖ್ಯಮಂತ್ರಿ ಹಿನ್ನೆಲೆ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಚಾಮರಾಜನಗರ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳ ಬಳಗದ ವತಿಯಿಂದ ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಜಿಲ್ಲಾ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಬಳಗದ ಅಧ್ಯಕ್ಷ ಪುಟ್ಟಸ್ವಾಮಿಗೌಡ ಅವರ ನೇತೃತ್ವದಲ್ಲಿ ಚಾಮರಾಜೇಶ್ವರ ದೇವಾಲಯದಲ್ಲಿ ವಿಶೇಷ ಕುಂಕುಮ ಅರ್ಚನೆ ನೆರವೇರಿಸಿ ವಿಶೇಷಪೂಜೆ ಸಲ್ಲಿಸಿದ ಅಭಿಮಾನಿಗಳು ಕೈಯಲ್ಲಿ ಡಿಕೆ ಶಿವಕುಮಾರ್ ಫೋಟೊ ಹಿಡಿದು, ಈಡುಗಾಯಿ ಒಡೆದು, ನೂತನ ಮುಖ್ಯಮಂತ್ರಿ ಡಿಕೆ ಶಿವಕುಮಾರ್‌ಗೆ ಜಯವಾಗಲಿ ಎಂದು ಘೋಷಣೆ ಕೂಗಿ ಸಂಭ್ರಮಾಚರಣೆ ಮಾಡಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಪುಟ್ಟಸ್ವಾಮಿಗೌಡ ಮಾತನಾಡಿ, ನಮ್ಮ ನೆಚ್ಚಿನ ನಾಯಕ ಕನಕಪುರ ಬಂಡೆ, ಒಕ್ಕಲಿಗರ ಸಮುದಾಯದ ಹುಲಿ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿರುವ ಹಿನ್ನೆಲೆಯಲ್ಲಿ ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ಈ ಹಿಂದೆ ಚುನಾವಣಾ ಪೂರ್ವ ಸಂದರ್ಭದಲ್ಲಿ ಚಾಮರಾಜೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಪ್ರಾರ್ಥಿಸಲಾಗಿತ್ತು. ಈಗ ಅವರು ಯಶಸ್ವಿಯಾಗಿ ಮುಖ್ಯಮಂತ್ರಿ ಸ್ಥಾನ ಅಲಂಕರಿಸುವಂತೆ ಪ್ರಾರ್ಥಿಸಲಾಯಿತು ಎಂದರು.

ಡಿ.ಕೆ.ಶಿವಕುಮಾರ್ ಅವರು ರಾಜ್ಯದಲ್ಲಿ ಎಲ್ಲ ಜಾತಿ, ಧರ್ಮಗಳೊಂದಿಗೆ ಉತ್ತಮ ಬಾಂದವ್ಯವಿಟ್ಟುಕೊಂಡಿದ್ದಾರೆ. ಹಿಂದುತ್ವ ಪ್ರತಿಪಾದನೆ ಮಾಡುವವರು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಚಿನ್ನುಮುತ್ತು, ರಘು, ಸೋಮಶೇಖರ, ಮಾದೇಶ್, ಕೇಬಲ್ ರಘು, ಪಣ್ಯದ ಹುಂಡಿ ರಾಜು, ಶ್ರೀನಿವಾಸಗೌಡ, ರವಿಚಂದ್ರ ಪ್ರಸಾದ್, ನಿಜಧ್ವನಿ ಗೋವಿಂದ ರಾಜು, ಗಂಗವಾಡಿ ಮರಿಸ್ವಾಮಿ, ಮನೋಜ್, ಸಿದ್ದಲಿಂಗೇಗೌಡ, ಸುಬ್ಬಯ್ಯ, ಚಿಕ್ಕನಾಯಕ, ಲೋಕೇಶ್, ನಾಗರಾಜು, ಸಿ.ಕೆ ರವಿಕುಮಾರ್, ಸುರೇಶ್, ಈರಣ್ಣ, ಗೋವಿಂದ ಗೌಡ, ಚಿನ್ನಸ್ವಾಮಿ, ಮಹೇಶ್‌ಗೌಡ, ಪ್ರಕಾಶ್, ರಾಜಪ್ಪ, ನಾಗೇಂದ್ರ ಗೌಡ, ಸೋಮಣ್ಣ, ರವಿಗೌಡ, ಮಹೇಶ್, ಅರುಣಕುಮಾರ್ ಗೌಡ, ನಾಗರಾಜು, ಹಾಜರಿದ್ದರು.

ದಲಿತರಿಗೆ ಸಿದ್ದರಾಮಯ್ಯರಿಂದ ಅನ್ಯಾಯ

ಎಸ್‌ಸಿ, ಎಸ್‌ಟಿ ನಿಗಮಗಳಿಗೆ ಅನುದಾನ ನೀಡದೆ ನಿರ್ಗಮನ



ಸುದ್ದಿಗೋಷ್ಠಿಯಲ್ಲಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿದರು.

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ಸಮುದಾಯಕ್ಕೆ ಅನ್ಯಾಯ ಮಾಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಅವರನ್ನು ಬೀದಿಪಾಲು ಮಾಡಿ ಹೋಗಿದ್ದಾರೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಸ್‌ಸಿಪಿ, ಟಿಎಪಿ ಅನುದಾನವನ್ನು ಪಂಚ ಗ್ಯಾರಂಟಿ ಯೋಜನೆಗೆ ಬಳಕೆ ಮಾಡುವ ಮೂಲಕ ಎಸ್‌ಸಿ, ಎಸ್‌ಟಿ ನಿಗಮಗಳಿಗೆ 3 ವರ್ಷದಿಂದ ಅನುದಾನ ನೀಡಿಲ್ಲ. ಬೋರ್‌ವೆಲ್ ಕೊರೆಸಿಲ್ಲ. ದಲಿತರು, ಅಹಿಂದ ಹೆಸರು ಹೇಳಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷವನ್ನು ನಂಬಿ ಮತಕೊಟ್ಟ ದಲಿತರನ್ನು ಬೀದಿಪಾಲು ಮಾಡಿ ಹೋಗಿದ್ದಾರೆ. ರಾಜ್ಯದ ಇತಿಹಾಸದಲ್ಲೇ ಒಂದು ಬೋರ್ ಕೊರೆಸದಂತಹ ಇತಿಹಾಸ ಬರೆದು ಹೋಗಿದ್ದಾರೆ' ಎಂದರು.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಹೋದ ಕಡೆ, ಬಂದ ಕಡೆ ಸಂವಿಧಾನ ಹೇಳಿದರು. ಅವರ ಪಕ್ಷದ ಶಾಸಕರು ಆಯ್ಕೆ ಮಾಡಿರುವ ದಲಿತರ ಫಲಾನುಭವಿಗಳ ಜಮೀನುಗಳಿಂದ ನೀರು ಹೊರತರುವ ಕೆಲಸ ಮಾಡಿಲ್ಲ. ಹಾಗಾಗಿ ಅತಂತ್ರಾಗಿರುವ ಫಲಾನುಭವಿಗಳ ಪರ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ವಾರದೊಳಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮಗಳ ಮುಂದೆ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ಎಸ್‌ಸಿಪಿ, ಟಿಎಸ್ಪಿ ಅನುದಾನ ದುರ್ಬಳಕೆಗೆ ಕಾರಣರಾಗಿರುವ ಮಹದೇವಪ್ಪ ಅವರನ್ನು ಸಚಿವ ಸ್ಥಾನದಿಂದ ಕಿತ್ತು ಹಾಕಬೇಕು. ಮುಂದಿನ ಸಚಿವ ಸಂಪುಟದಲ್ಲಿ ಕೆಳದರ್ಜೆ ಖಾತೆಯನ್ನು ನೀಡಬೇಕು ಎಂದು ಆಗ್ರಹಿಸಿದರು.

ಚುನಾವಣೆ ಸಂದರ್ಭದಲ್ಲಿ ದಲಿತ ಬೀದಿಗಳಿಗೆ ಬಂದು ಮುಂದಿನ ಮುಖ್ಯಮಂತ್ರಿ ದಲಿತರು ಅಂಥಾ ಹೇಳಿ ಹೆಮಾರಿಸುವುದು. ಇತ್ತ ಅಧಿಕಾರವೂ ಇಲ್ಲ ಇತ್ತ ಅನುದಾನವೂ ಇಲ್ಲ. ಇತಿಹಾಸ ನೋಡಿದರೆ ಕಾಂಗ್ರೆಸ್ ದಲಿತರಿಗೆ ಮೋಸ ಮಾಡಿಕೊಂಡು ಬಂದಿದೆ ಎಂದರು.

ಬಿಜೆಪಿ ಮುಖಂಡ ಮಂಜುಕೋಡಿ ಉಗನೆ ಮಾತನಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ದಲಿತ ಮುಖ್ಯಮಂತ್ರಿ ವಿಚಾರ ಬಹಳ ಮುನ್ನೆಲೆಗೆ ಬರುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ಸರ್ಕಾರದಲ್ಲಿ 5 ವರ್ಷ, ಈಗ 3 ವರ್ಷಗಳು ಒಟ್ಟು 8 ವರ್ಷಗಳ ಕಾಲ ಅಧಿಕಾರ ಅನುಭವಿಸಿದ್ದಾರೆ. ಹೈಕಮಾಂಡ್ ಸೂಚನೆಯಂತೆ ರಾಜೀನಾಮೆ ನೀಡಿದ್ದಾರೆ ಅವರ ಅಭಿಮಾನಿಗಳು ಅಳುತ್ತಾರೆ. ಇನ್ನೊಂದು ಶಿವಕುಮಾರ್ ಸಿದ್ದರಾಮಯ್ಯ ಅವರ ಕಾಲಿಗೆ ಬೀಳುತ್ತಾರೆ. ಇಂಥ ಪರಿಸ್ಥಿತಿ ಬೇಕಾ? ಇದು ನಾಚಿಗೇಡಿತನ ಸಂಗತಿಯಾಗಿದೆ. ಡಾ.ಜಿ.ಪರಮೇಶ್ವರ, ಮಲ್ಲಿಕಾರ್ಜುನ ಖರ್ಗೆ ಪಕ್ಷಕ್ಕಾಗಿ ಸಾಕಷ್ಟು ದುಡಿದ್ದಾರೆ, ಹಿರಿಯರು ಆಗಿದ್ದಾರೆ. ಅಹಿಂದದಲ್ಲಿ ಅಲ್ಪಸಂಖ್ಯಾತರು ಇಲ್ಲ, ದಲಿತರು ಇಲ್ಲ. ಇಲ್ಲಿ ಜಾತಿವಾದ ಇಟ್ಟುಕೊಂಡು ಮಂತ್ರಿಗಳಾಗುವ ದಿಕ್ಕಿನಲ್ಲಿ ಹೋಗುತ್ತಿದ್ದಾರೆ. ಇಲ್ಲಿ. ಅಹಿಂದ ನ್ಯಾಯ ಕೊಡುವುದು ಎಲ್ಲಿ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸ್ಥಾನ ಈಗ ಖಾಲಿ ಇದೆಯಲ್ಲ ಡಾ.ಜಿ. ಪರಮೇಶ್ವರ್ ನಮಗೆ ಕೊಡಿ ಎಂದು ಕೇಳಬೇಕು. ದಲಿತರ ರಾಜಕಾರಣಿಗಳ ಪೈಕಿಯಲ್ಲಿ ಕೆ.ಎಸ್.ಮುನಿಯಪ್ಪ, ಸತೀಶ್ ಜಾರಕಿಹೊಳಿ, ಡಾ.ಜಿ.ಪರಮೇಶ್ವರ ಅವರಲ್ಲಿ ಯಾರಿಗಾದರೂ ನೀಡಿದರೆ ಕಾಂಗ್ರೆಸ್ ಜಾತ್ಯತೀತವಾಗಿ ನಡೆದುಕೊಂಡಿದೆ ಎಂದು ಹೇಳಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮೂಡಹಳ್ಳಿ ಮೂರ್ತಿ, ಶೇಷಪ್ಪ ಪಾಸ್ವಾನ್, ಸಾಗಡೆ ಗುರುಪ್ರಸಾದ್, ಹೇಮಂತ್ ಹಾಜರಿದ್ದರು.

ಸರ್ಕಾರದ ಪಂಚ ಗ್ಯಾರಂಟಿಗಳ ಸಮರ್ಪಕವಾಗಿ ತಲುಪಿಸಿ



ಪಂಚಗ್ಯಾರಂಟಿ ಯೋಜನೆ ಕುರಿತ ಅನುಷ್ಠಾನ ಸಮಿತಿ ಸಭೆಯಲ್ಲಿ ತಾಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಮಾತನಾಡಿದರು.

ಚಾಮರಾಜನಗರ: ರಾಜ್ಯ ಸರ್ಕಾರ ಜಾರಿ ಮಾಡಿರುವ ಪಂಚಗ್ಯಾರಂಟಿಗಳನ್ನು ಸಂಬಂಧಪಟ್ಟ ಇಲಾಖಾಧಿಕಾರಿಗಳು ಗೊಂದಲಕ್ಕೆ ಎಡೆಮಾಡಿಕೊಡದಂತೆ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಚಾಮರಾಜನಗರ ತಾಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಸೂಚಿಸಿದರು.

ನಗರದ ತಾಪಂ ಕಚೇರಿ ಸಭಾಂಗಣದಲ್ಲಿ ಪಂಚಗ್ಯಾರಂಟಿ ಯೋಜನೆ ಕುರಿತ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಭೆಗೂ ಮೊದಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ ಇಲಾಖೆ, ಸೆಸ್ಕ್, ಸಾರಿಗೆ, ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿಗಳಿಂದ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಕಳೆದ 3ವರ್ಷದಲ್ಲಿ ಅನುಷ್ಠಾನದ ಕುರಿತು ಮಾಹಿತಿ ಪಡೆದರು.

ಪಡಿತರ ವಿತರಣೆಗೆ ಸರ್ವರ್ ಸಮಸ್ಯೆಯಾಗಿದ್ದು, ಪಡಿತರದಾರರು ಬೆಳಗ್ಗಿನಿಂದ ಸಂಜೆವರೆಗೂ ನಿಂತು ಪಡಿತರ ಪಡೆಯಬೇಕಿದೆ. ಸಂಬಂಧಪಟ್ಟ ಆಹಾರ ಇಲಾಖೆ ಅಧಿಕಾರಿಗಳು ಬಯೋಮೆಟ್ರಿಕ್ ಬದಲಿಗೆ ಪರ್ಯಾಯ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರದ ಗಮನ ಸೆಳೆಯಬೇಕು ಎಂದು ಸೂಚಿಸಿದರು.

ಚಾಮರಾಜನಗರ ತಾಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಮರಿಯಾಲದ ಹುಂಡಿ ಕುಮಾರ್, ಮಲ್ಲಿಕಾರ್ಜುನ್, ರಾಜು, ಮಂಜುಳಾ, ಕುಮಾರಸ್ವಾಮಿ, ರಮೇಶ್, ಚಿನ್ನಸ್ವಾಮಿ, ರಂಗಸ್ವಾಮಿ, ರಾಜೇಶ್, ಸುಕುಮಾರ್, ತಾಪಂ ಯೋಜನಾಧಿಕಾರಿ ಕಿರಣ್‌ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಇಲಾಖೆ, ಆಹಾರಇಲಾಖೆ, ಸೆಸ್ಕ್, ಸಾರಿಗೆ, ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಬದನಗುಪ್ಪೆಯಲ್ಲಿ ನೂತನ ಬಸ್ ನಿಲ್ದಾಣ ಉದ್ಘಾಟನೆ



ಬದನಗುಪ್ಪೆ ಗ್ರಾಮದಲ್ಲಿ ಆಲ್ಬರ್ನಿಕ್ ಲಿಮಿಟೆಡ್‌ನ ಸಿಎಸ್‌ಆರ್ ಅನುದಾನದಡಿ ನಿರ್ಮಿಸಿರುವ ಬಸ್ ನಿಲ್ದಾಣವನ್ನು ಕಂಪನಿಯ ಜನರಲ್ ಮ್ಯಾನೇಜರ್ ಉಮೇಶ್ ಉದ್ಘಾಟಿಸಿದರು.

ಚಾಮರಾಜನಗರ: ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಆಲ್ಬರ್ನಿಕ್ ಲಿಮಿಟೆಡ್‌ನ ಸಿಎಸ್‌ಆರ್ ಅನುದಾನದಡಿ ನಿರ್ಮಿಸಿರುವ ಬಸ್ ನಿಲ್ದಾಣವನ್ನು ಕಂಪನಿಯ ಜನರಲ್ ಮ್ಯಾನೇಜರ್ ಉಮೇಶ್ ಉದ್ಘಾಟಿಸಿದರು.

ಗ್ರಾಮಸ್ಥರ ಬೇಡಿಕೆಯಂತೆ ಕಂಪನಿಯ ಸಿಎಸ್‌ಆರ್ ಅನುದಾನದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣ ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಸಮಾಜ ಮುಖಿ ಸೇವಾ ಕಾರ್ಯಗಳನ್ನು ಕಂಪನಿ ವತಿಯಿಂದ ಮಾಡಲಾಗುವುದು ಎಂದರು.

ಗ್ರಾಮದ ಮುಖಂಡ ಮಲ್ಲೇಶ್ ಮಾತನಾಡಿ, ಆಲ್ಬರ್ನಿಕ್ ಲಿಮಿಟೆಡ್‌ನ ಸಿಎಸ್ ಆರ್ ಅನುದಾನದಡಿಯಲ್ಲಿ ಗ್ರಾಮದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಿಕೊಡುವ ಮೂಲಕ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಬಿಸಿಲು, ಮಳೆಯಲ್ಲಿ ಗ್ರಾಮಸ್ಥರು, ವಿದ್ಯಾರ್ಥಿಗಳು ಚಾಮರಾಜನಗರ, ಮೈಸೂರು ಕಾಲೇಜು, ಆಸ್ಪತ್ರೆ, ಇನ್ನಿತರ ಕೆಲಸಕ್ಕಾಗಿ ಬಸ್‌ಗೆ ಹೋಗಲು ನಿಲ್ಲಬೇಕಾದ ಪರಿಸ್ಥಿತಿ ಇತ್ತು ಅದನ್ನು ಕಂಪನಿ ಮನಗಂಡು ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಿರುವುದು ತುಂಬಾ ಉಪಯೋಗವಾಗಿದೆ. ಗ್ರಾಮಸ್ಥರ ಪರವಾಗಿ ಕಂಪನಿಯವರಿಗೆ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಕಂಪನಿಯ ಸಿಎಸ್ ಆರ್ ಮುಖ್ಯಸ್ಥ ಕಣ್ಣನ್, ಸುಧೀಂದ್ರ, ತಾಪಂ ಮಾಜಿ ಸದಸ್ಯ ಬಸವಣ್ಣ ದೀಪ್ತಿ ಡೆವಲಪರ್ಸ್ ಜಗದೀಶ್, ಲೋಕೇಶ್, ನಾಗರಾಜಮೂರ್ತಿ, ಕುಮಾರ್, ಶಿವಪಾದಪ್ಪ, ನಂಜುಂಡಸ್ವಾಮಿ, ಮಹೇಶ್, ಮಹೇಶ್, ಮುಕುಂದಮೂರ್ತಿ, ರಾಜಮ್ಮ ಇದ್ದರು.

ಜೂ.20ರಂದು ಬೇಗೂರಲ್ಲಿ ಹನುಮ ಜಯಂತಿ

ಬೇಗೂರು(ಗುಂಡ್ಲುಪೇಟೆ): ಗ್ರಾಮದಲ್ಲಿ ಜೂ.20 ರಂದು ಹನುಮ ಜಯಂತಿ ಅದ್ದೂರಿಯಾಗಿ ನಡೆಸಲು ಬೇಗೂರು ಹೋಬಳಿಯ ಹನುಮ ಸೇವಾ ಸಮಿತಿಯಿಂದ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು. ಗ್ರಾಮದ ಭಗೀರಥ ಪುತ್ಥಳಿಯ ಆವರಣದಲ್ಲಿ ಸಮಾವೇಶಗೊಂಡ ಹನುಮ ಸೇವಾ ಸಮಿತಿಯ ಸದಸ್ಯರು ಜೂನ್ 20ರ ಶನಿವಾರ ಹನುಮ ಜಯಂತಿಯನ್ನು ಆಚರಿಸಲು ನಿರ್ಧರಿಸಿದರು ಮತ್ತು ಹನುಮಂತ ಹಾಗೂ ಶ್ರೀ ರಾಮನ ಮೂರ್ತಿ ವಿವಿಧ ಕಲಾತಂಡಗಳು ಸಮೇತ ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ದೇವಾಲಯದ ಆವರಣದಿಂದ ಮರೆವಣಿಗೆ ನಡೆಸಲಾಗುವುದು. ಗ್ರಾಮದ ರಾಷ್ಟ್ರೀಯ ಹೆದ್ದಾರಿಯ ಮೂಲಕ ಅಂಚೆ ಕಚೇರಿಯವರೆಗೆ ನಂತರ ಗ್ರಾಮದ ಆಂಜನೇಯ ಸ್ವಾಮಿ ದೇವಾಲಯದ ಆವರಣದವರೆಗೆ ಮೆರವಣಿಗೆ ನಡೆಸಲು ನಿರ್ಧರಿಸಲಾಯಿತು.

ತೆರಕಣಾಂಬಿಹುಂಡಿಯಲ್ಲಿ ಎಂಎಸ್‌ಐಎಲ್ ಮದ್ಯದಂಗಡಿ ತೆರೆದರೆ ಉಗ್ರ ಹೋರಾಟ



ಪತ್ರಿಕಾಗೋಷ್ಠಿಯಲ್ಲಿ ಗ್ರಾಪಂ ಮಾಜಿ ಸದಸ್ಯ ಶಶಿ ಅವ್ವ ಮಾತನಾಡಿದರು.

ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನ ತೆರೆಕಣಾಂಬಿಹುಂಡಿಯಲ್ಲಿ ಎಂಎಸ್ ಐಎಲ್ ಮದ್ಯಂಗಡಿ ತೆರೆದರೆ ಗ್ರಾಮಸ್ಥರೊಂದಿಗೆ ಬೀದಿಗಿಳಿದು ಹೋರಾಟ ಮಾಡಲಾಗುತ್ತದೆ ಎಂದು ಗ್ರಾಪಂ. ಮಾಜಿ ಸದಸ್ಯ ಶಶಿ ಅವ್ವ ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಗ್ರಾಮದಲ್ಲಿ ಬಾರ್ ತೆರೆಯಲು ಉದ್ದೇಶಿಸಿರುವ ಜಾಗದ ಅಕ್ಕಪಕ್ಕ ಮನೆಗಳು ಹಾಗೂ ಖಾಲಿ ನಿವೇಶನಗಳಿವೆ. ಬಾರ್ ತೆರೆದರೆ ಶಾಲಾ ಮಕ್ಕಳು, ಹೆಂಗಸರು ಓಡಾಡಲು ತೊಂದರೆಯಾಗಲಿದೆ ಎಂದರು.

ಈಗಾಗಲೇ ತೆರಕಣಾಂಬಿ ಗ್ರಾಮದಲ್ಲಿ 4 ಬಾರ್‌ಗಳಿದ್ದು, ಕುಡುಕರ ಹಾವಳಿ ಹೆಚ್ಚಾಗಿದೆ. ಈ ನಡುವೆ ತೆರಕಣಾಂಬಿಹುಂಡಿಯಲ್ಲಿ ಮತ್ತೊಂದು ಬಾರ್ ತೆರೆದರೆ ನಿವಾಸಿಗಳಿಗೆ ತೊಂದರೆಯಾಗಲಿದೆ ಎಂದರು.

ಗ್ರಾಪಂ ಸದಸ್ಯರು ಹಾಗೂ ಅಧ್ಯಕ್ಷರ ಅವಧಿ ಮುಗಿದಿರುವುದರಿಂದ ಪಿಡಿಒ ಸ್ವಂತ ತೀರ್ಮಾನದಿಂದ ಮದ್ಯದ ಅಂಗಡಿಗೆ ಜನರಲ್ ಲೈಸೆನ್ಸ್ ಹಾಗೂ ಎನ್‌ಒಸಿ ನೀಡಿದ್ದಾರೆ. ಈ ಸಂಬಂಧ ಅಬಕಾರಿ ಡಿಸಿ ಹಾಗೂ ಇನ್ಸ್‌ಪೆಕ್ಟರ್‌ಗೆ ಮನವಿ ಸಲ್ಲಿಸಲಾಗಿದೆ. ಅಬಕಾರಿ ಇನ್ಸ್‌ಪೆಕ್ಟರ್ ನಮಗೆ ಮಾಹಿತಿ ನೀಡದೆ ಸ್ಥಳ ಮಹಜರು ನಡೆಸಿದ್ದಾರೆ ಎಂದು ತಿಳಿಸಿದರು. ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಇತ್ತ ಗಮನ ಹರಿಸಿ ಹೊಸ ಬಾರ್ ತೆರೆಯಲು ಅನುಮತಿ ನೀಡಬಾರದು. ಒಂದು ವೇಳೆ ಅನುಮತಿ ನೀಡಿದರೆ ಗ್ರಾಮಸ್ಥರೆಲ್ಲರೂ ಸೇರಿ ಉಗ್ರ ಪ್ರತಿಭಟನೆಯನ್ನು ಮಾಡ ಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸುರೇಶ್, ನಂದೀಶ್, ಪ್ರದೀಪ್, ವಿನೋದ್, ಮಂಜು, ಪ್ರತಾಪ್, ಶಂಭು, ಜಗದೀಶ್ ಮನೋಜ್, ಅಶೋಕ ಹಾಜರಿದ್ದರು.

'ಸಿರಿ ಕ್ಯಾರೀ ಐವಿಎಫ್ ಸೆಂಟರ್'ನ ದಶಮಾನೋತ್ಸವ; ವಿಶೇಷ ವಾಕಥಾನ್





ಮೈಸೂರಿನ 'ಸಿರಿ ಕ್ಯಾರೀ ಐವಿಎಫ್ ಸೆಂಟರ್' ವತಿಯಿಂದ ದಶಮಾನೋತ್ಸವದ ಅಂಗವಾಗಿ ವಿಶೇಷ ವಾಕಥಾನ್ ಏರ್ಪಡಿಸಲಾಗಿತ್ತು. ಇದೇ ವೇಳೆ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಮೈಸೂರು, ಮಾ 29– ಮೈಸೂರಿನ 'ಸಿರಿ ಕ್ಯಾರೀ ಐವಿಎಫ್ ಸೆಂಟರ್'ನ ದಶಮಾನೋತ್ಸವದ ಅಂಗವಾಗಿ ವಿಶೇಷ ವಾಕಥಾನ್ ಆಯೋಜಿಸಲಾಗಿತ್ತು.

ಗುರುವಾರ ಬೆಳಗ್ಗೆ ನಡೆದ ಈ ವಾಕಥಾನ್ ಮೂಲಕ ಕಿಶೋರಿಯರ ಹಾಗೂ ಮಹಿಳೆಯರ ಆರೋಗ್ಯ ಹಾಗೂ ಪುಣ್ಯಕ್ಷೇತ್ರ ಚಾಮುಂಡಿಬೆಟ್ಟದ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಬೆಟ್ಟದ ತಪ್ಪಲು ತಾವರೆಕಟ್ಟೆ ಜಂಕ್ಷನ್‌ನಿಂದ ಪ್ರಾರಂಭವಾದ ವಾಕಥಾನ್, ನಂದಿವರೆಗೆ ತೆರಳಿ ಮತ್ತೆ ತಾವರೆಕಟ್ಟೆಗೆ ವಾಪಸ್ಸಾಗಿ ಕೊನೆಗೊಂಡಿತು. ವೈದ್ಯರು, ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡು, ಮಹಿಳಾ ಆರೋಗ್ಯ ಮತ್ತು ಚಾಮುಂಡಿಬೆಟ್ಟದ ಸ್ವಚ್ಛತೆ ಕಾಪಾಡುವ ಪ್ರತಿಜ್ಞೆ ಸ್ವೀಕರಿಸುವ ಮೂಲಕ ಸಮುದಾಯದ ಜವಾಬ್ದಾರಿಯನ್ನು ವ್ಯಕ್ತಪಡಿಸಿದರು.

ಕಿಶೋರಿಯರ ಆರೋಗ್ಯದ ಮಹತ್ವವನ್ನು ಮನದಟ್ಟು ಮಾಡುವುದು, ಮಹಿಳೆಯರ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಬಗ್ಗೆ ಕಾಳಜಿವಹಿಸಲು ಉತ್ತೇಜಿಸುವುದು, ಮೈಸೂರಿನ ಹೆಗ್ಗುರುತಾದ ಚಾಮುಂಡಿಬೆಟ್ಟವನ್ನು ಸ್ವಚ್ಛವಾಗಿ ಕಾಪಾಡಿಕೊಳ್ಳುವ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ವಾಕಥಾನ್‌ನ ಪ್ರಮುಖ ಉದ್ದೇಶವಾಗಿತ್ತು.

ಈ ವೇಳೆ ಆಯೋಜಕರು ಮಾತನಾಡಿ, ಆರೋಗ್ಯಕರ ಮಹಿಳೆಯರು ಆರೋಗ್ಯಕರ ಸಮಾಜದ ಅಡಿಪಾಯ. ಈ ವಾಕಥಾನ್ ಮೂಲಕ ಆರೋಗ್ಯದ ಬಗ್ಗೆ ಇರುವ ಮೌಢ್ಯಗಳನ್ನು ನಿವಾರಿಸಿ, ಕಿಶೋರಿಯರಿಗೆ ಅರಿವು ಮೂಡಿಸುವುದರ ಜೊತೆಗೆ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಜವಾಬ್ದಾರಿಯನ್ನು ತಿಳಿಸಿಕೊಡುವ ಪ್ರಯತ್ನ ಮಾಡಿದ್ದೇವೆ. ಪ್ರತಿಯೊಬ್ಬ ಮಹಿಳೆಯೂ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯವಾಗಿದ್ದರೆ ಇಡೀ ಕುಟುಂಬ, ನಂತರ ಸಮಾಜ ಆರೋಗ್ಯಯುತವಾಗಿರುತ್ತದೆ. ಸಿರಿ ಕೇರ್ ಐವಿಎಫ್ ಸೆಂಟರ್ ತನ್ನ ಅತ್ಯಾಧುನಿಕ ಮತ್ತು ನಿಷ್ಠಾವಂತ ಸೇವೆಗಳೊಂದಿಗೆ ಸಾಮಾಜಿಕ ಜವಾಬ್ದಾರಿಯನ್ನು ಮತ್ತಷ್ಟು ಬಲಪಡಿಸಿದೆ. ನಮ್ಮೊಂದಿಗೆ ಕೈಜೋಡಿಸಲು ಇಚ್ಛಿಸುವ ನಾಗರಿಕರು ಮೊ.ಸಂ.9108453643 ಮೂಲಕ ಸಂಪರ್ಕಿಸಬಹುದು ಎಂದು ತಿಳಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತೇಜಸ್ವಿನಿ ಟೂರಿಸ್ಟ್
5-6-2026, 2 ದಿನ ಕೇರಳ ಪ್ರವಾಸ ಕೊಟ್ಟಿಯೂರು, ರಾಜರಾಜೇಶ್ವರಿ ಟೆಂಪಲ್, ಮಡಾಯಿಕಾವ್ ಭದ್ರಕಾಳಿ ದೇವಸ್ಥಾನ, ಬೇಕುಲಬೀಚ್ ಒಟ್ಟು 8 ಸ್ಥಳಗಳು, ಬೆಳಗಿನ ಟಿಫಿನ್, 2 ಊಟ, ಒಂದು ದಿನ ವಿಶ್ರಾಂತಿ, 2x2 ಬಸ್ಸ್ ಸೇರಿದೆ. * 9-6-2026, 6 ದಿನ ತಮಿಳುನಾಡು, ಕನ್ಯಾಕುಮಾರಿ, ರಾಮೇಶ್ವರ, ಮಧುರೈ, ಶ್ರೀರಂಗಂ, ತಂಜಾವೂರು, ಒಟ್ಟು 14 ಸ್ಥಳಗಳು 2x2 ಬಸ್ಸಿನಲ್ಲಿ ಊಟ, ತಿಂಡಿ ಸೇರಿದೆ. * 21-06-2026 ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ್, 4 ಜ್ಯೋತಿರ್ಲಿಂಗ, ಮಾತೃಗಯಾ, ಮೌಂಟ್‌ಅಬು, ಚಾವಡನಗರ, ಜಯಪುರ, ಇತ್ಯಾದಿ ಒಟ್ಟು 21 ಸ್ಥಳಗಳು. ರೈಲಿನಲ್ಲಿ ಮತ್ತು ವಿಮಾನದಲ್ಲಿ.
Mob: 9379792644

WALK-IN INTERVIEW
Nursery Teachers
Social Teachers
Bus Drivers
Place: Yelwala, Mysuru
Call: 88674 99510

HOUSE FOR SALE
MDA APPROVED
3 BHK UNDER CONSTRUCTION
30x50 (odd) East facing.
Near Christ Public School
Mob: 7349124433

SHIVAPARVATHI Matrimonial
SC, ST Naidu, Kuruba, Gowda, Lingayath, Dhevanga, Tamil, Bhovi, Rajput, Dobi, Marati, Christian.
9019525552
9113621412

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತವೆ.
Teju Electronics, ಅಗ್ರಹಾರ
Mob: 9342114069

ಜಮೀನು ಮಾರಾಟಕ್ಕಿದೆ
1 ಎಕರ 11 ಗುಂಟೆ ಜಮೀನು ಹಾರೋಹಳ್ಳಿ ಗ್ರಾಮದ ಕೆರೆಯ ಹತ್ತಿರ, ವರುಣ ಹೋಬಳಿ, ಬನ್ನೂರು ಮುಖ್ಯರಸ್ತೆಯಿಂದ 1 ಕಿ.ಮೀ, ಶುದ್ಧ ದಾಖಲಾತಿ ಇರುವ ಕಾರ್ನರ್ ಜಮೀನು ಮಾರಾಟಕ್ಕಿದೆ
9606581101, 9606581202

475 ACRES LAND FOR SALE – BELTANGADY
Premium agricultural & commercial estate near Dharmasthala, Gandibagilu. Rubber, arecanut, coconut, teak, cashew plantations with river surroundings. Suitable for resorts, schools, hospitals, eco projects & investments. Price: Rs.85 Cr.
Contact: BR.SHYAM.B@GMAIL.COM

Mind-Body-Soul Healing
STRESS
Dr. Thandava Murthy
Psychologist
96069 11941

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಮತ್ತು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ವಿಜಯನಗರ, ಬೋಗಾದಿ, ಮೇಟಗಳ್ಳಿ, ಕೆ.ಡಿ. ರೋಡ್ ಹಾಗೂ ಮೈಸೂರು ಸುತ್ತಮುತ್ತ.
9538886328
7795104543

ಕೆಲಸಕ್ಕೆ ಬೇಕಾಗಿದ್ದಾರೆ
ಹಾಸ್ಪಿಟಲ್‌ನಲ್ಲಿ ಹಾಗೂ ಫ್ಯಾಕ್ಟರಿಯಲ್ಲಿ ಬೋಗಾದಿ ಹಾಗೂ ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಹುಡುಗರು ಬೇಕಾಗಿದ್ದಾರೆ. ಸಂಬಳ 16000 ರಿಂದ 22000 ಹಾಗೂ ESI ಮತ್ತು PF ಹಾಗೂ ವಸತಿ ಸೌಲಭ್ಯ ಇರುತ್ತದೆ.
9060106667/ 9535296835
9187709573/ 9187709574

ಶ್ರೀ ಸಂಜೀವಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲಿ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 14600(24 CT)
9108146123

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

FUND ORDER
ಉತ್ತಮ ದಿನಸಿ ಪದಾರ್ಥಗಳು, Fund ಆರ್ಡರ್‌ಗಳಿಗೆ ಅತಿ ಕಡಿಮೆ ಬೆಲೆಗೆ ಕೊಡಲಾಗುವುದು. Estimate ಸಹ ಕೊಡಲಾಗುವುದು. ನಮ್ಮಲ್ಲಿ ಉಚಿತ ಡೆಲಿವರಿ ದೊರೆಯುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಬಂಡಿಪಾಳ್ಯ, ನಜರ್‌ಬಾದ್, ಮೈಸೂರು
9739816440

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

MUDA SITE FOR SALE
30/60 N/F
Dattagalli
Mahamane circle
30/50 Site
Dattagalli near RT nagara
9900464111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಮನೆ ಮಾರಟಕ್ಕಿದೆ
ಕೆ.ಹೆಚ್.ಬಿ, ಹುಟಗಳ್ಳಿ
17X27 SITE
12 ಸಾವಿರ ಬಾಡಿಗೆ ಬರುತ್ತಿರುವ ನೆಲ ಮತ್ತು ಮೊದಲನೇ ಮಹಡಿ
ಮೈಸೂರು–ಮಡಿಕೇರಿ ರಸ್ತೆಗೆ ಸಮೀಪ
ಸಂಪರ್ಕಿಸಿ : 6362422664

9 ದಿನಗಳ ಅಯೋಧ್ಯಾ, ನೇಪಾಳ ಮುಕ್ತಿನಾಥ ಪ್ರವಾಸ 12/6/26 * 7 ದಿನಗಳ ಕಾಶಿ ಗಯಾ ಅಯೋಧ್ಯಾ ಬಾಬಾ ಬೈದ್ಯನಾಥ ಪ್ರವಾಸ 15/6/26 * 9 ದಿನಗಳ 3 ಸಿಸ್ಟರ್ ಅಸ್ಸಾಂ ಮೇಘಾಲಯ ಅರುಣಾಚಲ್ ಪ್ರದೇಶ 1/7/26 * 13 ದಿನಗಳ ಚಾರ್‌ಧಾಮ್ ಪ್ರವಾಸ 26/8/26 * 7 ದಿನಗಳ ಕೇರಳ ಪ್ರವಾಸ 18/9/26 * 7 ದಿನಗಳ ಅಂಡಮಾನ್ ಪ್ರವಾಸ 2/9/26 * 7 ದಿನಗಳ ತಮಿಳುನಾಡು ಪ್ರವಾಸ 17/8/26 * 8 ದಿನಗಳ ಗುಜರಾತ್ ಪ್ರವಾಸ 5/8/26 * 9 ದಿನಗಳ ರಾಜಸ್ಥಾನ್ 24/8/26
ಸುವರ್ಣ ಯಾತ್ರಾ
6360146483, 9008381022

SITE FOR SALE
30x40 E/F, MUDA allotted site @ Vijayanagar 4th Stage, Mysore.
9008598883
7019997191

TEACHERS WANTED
B.A./M.A., B.Ed., Hindi. B.Sc. / M.Sc., B.Ed. Science Computer, P.T. / Male or Female. Nursery teacher.
Contact:
9741849537, 9739125942
Kindly contact on 1st of June at 11.30

INDUSTRIAL WAREHOUSE FOR RENT
18,000 sq.ft. Hunsur Main Road, Near D. Mart, Belavadi.
Mob: 9164469693

ಅಡುಗೆಯವರು ಬೇಕಾಗಿದ್ದಾರೆ
ಮಾಂಸಹಾರಿ ಹೋಟೆಲ್‌ಗೆ ನಾಟಿ ಸ್ಟೈಲ್ ಅಡುಗೆ ಮಾಡುವ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಮೊ: 6364548607

ದಾಖಲಾತಿಗಳು ಕಳೆದು ಹೋಗಿದೆ
ಮೈಸೂರು ಆನಂದನಗರ ಬಡಾವಣೆಯ ನಿವೇಶನ ಸಂಖ್ಯೆ 75 C ಬ್ಲಾಕ್ ನ, ಅಲಾಟ್‌ಮೆಂಟ್ ಲೆಟರ್ ಮತ್ತು ಸ್ವಾಧೀನ ಪತ್ರ ಕಳೆದುಹೋಗಿದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ :
9845325295

SITE FOR SALE
30x40 SITE
At lakshman Teertha Layout, Halagre, Hunsur. (Immediate Registration)
CONTACT:
9663951574

TEACHER REQUIRED
INDIRA CONVENT(GUTHAL COLONY MANDYA), QUALIFICATION : BSc, MSc, BEd, MA, B.Ed, NST ANY DEGREE, PREFARABALY MANDYA TALUK AND DISTRICT, CONTACT :
8747011791
7259547922

V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SITE FOR SALE
40x60 North Facing Residential Site for Sale in Kanaka Nagar, Near Vijay Nagar 4th Stage. Good Location, Clear Documents, Suitable for House Construction.
CONTACT:
9986621579

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಸುರಕ್ಷವೆಲ್ ಡ್ಯೂಟಿ ಫೋರ್ಸ್ ಸಂಸ್ಥೆಗೆ ಹಿನಕಲ್ ಹಾಗೂ ಹುಲಿಕೆರೆ(KRS ರಸ್ತೆ)ಯಲ್ಲಿ ESI/PF/ ಉಚಿತ ವಸತಿಯೊಂದಿಗೆ ಉತ್ತಮ ಸಂಬಳದ ವ್ಯವಸ್ಥೆಯಿದೆ.
9242406261
9686422400

ಒಕ್ಕಲಿಗ ವಧು ಬೇಕಾಗಿದ್ದಾರೆ
36 ವರ್ಷ ವರನಿಗೆ ಸ್ವಜಾತಿಯ ವಧು ಬೇಕಾಗಿದ್ದಾರೆ.
Any Degree
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9945215789

HOUSE FOR RENT
G/F OUTHOUSE (WITH 1 or 2 rooms option) Near Akshaya Bhandar, New Kantharaja Urs Road, 12th Main, 14th Cross, Saraswathipuram, Vegetarians only/ No Brokers
9686174895
7760923685

ಬೇಕಾಗಿದ್ದಾರೆ
Accounts Assistants
ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಅನಿಲ್ 7026996123
ಶೇಖರ್ 9945911118
Office : Arthor Services PVT LTD.

SITE FOR SALE
30x40
ದೇವೇಗೌಡ ಸರ್ಕಲ್ ಹತ್ತಿರ ರಿಂಗ್ ರೋಡ್
30x40, 30x50
ಮಾರ್ವೆಲ್ ಕಾಲೇಜ್ ರಿಂಗ್ ರಸ್ತೆ ಹತ್ತಿರ. Contact:
Mob: 9448447035

Nypunya School of Excellence MYSURU ದಟ್ಟಗಳ್ಳಿ ಮತ್ತು ಆರ್.ಟಿ. ನಗರ
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಅನುಭವಿ ಮಹಿಳಾ ಆಯಾ, ಹೆವಿ ಲೈಸನ್ಸ್ ಉಳ್ಳ ಡ್ರೈವರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಆಟೋಮೆಟಿಕ್ ಕಾರ್ ಚಲಾಯಿಸಿ ಅನುಭವವಿರುವ ಡ್ರೈವರ್ ಬೇಕಾಗಿದ್ದಾರೆ.
ಆಸಕ್ತರು ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ :
96069 59451

ತಕ್ಷಣ ಬೇಕಾಗಿದೆ
ವಿಜಯನಗರ Water Tank ಸುತ್ತಮುತ್ತ ಹೆಸರಾಂತ ಸಂಸ್ಥೆಗೆ 13 ಮಕ್ಕಳು ಉಳಿದುಕೊಳ್ಳಲು ವಸತಿನಿಲಯ ಬಾಡಿಗೆಗೆ ಬೇಕಾಗಿದೆ.
8867672123

ಬೇಕಾಗಿದ್ದಾರೆ
ಇಚರ್ ಗಾಡಿ ಓಡಿಸಲು ಹೆವಿ ಡ್ರೈವಿಂಗ್ ಲೈಸನ್ಸ್ ಹೊಂದಿರುವ ಅನುಭವಿ ಡ್ರೈವರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ದೊರೆಯುತ್ತದೆ. ಸ್ಥಳ : ದೇವೇಗೌಡ ಸರ್ಕಲ್ ಹತ್ತಿರ, ಯರಗನಹಳ್ಳಿ, ಮೈಸೂರು.
ಪ್ರೋ. ಮಹೇಂದ್ರ ಎಲ್.
9538177707

ತಕ್ಷಣ ಬೇಕಾಗಿದ್ದಾರೆ
ಬನ್ನಿಮಂಟಪ ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ: 20450+ W/o(8 hrs)
9880727819
9620667819

WANTED TEACHING STAFF
for reputed institution (Experience Preferred) for ENGLISH, MATHS, subjects. Transport facilities available. Drop your resume through WhatsApp
8971577685
9980631121

REQUIRED
Female Home tutor Required for a class 10 CBSE student at K.C. Layout.
9739850012

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಸಿಬ್ಬಂದಿ ಬೇಕಾಗಿದ್ದಾರೆ
1. ಪುರುಷ ಸಿಬ್ಬಂದಿ – 5 ಸಂಖ್ಯೆ
2. ಮಹಿಳಾ ಸಿಬ್ಬಂದಿ – 4 ಸಂಖ್ಯೆ
ಸಂಬಳ: 12,000 ರಿಂದ 16,000 ESI & PF, ಊಟ ಮತ್ತು ವಸತಿ,
ನೇರ ಸಂದರ್ಶನ:
ದಿ ಕೋರಂ ಹೋಟೆಲ್
ವಿನೋಬ ರಸ್ತೆ, ಮೈಸೂರು–570001
9620274629
9886577795

ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ, ವಿದ್ಯಾಭ್ಯಾಸ 10ನೇ ತರಗತಿ ಪಾಸ್ ಅಥವಾ ಫೇಲ್ ವೇತನವು Rs. 14,000 ಹಾಗೂ ಪಿಎಫ್ ESI ಇರುತ್ತದೆ. ದೂರವಾಣಿ ಸಂಖ್ಯೆ
9972717495
8792815411

SITE FOR SALE
East South Corner (970 Sq ft), R.K. Layout (Opp to Ramabai nagar) Near Ring road
30x40 W/F, Jnanaganga, House Building, Dhanagalli B Block, Near Kote Road,
9845411228

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
6362150462, 7795749881

SITES FOR SALE
* 30x40 S/Face, KBL Gardenia, Vijayanagar 4th Stage.
* 40x60 W/Face Wipro Layout, KRS Road.
* 30x40 N/Face, Vivid Layout, Ilawala, Near Bus STand.
Contact: J.C. VENTURES
Mob: 9742315583

ವಿವೇಕಾನಂದ ಸರ್ಕಲ್‌ನಲ್ಲಿ
30x40 ಮನೆ ಮಾರಾಟಕ್ಕಿದೆ
20x30 ಮನೆ ಮಾರಾಟಕ್ಕಿದೆ.
60x40 ಮನೆ ಮಾರಾಟಕ್ಕಿದೆ.
ಸೈಟ್ ಕಮರ್ಷಿಯಲ್ 'H' ಬ್ಲಾಕ್
30x40 ಸೈಟು ಮಾರಾಟಕ್ಕಿದೆ.
Mob: 9008711654

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

CCTV installation & service at best price.
Mob: 9880123633

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ, ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಗಳಿಗೆ 18 ವರ್ಷದಿಂದ 40 ವರ್ಷದ ಒಳಗಿನವರು SSLC, PUC ಮತ್ತು Diploma Electronic ಓದಿರುವ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ಕ್ಯಾಂಟೀನ್ ಮತ್ತು ವಾಹನ ಸೌಲಭ್ಯವಿರುತ್ತದೆ. ಕೂಡಲೇ ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್ ಪ್ರೈಸಸ್
ಲೋಕೇಶ್ ಎಸ್.
8722844236

BSG PROPERTIES HINKAL MYSORE
Telecallers - 10 No
Team Leaders - 5 No
Fixed Salary + Incentive
Only Female, SSLC, PUC or Any Degree Pass or Fail
7349473373
8867997483

QUALITY Plywood
15 YEARS CERTIFIED WARRANTY
₹63/Sft. Onwards
Neem BOND PLATINUM
Neem AKSHAYAGOLD
9901291267 / 9148991267

ಬೇಕಾಗಿದ್ದಾರೆ
ಸಪ್ಲೈಯರ್ ಹಾಗೂ ಕ್ಲೀನಿಂಗ್ ಹುಡುಗರು ಹಾಗೂ ಹೆಂಗಸರು ಬೇಕಾಗಿದ್ದಾರೆ.
ಹೋಟೆಲ್ ಹನುಮಂತು
ಸರಸ್ವತಿಪುರಂ, ಮೈಸೂರು
Mob: 9738405038

WANTED
Montessori teachers and Ayah Wanted for Pre-School
9739606258
9739548823

3 BHK HOUSE FOR LEASE
In Vijayanagar 1st Stage, spacious sit-out & balcony with car parking and garden facilities available.
Mob: 7899831216
BROKERS EXCUSE

Designed to make EVERY SPACE beautiful
2 BHK HOME INTERIORS
@₹2.9 Lakhs Onwards
HOME SPACE MART
Mysore • Kushalnagar • Bangalore
For Site Visit: Aishwarya 9148991267

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಶ್ರೀ ಓಂಕಾರೇಶ್ವರ ಟೂರಿಸ್ಟ್, ಮೈಸೂರು.
2 ದಿನ ಕೇರಳ 4-6-2026 ಕೊಟ್ಟಿಯೂರು ಮಹಾದೇವ, ರಾಜರಾಜೇಶ್ವರ, ಮಡಾಯಿಕಾವ್ ಭಗವತಿ ಇತ್ಯಾದಿ.
6 ದಿನ ಕೇರಳ, 13/6/2026, ಮುನ್ನಾರು, ವೈನಾಡು, ಗುರುವಾಯೂರು, ಅನಂತಪದ್ಮನಾಭ, ಜಟಾಯು ಇತ್ಯಾದಿ
1 ದಿನ ಕೇರಳ, 8/6/2026 ಕೊಟ್ಟಿಯೂರು, ಮಹಾದೇವ ಟೆಂಪಲ್,
7 ದಿನ ಉತ್ತರ ಕರ್ನಾಟಕ, 24/6/2026, ಚಿತ್ರದುರ್ಗಾ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟ, ಕೂಡಲಸಂಗಮ ಇತ್ಯಾದಿ.
8618884805

TEACHERS WANTED
1. EVS Teacher (1 to 5th) -No. 2,
English Teacher (6th to 10th) -No. 2
3. Hindi Teacher (6th to 10th)No. 2
4. Helper (Female) - No. 2.
GAYATHRI VIDYALAYA
Hosa undavadi, K R Sagara, Srirangapatna(T), Mandya (D). Send Your Resumes to: gayathrieducationtrust.krs@gmail.com
Contact: 8892927318/ 8088848807/6360302911

ಸೈಟು ಮಾರಾಟಕ್ಕಿದೆ
20x30 E/F, 37 ಲಕ್ಷ
ರೂಪನಗರ ಪಕ್ಕ, ಪುಷ್ಪ ಲೇಔಟ್
30x40 E/F, 38 ಲಕ್ಷ
ಸುವರ್ಣನಗರ ಪಕ್ಕ, ಬೋಗಾದಿ
9845765573

SSC DEVELOPER
MUDA / DTCP
Premium Site's Available
20x30, 30x40 & 30x50
Ready to Construction
Near Bogadi-Gaddige Main Road
9945020212

ಬೇಕಾಗಿದ್ದಾರೆ
ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಬೇಕಾಗಿದ್ದಾರೆ. ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ. ಹೆಲ್ಪರ್ ಸಂಬಳ: 12000/– ಕ್ಯಾಷಿಯರ್ ಸಂಬಳ: 15000/– ಸ್ಥಳ: ವರಗಣಪತಿ ಪೆಟ್ರೋಲ್ ಬಂಕ್ ಮೇಟಗಳ್ಳಿ, ರಿಂಗ್ ರೋಡ್, ಮೈಸೂರು
7090802736
7892835168

HOUSE FOR RENT
ಮನೆ ಬಾಡಿಗೆಗೆ ಮತ್ತು ಭೋಗ್ಯಕ್ಕೆ ವಿದ್ಯಾರಣ್ಯಪುರಂ, ಜೆ.ಪಿ ನಗರ ಸರಸ್ವತಿಪುರಂ, ಕುವೆಂಪುನಗರ ರಾಮಕೃಷ್ಣನಗರ ಸುತ್ತಮುತ್ತ
9902506368

ಸೈಟು ಬೇಕಾಗಿದೆ
ಟಿ. ನರಸೀಪುರ ರಸ್ತೆ, ಬನ್ನೂರು ರಸ್ತೆ, JSS ಲೇಔಟ್, ನಿರ್ಮಾನ್ ಲೇಔಟ್, ಬಸವೇಶ್ವರ ಲೇಔಟ್, ಸಪ್ತಮಾತೃಕ, / L.B.S. ಲೇಔಟ್, ವರುಣ, ವಾಜಮಂಗಲ, ವರಕೋಡು ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ
9686071750

ಛತ್ರ ಖಾಲಿ ಇದೆ
ಜೈನ್ ಭವನ ಕಲ್ಯಾಣ ಮಂಟಪ (ಹವಾನಿಯಂತ್ರಿತ), ನಂ:588, ದಿವಾನ್ಸ್ ರಸ್ತೆ, ಮೈಸೂರು
ದಿನಾಂಕ : 24/6/2026 ರಿಂದ 25/6/2026 ರಂದು ಛತ್ರ ದೊರೆಯುತ್ತದೆ.
9739825449
9945295134

ಬೇಕಾಗಿದ್ದಾರೆ
ಹೆಬ್ಬಾಳಿನ ಹೆಸರಾಂತ ಕಂಪನಿಗೆ ITI ಹಾಗೂ Diploma ಮಾಡಿರುವ Candidates ಬೇಕಾಗಿದ್ದಾರೆ. CTC Offered : 20821 Rs. Benifits : ESI, PF, Conteen. ಹಾಗೂ ಬನ್ನೂರು ರಸ್ತೆಯಲ್ಲಿರುವ ಹೆಸರಾಂತ ಕಂಪನಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ
7892441955

ಬೇಕಾಗಿದ್ದಾರೆ
ಮೈಸೂರಿನ ಕಂಪನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ. ಸ್ಥಳ: ಚಾಮುಂಡಿಪುರಂ, ರಾಜೀವ್ ನಗರ, ಆರ್ ಗೇಟ್ ಹಾಗೂ ಸುಂಟಿಕೊಪ್ಪ, ಮಡಿಕೇರಿ,
ಸಂಪರ್ಕಿಸಿ: 9900212487/ 9035050656/ 7022395959

ತಿ.ನರಸೀಪುರದಲ್ಲಿ
30x61 ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಾರ್ವಜನಿಕ ಆಸ್ಪತ್ರೆ ಮುಖ್ಯ ರಸ್ತೆ, ಲಿಟಲ್ ಫ್ಲವರ್ ಕಾನ್ವೆಂಟ್ ಪಕ್ಕ, ಖಾಸಗಿ ಬಸ್ ನಿಲ್ದಾಣದ ಹತ್ತಿರ,
30x60(1800 Sqft) ಹಾಲ್ ಬಾಡಿಗೆಗೆ/ಭೋಗ್ಯಕ್ಕೆ ದೊರೆಯುತ್ತದೆ.
9448390643

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಶನಿವಾರ 30 ಮೇ 2026

ಮಸೀದಿ ನಿರ್ಮಾಣಕ್ಕೆ ಲಕ್ಷ ರೂ. ಚೆಕ್ ಹಸ್ತಾಂತರ



ಮೈಸೂರು ತಾಲೂಕು ಜಯಪುರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಮಸೀದಿ ನಿರ್ಮಾಣಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ನೀಡಿದ 1 ಲಕ್ಷ ರೂಗಳ ಚೆಕ್ ಅನ್ನು ಶಾಸಕ ಜಿ.ಟಿ.ದೇವೇಗೌಡ ಮುಸ್ಲಿಂ ಸಮುದಾಯದ ಮುಖಂಡರಿಗೆ ಹಸ್ತಾಂತರಿಸಿದರು. ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಮತ್ತು ಎಸ್.ಶ್ರೀಕಾಂತ್ ಅವರನ್ನು ಮುಸ್ಲಿಂ ಮುಖಂಡರು ಸನ್ಮಾನಿಸಿದರು. ಮುಸ್ಲಿಂ ಮುಖಂಡರಾದ ಮಹಮ್ಮದ್ ಅಲಿ(ಬಾಬಣ್ಣ), ಅಬ್ದುಲ್ ಮುತಾಲಿಫ್, ಜವರ ನಾಯಕ, ರೇಣುಕಾ, ನಾಗರಾಜು, ಮುಗನಾಯಕ, ಬಸಪ್ಪ, ರಂಗಸ್ವಾಮಿ, ಮಹದೇವಮ್ಮ, ನಿಂಗರಾಜು, ವಿಜಯ್, ಚಿಕ್ಕಣ್ಣ ಸೇರಿದಂತೆ ಹಲವರಿದ್ದರು.



ಹುಟ್ಟುಹಬ್ಬದ ಶುಭಾಶಯ

ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ ಅವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ಹೂಗುಚ್ಛ ನೀಡಿ, ಸಿಹಿ ತಿನಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಗೊಂದಲವಿಲ್ಲದೆ ಆಡಳಿತ ನಡೆಸಿದ ಸಿದ್ದರಾಮಯ್ಯ ನೈಜ ಧರ್ಮಪಾಲಕ

ಮಾಜಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್



ಸುದ್ದಿಗೋಷ್ಠಿಯಲ್ಲಿ ಮಾಜಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಾತನಾಡಿದರು.

ತಿ.ನರಸೀಪುರ, ಮೇ 29– ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಷ್ಟು ಕಾಲ ಯಾವುದೇ ಗೊಂದಲವಿಲ್ಲದೆ ನೈಜ ಧರ್ಮಪಾಲಕರಾಗಿ ಆಡಳಿತ ನಡೆಸಿದ್ದಾರೆ ಎಂದು ಮಾಜಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಬಣ್ಣಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಸ್ವಧರ್ಮ ಸೇರಿದಂತೆ ಎಲ್ಲಾ ಧರ್ಮದವರನ್ನು ಸಮನಾಗಿ ಕಾಣುವ ಮೂಲಕ ಜನಪರ ಆಡಳಿತ ನೀಡಿದ ನಾಯಕರಾಗಿದ್ದು, ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಏಕಾಏಕಿ ಇಳಿಸಿದ್ದು ನೋವಿನ ಸಂಗತಿ ಎಂದರು.

ಸಿದ್ದರಾಮಯ್ಯನವರು ತಮ್ಮ ಆಡಳಿತಾವಧಿಯಲ್ಲಿ ಯಾವುದೇ ಭಿನ್ನಮತಕ್ಕೆ ಅವಕಾಶ ನೀಡಲಿಲ್ಲ. ರೆಸಾರ್ಟ್ ರಾಜಕಾರಣವಂತೂ ಇಲ್ಲವೇ ಇಲ್ಲ. ನಾಯಕತ್ವದ ಬಿಕ್ಕಟ್ಟು ಎದುರಾಗದಂತೆ ಒಳ್ಳೆಯ ಆಡಳಿತ ನೀಡಿದ್ದಾರೆ ಎಂದು ಬಣ್ಣಿಸಿದ ಅವರು ಅತ್ಯಂತ ಪ್ರಾಮಾಣಿಕವಾಗಿ ಆಡಳಿತ ನಡೆಸಿದ್ದಾರೆ ಎಂದರು.

ಸಿದ್ದರಾಮಯ್ಯ ಎಂದೂ ಅಧಿಕಾರ ಮತ್ತು ಹಣದ ಹಿಂದೆ ಹೋದವರಲ್ಲ. ಅವರೊಬ್ಬ ಕರ್ಮಯೋಗಿ. ಹೈಕಮಾಂಡ್ ಮಾತಿಗೆ ತಲೆಬಾಗಿ ರಾಜೀನಾಮೆ ನೀಡಿದ್ದಾರೆ. ಮುಂದೆ ಮುಖ್ಯಮಂತ್ರಿ ಆಗುವವರು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಾರಿಗೆ ತಂದಿರುವ ಜನಪ್ರಿಯ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಧಿಕಾರ ಇರಲಿ, ಇಲ್ಲದಿರಲಿ, ಅವರ ಜೊತೆ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳಾದ ನಾವುಗಳು ಸದಾ ಕಾಲ ಇರುತ್ತೇವೆ. ನಿಮ್ಮ ಸೇವೆ ರಾಜ್ಯಕ್ಕೆ ಅಗತ್ಯವಿದೆ. ನೀವು ಸಕ್ರೀಯ ರಾಜಕಾರಣದಲ್ಲಿ ಇರಬೇಕು ಎಂದರು.

1983ರಲ್ಲಿ ವಿಧಾನಸಭೆಗೆ ಪ್ರವೇಶಿಸಿದ್ದ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ನಂತರ ರಾಜ್ಯದಲ್ಲಿ 2013ರಿಂದ 2018ರವರೆಗೆ ಮತ್ತು 2023ರಿಂದ ಇಲ್ಲಿವರೆಗೆ 2 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದು, ಒಟ್ಟು 8 ವರ್ಷಗಳ ಕಾಲ ಸಿಎಂ ಆಗಿ ಅಧಿಕಾರ ನಡೆಸಿರುವ ದಾಖಲೆ ಬರೆದಿದ್ದಾರೆ.

ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಅವರ ಅನುಯಾಯಿಯಾಗಿ ವೈಚಾರಿಕತೆಯ ನೆಲೆಗಟ್ಟಿನ ಗಟ್ಟಿಗ, ಮಾತಿನಲ್ಲಿ ದರ್ಪ ಇದ್ದರೂ ಮೃದು ಹೃದಯವಂತ, ಉತ್ತಮ ವಾಗ್ಮಿ, ಅಂಕಿ ಅಂಶಗಳ ಗಣಿ, ಚಿಂತಕ, ಪ್ರಗತಿಪರ ಚಿಂತಕರಾಗಿ ನಾಡನ್ನು ಅಭಿವೃದ್ಧಿಪಡಿಸಿದ್ದಾರೆ ಎಂದರು.

ಜನಪರ ಆಡಳಿತದ ಮುಖ: ಸಿದ್ದರಾಮಯ್ಯ ಅವರ ಆಡಳಿತವನ್ನು ಸಾಮಾನ್ಯ ಜನರು ನೆನಪಿಸಿಕೊಳ್ಳುವುದು 'ಭಾಗ್ಯಗಳ ಸರ್ಕಾರ' ಎಂಬ ಹೆಸರಿನಲ್ಲಿ. ಅವರ ಆಡಳಿತದಲ್ಲಿ ಜಾರಿಗೆ ಬಂದ ಅನೇಕ ಯೋಜನೆಗಳು ನೇರವಾಗಿ ಬಡವರ ಬದುಕಿಗೆ ನೆರವಾಗಿದ್ದವು. ಅನ್ನ ಭಾಗ್ಯ, ಕ್ಷೀರ ಭಾಗ್ಯ, ವಿದ್ಯಾಸಿರಿ, ಶಾದಿ ಭಾಗ್ಯ, ಕೃಷಿ ಭಾಗ್ಯ, ಇಂದಿರಾ ಕ್ಯಾಂಟೀನ್, ಗೃಹಲಕ್ಷ್ಮಿ, ಶಕ್ತಿ ಯೋಜನೆ, ಅನ್ನಪೂರ್ಣ ಮಾದರಿಯ ಕಲ್ಯಾಣ ಕಾರ್ಯಕ್ರಮಗಳು ಕೇವಲ ರಾಜಕೀಯ ಘೋಷಣೆಗಳಾಗಿರದೆ, ಲಕ್ಷಾಂತರ ಬಡ ಕುಟುಂಬಗಳಿಗೆ ನೆರವಾಗಿದ್ದವು. ಹಸಿದ ಹೊಟ್ಟೆಗೆ ಅನ್ನ, ವಿದ್ಯಾರ್ಥಿಗೆ ವಿದ್ಯೆ, ಮಹಿಳೆಗೆ ಆರ್ಥಿಕ ಶಕ್ತಿ ಮತ್ತು ರೈತನಿಗೆ ಬೆಂಬಲ ನೀಡುವ ಆಡಳಿತ ಶೈಲಿ ಅವರದ್ದು ಎಂದರು.

ಈ ವೇಳೆ ಭೈರಾಪುರ ಮಾಜಿ ಗ್ರಾಪಂ ಸದಸ್ಯ ಹೇಮಂತ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷ ಮಹದೇವಮ್ಮ ಇದ್ದರು.

ಶಾರದಾ ಶಿಕ್ಷಣ ಸಂಸ್ಥೆಯಲ್ಲಿ ಶಾಲಾ ಪ್ರಾರಂಭೋತ್ಸವ

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ



ಎಸ್ಎಸ್ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಮೇ 29– ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ನಮ್ಮ ಶಾಲೆ ಕಾರ್ಯ ನಿರ್ವಹಿಸುತ್ತಿದ್ದು, ಕಡಿಮೆ ಶುಲ್ಕದಲ್ಲಿ ಉತ್ತಮ ಶಿಕ್ಷಣ ಒದಗಿಸಲಾಗುತ್ತಿದೆ ಎಂದು ಹನುಮನಾಳು ಗ್ರಾಮದ ಶಾರದಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿದ್ದೇಗೌಡ ತಿಳಿಸಿದರು.

ಶಾಲಾವರಣದಲ್ಲಿ ರೌಂಡ್ ಟೇಬಲ್ ಇಂಡಿಯಾ–21, ಮೈಸೂರು ಲೇಡಿಸ್ ಸರ್ಕಲ್–09 ಹಾಗೂ ಶಾರದ ಶಿಕ್ಷಣ ಟ್ರಸ್ಟ್ ವತಿಯಿಂದ 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಶಾಲಾ ಕಚೇರಿ ಕಟ್ಟಡ, ತರಗತಿ ಕೊಠಡಿಗಳ ಉದ್ಘಾಟನೆ ಹಾಗೂ 2026–27ನೇ ಸಾಲಿನ ಶಾಲಾ ಪ್ರಾರಂಭೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅವರು ಮಾತನಾಡಿದರು.

ಶಾರದಾ ಶಿಕ್ಷಣ ಟ್ರಸ್ಟ್ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದು, ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಹಾಗೂ ನೈತಿಕ ಮೌಲ್ಯಗಳ ಶಿಕ್ಷಣಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಗ್ರಾಮೀಣ ಮಕ್ಕಳಿಗೂ ನಗರದ ವಿದ್ಯಾರ್ಥಿಗಳ ಮಟ್ಟದ ಶಿಕ್ಷಣ ಸಿಗಬೇಕು ಎಂಬ ಉದ್ದೇಶದಿಂದ ಅನುಭವವುಳ್ಳ ಶಿಕ್ಷಕರ ಮೂಲಕ ಬೋಧನೆ ಮಾಡಲಾಗುತ್ತಿದೆ. ಪೋಷಕರ ಸಹಕಾರದಿಂದ ಶಾಲೆ ಉತ್ತಮ ಸಾಧನೆ ಮಾಡುತ್ತಿದ್ದು, ಅನೇಕ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಶಾಲೆಯಲ್ಲಿ ವ್ಯಾಸಾಂಗ ಮಾಡಿದ 8 ಮಂದಿ ಎಂಬಿಬಿಎಸ್ ಪದವಿ ಪಡೆದು ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅಲ್ಲದೇ 150 ವಿದ್ಯಾರ್ಥಿಗಳು ಇಂಜಿನಿಯರ್ ಆಗಿ ತಮ್ಮ ಬದುಕು ಕಟ್ಟಿಕೊಂಡಿದ್ದಾರೆ ಎಂದರು.

ಮೈಸೂರು ಲೇಡೀಸ್ ಸರ್ಕಲ್ ಕಾರ್ಯದರ್ಶಿ ಮಯೂರಿ ರಾಕೇಶ್ ಮಾತನಾಡಿ, ಶಿಕ್ಷಣ ಎಂಬುದು ನಿರಂತರ ಪ್ರಕ್ರಿಯೆ. ಸಮಾಜ, ಶಿಕ್ಷಕರು ಹಾಗೂ ಪರಿಸ್ಥಿತಿಗಳು ನಮ್ಮ ಜೀವನದ ನಿಜವಾದ ಗುರುತುಗಳಾಗುತ್ತವೆ. ಶಿಕ್ಷಣ ವ್ಯಕ್ತಿ ಜ್ಞಾನ ಹೆಚ್ಚಿಸುವುದಷ್ಟೇ ಅಲ್ಲ. ಉತ್ತಮ ವ್ಯಕ್ತಿತ್ವ, ನೈತಿಕತೆ ಮತ್ತು ಸಮಾಜದ ಹೊಣೆಗಾರಿಕೆಯನ್ನು ಬೆಳೆಸುತ್ತದೆ. ಆದ್ದರಿಂದ ಜೀವನಪೂರ್ತಿ ಕಲಿಯುವ ಮನೋಭಾವ ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ ಎಂದರು.

ಪ್ರದೇಶಾಧ್ಯಕ್ಷೆ ನಾಗಶ್ರೀ ನಿಖಿಲೇಶ್ ಮಾತನಾಡಿದರು. ಈ ವೇಳೆ ನೂತನ ಶಾಲಾ ಕಚೇರಿಯನ್ನು ಮುರುಳೀಧರ್ ಉದ್ಘಾಟಿಸಿದರು. ಗೊರವನಹಳ್ಳಿ ಆದಿಶಕ್ತಿ ಗುರುಕುಲ ಅಧ್ಯಕ್ಷ ಡಾ.ಬೋಳಪ್ಪ ಗುರೂಜಿ ಗಣಪತಿ ಹೋಮ ನೆರವೇರಿಸಿದರು.

ರೌಂಡ್ ಟೇಬಲ್ ಇಂಡಿಯಾ–21 ಅಧ್ಯಕ್ಷ ಅಕ್ಷಯ್ ಕೊನೇರಿ, ಯೋಜನೆ ಸಂಚಾಲಕ ಮೋಹನ್ ರಾಜ್, ಕಾರ್ಯದರ್ಶಿ ರಾಕೇಶ್ ಕುಮಾರ್, ಸುನೀಲ್, ಲೇಡಿಸ್ ಸರ್ಕಲ್ ಅಧ್ಯಕ್ಷ ಶ್ರೀನಿಜ ಅಕ್ಷಯ್, ಕಾರ್ಯದರ್ಶಿ ಪವಿತ್ರ, ವಿವೇಕಾನಂದ ಕೇಂದ್ರ ಕನ್ಯಾಕುಮಾರಿ ಮೈಸೂರು ಶಾಖೆಯ ಗೀತಾದೀದಿ, ಅರವಿಂದ್ ಜಿ, ಗಾಯತ್ರಿ ದೀದಿ, ಶ್ರೀನಿವಾಸ್ ಜಿ, ದಿನೇಶ್ ಜಿ, ಶಿವಕುಮಾರ್ ಶರ್ಮ, ಶಾಲೆ ಮುಖ್ಯೋಪಾಧ್ಯಾಯ ವಸಂತ್ ಕುಮಾರ್, ತನುಜಾ ಇತರರಿದ್ದರು.

ಶಾಲಾ ದಾಖಲಾತಿ ಆಂದೋಲನಕ್ಕೆ ಚಾಲನೆ



ಬೆಳಗನಹಳ್ಳಿಯಲ್ಲಿ ಬಿಇಓ ರಾಜು ಶಾಲಾ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಿದರು.

ಹೆಚ್.ಡಿ.ಕೋಟೆ, ಮೇ 29– ಮುಂಬರುವ ಜೂ.1ರಿಂದ ಪ್ರಸಕ್ತ ಸಾಲಿನ ಶೈಕ್ಷಣಿಕ ತರಗತಿಗಳು ಆರಂಭವಾಗುವ ಹಿನ್ನೆಲೆಯಲ್ಲಿ ತಾಲೂಕಿನ ಬೆಳಗನಹಳ್ಳಿಯಲ್ಲಿ ಶಾಲಾ ದಾಖಲಾತಿ ಆಂದೋಲನಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಚಾಲನೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಶಾಲೆ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಗ್ರಾಮದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಿದರು. ಅಲ್ಲದೇ ಗ್ರಾಮದ ಪ್ರತಿಯೊಂದು ಮನೆಗೂ ಮಾಹಿತಿ ತಲುಪಿಸುವ ನಿಟ್ಟಿನಲ್ಲಿ ಆಟೋ ಮೂಲಕ ಮೈಕ್‌ನಲ್ಲಿ ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸುವಂತೆ ಹಾಗೂ ಶಾಲೆಯಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಪ್ರಚಾರ ಕೈಗೊಂಡು ಪೋಷಕರಿಗೆ ಮನವರಿಕೆ ಮಾಡಿಕೊಟ್ಟರು.

ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಮಾತನಾಡಿ, ಇಲಾಖೆ ಸೂಚನೆಯಂತೆ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗುತ್ತಿರುವುದರಿಂದ ತಾಲೂಕಿನ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸ್ಥಳೀಯ ಗ್ರಾಪಂ ಸಹಕಾರದೊಂದಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಶಾಲೆಗಳಲ್ಲಿ ವಿದ್ಯುತ್ ಸಮಸ್ಯೆ ಹಾಗೂ ಫ್ಯಾನ್‌ಗಳ ಕೆಟ್ಟಿದ್ದರೆ ಕೂಡಲೇ ದುರಸ್ತಿಗೊಳಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಶೌಚಾಲಯಗಳನ್ನು ಸ್ವಚ್ಛಗೊಳಿಸಬೇಕು ಎಂದರು.

ತಾಲೂಕಿನ ಎಲ್ಲಾ ಶಾಲೆಗಳಿಗೂ ಸರ್ಕಾರದಿಂದ ನೀಡಿರುವ ಪಠ್ಯಪುಸ್ತಕ ಮತ್ತು ಸಮವಸ್ತ್ರವನ್ನು ತಲುಪಿಸಿದ್ದು, ಜೂ.1ರಂದು ಪೋಷಕರ ಸಭೆ ಕರೆದು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಮತ್ತು ಎಸ್‌ಡಿಎಂಸಿಯವರ ಮೂಲಕ ಮಕ್ಕಳಿಗೆ ವಿತರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭ ಲಕ್ಷ್ಮೀಪುರ ಗ್ರಾಮದ ನಿವಾಸಿ ವೆಂಕಟೇಶ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವಂತೆ 20 ಸಾವಿರ ರೂ. ದೇಣಿಗೆ ನೀಡಿದರು.

ಇದೇ ವೇಳೆ ಸಿಆರ್‌ಪಿ ಮಾದೇವ, ಶಿಕ್ಷಕರಾದ ದೇವರಾಜು, ಜಯರಾಮೇಗೌಡ, ಆನಂದ, ನಾಗೇಶ್, ವೆಂಕಟರಂಗನಾಯಕ, ರಾಘವೇಂದ್ರಸ್ವಾಮಿ, ಸೌಮ್ಯ, ಪ್ರಕಾಶ್, ಮಹಮದ್ ಸಜಾದ್, ನಾಗೇಶ್, ಸುಮ, ಸ್ವಾಮಿ, ಜಯಂತಿ ಇನ್ನಿತರರಿದ್ದರು.

ಶಾಸಕ ದರ್ಶನ್ ಧ್ರುವನಾರಾಯಣ್‌ಗೆ ಸಚಿವ ಸ್ಥಾನ ನೀಡಿ



ಸುದ್ದಿಗೋಷ್ಠಿಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ಮಾತನಾಡಿದರು.

ನಂಜನಗೂಡು, ಮೇ 29– ಕ್ಷೇತ್ರದ ಜನಪ್ರಿಯ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡುವಂತೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಸೇವಕವಾಗಿ ಪಕ್ಷ ಅವರಿಗೆ ವಹಿಸಿದ ವಿವಿಧ ಹುದ್ದೆಗಳನ್ನು ನಿಭಾಯಿಸಿ, ರಾಜ್ಯದ ಮೂಲೆ ಮೂಲೆಗೂ ಸಂಚರಿಸುವ ಮೂಲಕ ಪಕ್ಷ ಸಂಘಟನೆ ಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಶ್ರಮಿಸಿದ್ದಾರೆ. ಜೊತೆಗೆ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಅಕಾಲಿಕ ಮರಣದಿಂದಾಗಿ ಅವರ ಸುಪುತ್ರ ದರ್ಶನ್ ಧ್ರುವನಾರಾಯಣ್ ಅವರು ರಾಜಕೀಯಕ್ಕೆ ಪಾದಾರ್ಪಣೆ ಮಾಡಿ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ರಾಜಕಾರಣ ಕಲಿತು, ತಂದೆ ಹಾದಿಯಲ್ಲಿ ನಡೆಯುವ ಮೂಲಕ ಕ್ಷೇತ್ರದ ಅಭಿವೃದ್ಧಿ ಜೊತೆಗೆ ಎಲ್ಲಾ ಜಾತಿ ಜನಾಂಗವನ್ನು ಒಟ್ಟಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಅವರ ರಾಜಕೀಯ ಪ್ರಬುದ್ಧತೆ ಮತ್ತು ಜನಸೇವೆ ಗುರುತಿಸಿ ಮತ್ತು ಧ್ರುವನಾರಾಯಣ್ ಅವರು ಪಕ್ಷಕ್ಕೆ ಸಲ್ಲಿಸಿರುವ ಕೊಡುಗೆಯನ್ನು ಗುರುತಿಸಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ದಲಿತ ಸಂಘರ್ಷ ಸಮಿತಿ ಆಗ್ರಹಿಸುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಸಿದ್ದರಾಜು, ತಾಲೂಕು ಸಂಚಾಲಕ ಘಟ್ಟವಾಡಿ ಮಹೇಶ್, ಮಲ್ಲಹಳ್ಳಿ ಹೂವಯ್ಯ, ಲೋಕೇಶ್, ಬಸವರಾಜು, ಆದರ್ಶ, ಮಹದೇವ ಪ್ರಸಾದ್ ಉಪಸ್ಥಿತರಿದ್ದರು.

ತಹಸೀಲ್ದಾರ್ ಕಚೇರಿಗೆ ಬಾಂಬ್ ಬೆದರಿಕೆ ಇಮೇಲ್

ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನದಳದಿಂದ ಪರಿಶೀಲನೆ



ಬಾಂಬ್ ನಿಷ್ಕ್ರಿಯದಳ ಹಾಗೂ ಶ್ವಾನದಳ ಪರಿಶೀಲನೆ ನಡೆಸುತ್ತಿರುವುದು.

ಸರಗೂರು, ಮೇ 29– ಪಟ್ಟಣದ ತಹಸೀಲ್ದಾರ್ ಕಚೇರಿಗೆ ಬಾಂಬ್ ಸ್ಫೋಟಿಸುವ ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೇ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದರು.

ಶುಕ್ರವಾರ ಮುಂಜಾನೆ ಸುಮಾರು 6.52ರಲ್ಲಿ ಭಾಗವತಾರ್ ಕುಂಡಿ ಎಂಬ ಹೆಸರಿನ ಖಾತೆಯಿಂದ ಇಮೇಲ್ ಬಂದಿದ್ದು, ಸರಗೂರು ತಹಸೀಲ್ದಾರ್ ಕಚೇರಿಯಲ್ಲಿ ಶೀಘ್ರದಲ್ಲೇ ಪ್ರಬಲ ಬಾಂಬ್ ಸ್ಫೋಟ ಸಂಭವಿಸಲಿದೆ. ಎಲ್ಲರನ್ನೂ ತಕ್ಷಣ ತೆರವುಗೊಳಿಸಿ ಎಂಬ ಶೀರ್ಷಿಕೆಯನ್ನು ಕನ್ನಡದಲ್ಲಿ ಉಲ್ಲೇಖಿಸಿ ದುಷ್ಕರ್ಮಿಯೋರ್ವ ಇಮೇಲ್ ಮಾಡಿದ್ದಾನೆ. ಇದನ್ನು ಗಮನಿಸಿದ ಕಚೇರಿ ಸಿಬ್ಬಂದಿ ಆತಂಕಗೊಂಡು ಪ್ರಭಾರ ತಹಸೀಲ್ದಾರ್ ಶ್ರೀನಿವಾಸ್ ಗಮನಕ್ಕೆ ತಂದು ಪಟ್ಟಣ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಕಚೇರಿ ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಕಚೇರಿಯಿಂದ ಹೊರ ಕಳುಹಿಸಿದರು. ಇದರಿಂದ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿ ತಹಸೀಲ್ದಾರ್ ಕಚೇರಿ ಎದುರು ಭಾರೀ ಜನಸ್ತೋಮವೇ ನೆರೆದಿತ್ತು.

ಈ ವೇಳೆ ತಹಸೀಲ್ದಾರ್ ಕಚೇರಿಗೆ ಆಗಮಿಸಿದ ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನದಳ ಈಶಾ ಒಂದು ಗಂಟೆಗೂ ಹೆಚ್ಚು ಕಾಲ ಇಡೀ ಕಟ್ಟಡವನ್ನು ಪರಿಶೀಲಿಸಿತು. ಈ ವೇಳೆ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗದ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ಕಚೇರಿ ಸಿಬ್ಬಂದಿ ನಿಟ್ಟುಸಿರು ಬಿಟ್ಟರು.

ಪ್ರಭಾರ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಕಚೇರಿಯ ಶಿರಸ್ತೇದಾರ್ ಮನೋಹರ್ ಮೇಲ್ ನೋಡುವಾಗ ಬಾಂಬ್ ಸ್ಫೋಟಿಸುವ ಇಮೇಲ್ ಬಂದಿರುವುದನ್ನು ಗಮನಿಸಿ ನಮಗೆ ತಿಳಿಸಿದರು. ಇಮೇಲ್‌ನಲ್ಲಿ ಸರಗೂರು ತಹಸೀಲ್ದಾರ್ ಕಚೇರಿ ಎಂದು ನಮೂದಿಸಿದ್ದರಿಂದ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಯಿತು. ತಕ್ಷಣ ಡಿಸಿ ಅವರ ಗಮನಕ್ಕೆ ತಂದು ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಕಚೇರಿಯಿಂದ ಹೊರ ಕಳುಹಿಸಿ ಎಸ್ಪಿ ಅವರಿಗೆ ವಿಚಾರ ತಿಳಿಸಲಾಯಿತು. ನಂತರ ಸ್ಥಳಕ್ಕಾಗಮಿಸಿದ ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನದಳದ ಆರ್‌ಎಸ್ಐ ವೀರಭದ್ರಪ್ಪ, ಎಆರ್‌ಎಸ್ಐ ರಾಘವೇಂದ್ರ, ಹೆಚ್.ಸಿ.ಪುಟ್ಟರಾಜು, ಮೂರ್ತಿ, ಪಿ.ಸಿ. ಜಗದೀಶ್, ಡಾಗ್ ಈಶಾ ಒಂದು ಗಂಟೆಗೂ ಹೆಚ್ಚು ಕಾಲ ಸ್ಥಳ ಪರಿಶೀಲಿಸಿ ಬಾಂಬ್ ಇಲ್ಲದಿರುವುದನ್ನು ಖಚಿತ ಪಡಿಸಿದರು ಎಂದರು.

ಈ ವೇಳೆ ಸಿಪಿಐ ಪ್ರಸನ್ನ ಕುಮಾರ್, ಎಸ್ಐ ಆರ್.ಕಿರಣ್, ತಹಸೀಲ್ದಾರ್ ಕಚೇರಿ ಸಿಬ್ಬಂದಿ ವರ್ಗದವರು ಇದ್ದರು. ಈ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರಿನ 6 ಮಂದಿ ನಾಪತ್ತೆ: ದೂರು ದಾಖಲು



ಹುಣಸೂರು, ಮೇ 29– ತಾಲೂಕಿನ ಹಲವು ಗ್ರಾಮಗಳಿಂದ ಸುಮಾರು 6 ಮಂದಿ ಕಾಣೆಯಾಗಿರುವ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಕೊತ್ತೇಗಾಲ ಗ್ರಾಮದ ಚಲುವರಾಜ್ ಅವರ ಪುತ್ರ ಸುಬ್ರಹ್ಮಣ್ಯ (42) ಸುಮಾರು 6 ತಿಂಗಳ ಹಿಂದೆ ಮನೆ ಬಿಟ್ಟು ಹೋದವರು ಇದುವರೆಗೂ ಮರಳಿ ಬಂದಿಲ್ಲ. ಶಿವಪುರದ ಆಲೇಗೌಡರ ಪುತ್ರ ಬೋರೇಗೌಡ (24) ಅವರು 2025ರ ಆ.1ರಂದು ಹೊರ ಹೋದವರು ಮರಳಿ ಬಂದಿಲ್ಲ. ಶಿಂಡೇನಹಳ್ಳಿ ಗೇಟ್ ಬಳಿ ವಾಸವಿದ್ದ ಲೇ. ಸಣ್ಣಕಾಳಯ್ಯ ಅವರ ಪುತ್ರ ರವಿ(28) 2017ರ ಜ.1ರಂದು ನಾಪತ್ತೆಯಾದವರು ಇದುವರೆಗೂ ಪತ್ತೆಯಾಗಿಲ್ಲ. ರತ್ನಪುರಿ ಗ್ರಾಮದ ವೆಂಕಟಬೋವಿ ಅವರ ಪುತ್ರ ಷಣ್ಮುಖ(30) ಏ.1ರಂದು ಬಾಂಬೆಗೆ ಡ್ರೈವಿಂಗ್ ಕೆಲಸಕ್ಕೆ ಮನೆಯಿಂದ ಹೋದವರು ಇನ್ನೂ ಮರಳಿ ಬಂದಿಲ್ಲ. ಹರವೆ ಗ್ರಾಮದ ಲೇ.ದೇವನಾಯಕನ ಪುತ್ರ ಮರಿನಾಯಕ(46) 2024ರ ಜ.14ರಂದು ಗ್ರಾಮದಿಂದ ಹೋದವರು ಇನ್ನೂ ಪತ್ತೆಯಾಗಿಲ್ಲ. ಅದೇ ರೀತಿ ತಾಲೂಕಿನ ಕೆರಗಲ್ ಕೊಪ್ಪಲ್ ಗ್ರಾಮದ ಕರಿಯ ಜೋಗಿ(65) ಅವರು 2022ರ ಡಿ.17ರಂದು ನಾಪತ್ತೆಯಾದವರು ಇದುವರೆಗೂ ಮನೆಗೆ ಬಂದಿಲ್ಲ ಎಂದು ಇವರ ಕುಟುಂಬಸ್ಥರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಇವರ ಬಗ್ಗೆ ಯಾರಿಗಾದರೂ ಮಾಹಿತಿ ಸಿಕ್ಕಲ್ಲಿ ಎಸ್ಐ ಸಂತೋಷ್ ಕಶ್ಯಪ್ ಅಥವಾ ಕಚೇರಿ ದೂರವಾಣಿ ಸಂಖ್ಯೆ 08222 252042 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಇಂದು ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ

ಹುಣಸೂರು, ಮೇ 29– ರೋಟರಿ ಕ್ಲಬ್ ಹುಣಸೂರು, ಸದೃಢ ಚಾರಿಟಬಲ್ ಟ್ರಸ್ಟ್ (ರಿ) ಹಾಗೂ ಶಂಕರ ಕಣ್ಣಿನ ಆಸ್ಪತ್ರೆ ಬೆಂಗಳೂರು, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಮೇ 30ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ನಗರದಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ತಿಳಿಸಿದ್ದಾರೆ. ಶಿಬಿರವನ್ನು ತಹಸೀಲ್ದಾರ್ ಜೆ.ಮಂಜುನಾಥ್, ಸಿಪಿಐ ಶಿವಮಾದಯ್ಯ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ವಹಿಸಲಿದ್ದಾರೆ. ರೋಟರಿ ಶಾಲೆ ಕಾರ್ಯದರ್ಶಿ ನಾರಾಯಣ್, ಕಾರ್ಯದರ್ಶಿ ಶ್ಯಾಮಣ್ಣ ಮತ್ತು ಎಲ್ಲಾ ರೋಟರಿ ಸದಸ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಶಿಬಿರವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾ.ರಾ.ಮಹೇಶ್ ಹುಟ್ಟುಹಬ್ಬ ಅರ್ಥಪೂರ್ಣವಾಗಿ ಆಚರಿಸೋಣ

ಪೂರ್ವಭಾವಿ ಸಭೆಯಲ್ಲಿ ಮಾಜಿ ಜಿಪಂ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ



ಕೆ.ಆರ್.ನಗರದಲ್ಲಿ ಸಾ.ರಾ.ಮಹೇಶ್ ಹುಟ್ಟುಹಬ್ಬ ಹಿನ್ನಲೆ ಪೂರ್ವಭಾವಿ ಸಭೆ ನಡೆಯಿತು.

ಕೆ.ಆರ್.ನಗರ, ಮೇ 29– ಸದಾ ಜನರ ಜೊತೆ ಬೆರತು ಅಭಿವೃದ್ಧಿ ಕಾರ್ಯದೊಂದಿಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಜನಪ್ರಿಯ ಮಾಜಿ ಸಚಿವರಾದ ಸಾ.ರಾ.ಮಹೇಶ್ ಅವರ 60ನೇ ಹುಟ್ಟುಹಬ್ಬವನ್ನು ಆ.10ರಂದು ಈ ಬಾರಿ ವಿಶಿಷ್ಟ ಹಾಗೂ ವಿಭಿನ್ನವಾಗಿ ಅರ್ಥಪೂರ್ಣವಾಗಿ ಎಲ್ಲರೂ ಜೊತೆಗೂಡಿ ಆಚರಿಸೋಣ ಎಂದು ಮಾಜಿ ಜಿಪಂ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ ತಿಳಿಸಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರ 60ನೇ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಅಂದು ಪಟ್ಟಣದ ಪುರಸಭೆ ಬಯಲ ರಂಗಮಂದಿರ (ರೇಡಿಯೋ ಮೈದಾನ) ಆವರಣದಲ್ಲಿ ಬೃಹತ್ ವೇದಿಕೆ ನಿರ್ಮಿಸಿ, ಸಮಾಜದೇವೋಭವ ಕಾರ್ಯಕ್ರಮದ ಮೂಲಕ ಬಡವರು, ನೊಂದವರು, ಶೋಷಿತ ವರ್ಗದವರಿಗೆ ಸವಲತ್ತುಗಳನ್ನು ವಿತರಿಸೋಣ ಎಂದು ಸಲಹೆ ನೀಡಿದರು.

ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಮಾತನಾಡಿ, ಪುರಸಭೆ ಬಯಲು ರಂಗ ಮಂದಿರದಲ್ಲಿ ಕಾರ್ಯಕ್ರಮ ಆಯೋಜಿಸಿ ಬಡಜನರಿಗೆ ಉಪಯೋಗವಾಗುವ ಸಮಾಜಮುಖಿ ಕಾರ್ಯಗಳಾದ ಉಚಿತ ಆರೋಗ್ಯ ತಪಾಸಣೆ, ಬೃಹತ್ ಉದ್ಯೋಗ ಮೇಳದ ಜೊತೆಗೆ ರಸ್ತೆ ಬದಿ ವ್ಯಾಪಾರಿಗಳಿಗೆ ತಳ್ಳುವ ಗಾಡಿ ವಿತರಣೆ ಸೇರಿದಂತೆ 60 ಯೋಜನೆಗಳನ್ನು ರೂಪಿಸಬೇಕು. ಅದಕ್ಕಾಗಿ ಹುಟ್ಟುಹಬ್ಬ ಸಮಿತಿ ರಚನೆ ಮಾಡುವಂತೆ ತಿಳಿಸಿದರು.

ಮಾಜಿ ಜಿಪಂ ಸದಸ್ಯ ಸಿ.ಜೆ.ದ್ವಾರಕೀಶ್ ಮಾತನಾಡಿ, ಮಾಜಿ ಸಚಿವ ಸಾ.ರಾ.ಮಹೇಶ್ ಅಣ್ಣನವರ ಹುಟ್ಟುಹಬ್ಬದ ಆಚರಣೆ ಕಾರ್ಯಕ್ರಮಕ್ಕೆ ಅವರ ಕುಟುಂಬದಿಂದ 1 ರೂಪಾಯಿಯನ್ನು ಪಡೆಯಬಾರದು. ಕಾರ್ಯಕರ್ತರು ಹಾಗೂ ಅಭಿಮಾನಿಗಳ ಸಹಕಾರದಿಂದ ಕಾರ್ಯಕ್ರಮ ಮಾಡಬೇಕು ಎಂದು ಸಲಹೆ ನೀಡಿದರು.


ಮಾಜಿ ಪುರಸಭೆ ಸದಸ್ಯ ಕೆ.ಉಮೇಶ್ ಮಾತನಾಡಿ, ಕೆ.ಆರ್.ನಗರ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲೂ ನಮ್ಮ ನಾಯಕರಾದ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರುವ ಫ್ಲೆಕ್ಸ್‌ಗಳನ್ನು ಹಾಕಬೇಕು. ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಹಾಗೂ ಶಾಲಾ–ಕಾಲೇಜುಗಳಲ್ಲಿ ಸಿಹಿ ವಿತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಬೇಕು. ಕಾರ್ಯಕ್ರಮಕ್ಕೆ 60 ಸಾವಿರ ಮಂದಿಯನ್ನು ಕರೆತರಬೇಕೆಂದು ಮನವಿ ಮಾಡಿದರು.

ಮಾಜಿ ಜಿಪಂ ಸದಸ್ಯ ಅಮಿತ್ ದೇವರಹಟ್ಟಿ ಮಾತನಾಡಿ, ಸಾ.ರಾ.ಮಹೇಶ್ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸಿ ಆಚರಣೆ ಮಾಡುವ ಬದಲು ಶೋಷಿತರನ್ನು ಗುರುತಿಸಿ ಅವರಿಗೆ ನೆರವು ನೀಡಬೇಕು ಎಂದರು.

ಸಭೆಯಲ್ಲಿ ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷರಾದ ಹಂಪಾಪುರ ಕುಮಾರ್, ಸಾಲಿಗ್ರಾಮ ಎಸ್.ಪಿ.ರಾಜಣ್ಣ, ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮಿ, ದಲಿತ ಮುಖಂಡ ನಾಗರಾಜ್, ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ಯುವ ಜೆಡಿಎಸ್ ತಾಲೂಕು ಅಧ್ಯಕ್ಷ ಯೋಗೇಶ್, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಮಹೇಶ್, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಗೀತಾ ಮಹೇಶ್, ಮಾಜಿ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಗಿರೀಶ್, ಸಂತೋಷ್ ಗೌಡ, ಕೆ.ಉಮೇಶ್, ರಾಜ ಶ್ರೀಕಾಂತ್, ತಾಪಂ ಮಾಜಿ ಸದಸ್ಯ ತಮ್ಮಣ್ಣ, ನಾಗಣ್ಣ, ಅಖಿಲ ಭಾರತ ವೀರಶೈವ ಸಮಾಜದ ಜಿಲ್ಲಾ ನಿರ್ದೇಶಕಿ ರೂಪ ಸತೀಶ್, ಜೆಡಿಎಸ್ ಮಹಿಳಾ ಘಟಕದ ನಗರ ಕಾರ್ಯದರ್ಶಿ ಮೋಹನಕುಮಾರಿ, ಜೆಡಿಎಸ್ ಮುಖಂಡರಾದ ಜಲೇಂದ್ರ, ಬಾಲಾಜಿ ಗಣೇಶ್, ಜೆಡಿಎಸ್ ಪಕ್ಷದ ಮತದಾರರ ಪರಿಷ್ಕರಣೆ ತಾಲೂಕು ಅಧ್ಯಕ್ಷ ವಕೀಲ ತಿಮ್ಮಪ್ಪ, ಜೆಡಿಎಸ್ ಮುಖಂಡರಾದ ರವಿ, ಆಂಜನೇಯ ಬ್ಲಾಕ್ ಶಿವಣ್ಣ, ಮಲ್ಲಿ, ಮನು, ಯೋಗೇಶ್, ಯೋಗೇಶ್, ಡಿಸಿಬಿ ಪವನ್, ಕಾಶಿ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರಿದ್ದರು.

> "ಕಳೆದ 20 ವರ್ಷಗಳಿಂದ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ನೊಂದವರು, ಬಡವರು, ಶೋಷಿತರು, ವಿಕಲಚೇತನರಿಗೆ ಯಾವುದೇ ಜಾತಿಬೇಧ ಮಾಡದೇ ಸಹಾಯ ಮಾಡಿದ್ದಾರೆ. ಹೀಗಾಗಿ ಅವರ 60ನೇ ಹುಟ್ಟುಹಬ್ಬವನ್ನು ನಾವೆಲ್ಲರೂ ಜಾತಿಬೇಧವಿಲ್ಲದೆ ಒಗ್ಗೂಡಿ ಆಚರಿಸೋಣ. ಸಾ.ರಾ.ಮಹೇಶ್ ಹೆಸರಲ್ಲಿ ನಾನು ರಸ್ತೆ ಬದಿ ವ್ಯಾಪಾರಸ್ಥರಿಗೆ 10 ತಳ್ಳುವ ಗಾಡಿ ಅಥವಾ ಒಂದು ಲಕ್ಷ ದೇಣಿಗೆ ಕೊಡುತ್ತೇನೆ.
> – ಮಿರ್ಲೆ ಅಣ್ಣೇಗೌಡ, ಗೌರವಾಧ್ಯಕ್ಷ, ಕೆ.ಆರ್.ನಗರ ತಾಲೂಕು ಒಕ್ಕಲಿಗರ ಸಂಘ.

ಸಾಲಬಾಧೆ: ರೈತ ಆತ್ಮಹತ್ಯೆ



ಕೆ.ಆರ್.ನಗರ, ಮೇ 29– ತಂಬಾಕು ಬೆಲೆ ಕುಸಿತದಿಂದಾಗಿ ಸಾಲ ಬಾಧೆ ತಾಳಲಾರದೇ ರೈತರೊಬ್ಬರು ಕ್ರಿಮಿನಾಶಕ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮಳಲಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಲೇ.ಜವರೇಗೌಡರ ಪುತ್ರ ವಿರೂಪಾಕ್ಷ(65) ಆತ್ಮಹತ್ಯೆ ಮಾಡಿಕೊಂಡವರು. ಇವರು ತಮ್ಮ ಮೂರೂವರೆ ಎಕರೆ ಜಮೀನಿನಲ್ಲಿ ತಂಬಾಕು ಬೆಳೆಯಲು ತಾಲೂಕಿನ ಸಿದ್ದಾಪುರ ಸಹಕಾರ ಸಂಘದಲ್ಲಿ ಪತ್ನಿ ಹೆಸರಿನಲ್ಲಿ ಸಾಲ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನಲ್ಲಿ ಮತ್ತು ಚಿನ್ನ ಅಡವಿಟ್ಟು ಸಾಲ, ಕೈಸಾಲ ಸೇರಿದಂತೆ ಒಟ್ಟು 8 ಲಕ್ಷ ರೂ. ಸಾಲ ಮಾಡಿದ್ದರು ಎನ್ನಲಾಗಿದೆ.

ಆದರೆ ತಂಬಾಕು ಬೆಲೆ ಕುಸಿತದಿಂದಾಗಿ ತೀವ್ರ ನಷ್ಟ ಅನುಭವಿಸಿದ್ದರು. ಇದರಿಂದಾಗಿ ಮಾಡಿದ ಸಾಲದ ಮೇಲಿನ ಬಡ್ಡಿ ಹೆಚ್ಚಾಗಿ ಸಾಲ ತೀರಿಸಲು ಸಾಧ್ಯವಾಗದ ಹಿನ್ನಲೆಯಲ್ಲಿ ತೀವ್ರ ಮನನೊಂದಿದ್ದ ಅವರು ಗುರುವಾರ ಸಂಜೆ ಕ್ರಿಮಿನಾಶಕ ಮಾತ್ರೆ ಸೇವಿಸಿ ಮಲಗಿದ್ದರು. ಈ ವೇಳೆ ಮನೆಯವರು ವಿರೂಪಾಕ್ಷ ಅವರನ್ನು ಟೀ ಕುಡಿಯಲು ಎಬ್ಬಿಸಲು ಹೋಗಿದ್ದು, ಆತ ಏಳದಿದ್ದಾಗ ಅಕ್ಕಪಕ್ಕದ ಮನೆಯವರ ಸಹಾಯದಿಂದ ತಕ್ಷಣ ಕೆ.ಆರ್.ನಗರ ತಾಲೂಕು ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ ಎಂದು ಮೃತ ರೈತನ ಪುತ್ರ ಕರುಣಾ ಕುಮಾರ್ ಕೆ.ಆರ್.ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ಮಿತ್ರ

ಮೈಸೂರು ಟೈಯರ್– 1 ಹೆಲ್ತ್ ಕೇರ್ ಹಬ್ ಆಗುವ ಅರ್ಹತೆ ಹೊಂದಿದೆ

ಮಾಜಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯ

- ಮೈಸೂರಿನಲ್ಲಿ ಟ್ರಾಫಿಕ್ ಮುಕ್ತ ಸುಂದರ ಪರಿಸರ
- ಹೈದರಾಬಾದ್ ಬಿಟ್ಟು ಮೈಸೂರಿನಲ್ಲಿ ವಾಸ್ತವ್ಯ
- ಸುಂದರ ಬದುಕಿಗೆ ಅವಶ್ಯ ಸೌಲಭ್ಯವಿದೆ
- ನಗರೀಕರಣ ಶೇಕಡ 50ರಿಂದ ಶೇಕಡ 70 ಏರಿಕೆ ಸಾಧ್ಯತೆ



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಶುಕ್ರವಾರ ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಮೈಸೂರು ವಲಯವು ಆಯೋಜಿಸಿದ್ದ 'ಮೈಸೂರು ಆಸ್ಪತ್ರೆ ಕಾರ್ಯಾಚರಣೆಗಳು ಮತ್ತು ರೋಗಿಗಳ ಅನುಭವ' ಕುರಿತ 'ಸಿಐಐ ಮೈ ಹೋಪ್–2026' ಸಮ್ಮೇಳನವನ್ನು ಮಾಜಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿ ಮಾತನಾಡಿದರು.

ಮೈಸೂರು, ಮೇ29(ಬಿಎಲ್‌ಯು)– ಆರೋಗ್ಯ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟದ ಟೈಯರ್– 1 ಹೆಲ್ತ್ ಕೇರ್ ಹಬ್ ಆಗಲು ಮೈಸೂರು ಎಲ್ಲಾ ಅರ್ಹತೆ ಹೊಂದಿದೆ ಎಂದು ಮಾಜಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಮೈಸೂರು ವಲಯವು ಆಯೋಜಿಸಿದ್ದ 'ಮೈಸೂರು ಆಸ್ಪತ್ರೆ ಕಾರ್ಯಾಚರಣೆಗಳು ಮತ್ತು ರೋಗಿಗಳ ಅನುಭವ' ಕುರಿತ 'ಸಿಐಐ ಮೈ ಹೋಪ್–2026' ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರಿನಿಂದ ಮೈಸೂರಿಗೆ ಕೇವಲ ಎರಡು ಗಂಟೆ ಅವಧಿಯಲ್ಲಿ ತಲುಪಿದ ತಮ್ಮ ಅನುಭವವನ್ನು ಈ ವೇಳೆ ಉಲ್ಲೇಖಿಸಿದ ದಿನೇಶ್ ಗುಂಡೂರಾವ್, ಸಿಲಿಕಾನ್ ಸಿಟಿ ಬೆಂಗಳೂರಿನ ವಾಹನ ದಟ್ಟಣೆಗಿಂತ ಮೈಸೂರಿನ ಟ್ರಾಫಿಕ್ ಮುಕ್ತ ಸುಂದರ ಪರಿಸರವನ್ನು ಪ್ರಶಂಸಿಸಿದರು.

ಉತ್ತಮ ಸಂಪರ್ಕ ವ್ಯವಸ್ಥೆ: ಕರ್ನಾಟಕದ ಪ್ರಮುಖ ನಗರಗಳಲ್ಲಿ ಒಂದಾದ ಮೈಸೂರಿಗೆ ಉತ್ತಮ ರಸ್ತೆ ಸಂಪರ್ಕದ ಜೊತೆಗೆ ಸಮರ್ಪಕ ರೈಲು ಸಂಚಾರ ವ್ಯವಸ್ಥೆ ಇದೆ, ವಿಮಾನಯಾನ ಸಂಪರ್ಕ ಕೂಡ ಇದ್ದು, ಮುಂದಿನ ದಿನಗಳಲ್ಲಿ ಮೈಸೂರಿನ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ತಮಿಳುನಾಡಿನ ಕೊಯಮತ್ತೂರು ನಂಬರ್–1, ಹೆಲ್ತ್ ಕೇರ್ ಹಬ್ ಆಗಿದೆ. ಈ ಸ್ಥಾನ ಪಡೆಯಲು ಕೊಯಮತ್ತೂರಿಗೆ ಹಲವು ಪೂರಕ ಸೌಲಭ್ಯಗಳಿವೆ. ಕೊಯಮತ್ತೂರು ನಂತರ ಮೈಸೂರು ನಂಬರ್–1 ಹೆಲ್ತ್ ಕೇರ್ ಹಬ್ ಆಗಲಿದೆ. ಈ ಮೂಲಕ ಮೈಸೂರು ಗುಣಮಟ್ಟದ ಆರೋಗ್ಯ ಸೇವೆ ನೀಡುವ ಟಯರ್ ಒನ್ ಹೆಲ್ತ್ ಕೇರ್ ಹಬ್ ಆಗಿ ಬೆಳೆಯಲಿದೆ ಎಂದರು.

ಪ್ರತಿಷ್ಠಿತ ಆಸ್ಪತ್ರೆಗಳು: ಸಾಂಸ್ಕೃತಿಕ ನಗರವಾಗಿ, ಪಾರಂಪರಿಕ ನಗರವಾಗಿ, ಯೋಗ ನಗರವಾಗಿರುವ ಮೈಸೂರು ಹೆಲ್ತ್ ಹಬ್ ಆಗಲು ಪೂರಕ ವಾತಾವರಣ ವಿದೆ. ಈ ಕಾರಣದಿಂದಲೇ ಮೈಸೂರಿನಲ್ಲಿ ಅಪೋಲೊ, ನಾರಾಯಣ ಹೃದಯಾಲಯ, ಮಣಿಪಾಲ್ ಸೇರಿದಂತೆ ಇತರೆ ಪ್ರತಿಷ್ಠಿತ ಆರೋಗ್ಯ ಸಂಸ್ಥೆಗಳು ಆಸ್ಪತ್ರೆ ನಿರ್ಮಾಣ ಮಾಡಿವೆ ಎಂದು ಹೇಳಿದರು.

ನನ್ನ ಸ್ನೇಹಿತರೊಬ್ಬರು ಹೈದರಾಬಾದ್‌ನಲ್ಲಿದ್ದ ತಮ್ಮ ಆಸ್ತಿ ಮಾರಾಟ ಮಾಡಿ, ಮೈಸೂರಿನಲ್ಲಿ ಮನೆ ಖರೀದಿಸಿ ಇಲ್ಲಿ ವಾಸ ಮಾಡುತ್ತಿದ್ದಾರೆ. ಈ ಮೂಲಕ ಪ್ರಶಾಂತ ನಗರಿ ಮೈಸೂರು ವಿವಿಧ ರಾಜ್ಯಗಳ ಜನರನ್ನು ಆತ್ಯಾಕರ್ಷಿಸುತ್ತಿದೆ. ಗುಣಮಟ್ಟದ ಆಹಾರ ದೊರೆಯುವ ಹೋಟೆಲ್‌ಗಳು, ಗುಣಮಟ್ಟದ ಶಿಕ್ಷಣ ನೀಡುವ ಶಾಲಾ ಕಾಲೇಜುಗಳು, ವಾಸಕ್ಕೆ ಯೋಗ್ಯವಾದ ಮನೆಗಳು ದೊರೆಯುವುದರಿಂದ ಮೈಸೂರು ಬೇರೆ ಭಾಗದ ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ ಎಂದು ದಿನೇಶ್ ಗುಂಡೂರಾವ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಬೃಹತ್ ಕೈಗಾರಿಕೆಗಳಿದ್ದು, ವಿವಿಧ ರಾಜ್ಯಗಳ ಜ್ಞಾನವಂತರನ್ನು ಆಕರ್ಷಿಸುತ್ತಿದೆ. ಈ ಮೂಲಕ ಸುಂದರ ಬದುಕು ಸಾಗಿಸಲು ಅವಶ್ಯವಾಗಿ ಏನು ಬೇಕೋ ಅದೆಲ್ಲವೂ ಮೈಸೂರಿನಲ್ಲಿ ಇದೆ. ಈ ಕಾರಣದಿಂದಲೇ ಮೈಸೂರನ್ನು ದೇಶ–ವಿದೇಶದ ಜನರು ಅತೀ ಹೆಚ್ಚಾಗಿ ಇಷ್ಟಪಡುತ್ತಾರೆ ಎಂದು ಹೇಳಿದರು.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಲವು ವಿಶಿಷ್ಟ ಯೋಜನೆಗಳನ್ನು ರೂಪಿಸಿದೆ. ಅಲ್ಲದೆ ಸರ್ಕಾರದ ನೀತಿ ನಿಯಮಗಳಲ್ಲಿ ಹಲವು ಸುಧಾರಣೆಗಳನ್ನು ತಂದಿದೆ. ಮೈಸೂರಿನಲ್ಲಿ ಜಯದೇವ ಆಸ್ಪತ್ರೆ ನಿರ್ಮಾಣ ಮಾಡಿರುವ ಸರ್ಕಾರ ಈಗ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡುತ್ತಿದ್ದು, ಇದರ ಪ್ರಕ್ರಿಯೆಗಳು ಆರಂಭವಾಗಿವೆ ಎಂದರು.

ಮೈಸೂರಿನಲ್ಲಿ ಆರೋಗ್ಯ ಸೌಲಭ್ಯ ನೀಡಲು ಸರ್ಕಾರ ಒಂದು ಕಡೆ ವಿಶಿಷ್ಟ ಯೋಜನೆ ರೂಪಿಸುತ್ತಿದ್ದರೆ, ಖಾಸಗಿ ಸಂಸ್ಥೆಗಳು ಗುಣಮಟ್ಟದ ಚಿಕಿತ್ಸೆ ನೀಡುವ ಆಸ್ಪತ್ರೆಗಳನ್ನು ಮತ್ತೊಂದು ಕಡೆ ನಿರ್ಮಾಣ ಮಾಡುತ್ತಿವೆ. ಮುಂದಿನ ದಿನಗಳಲ್ಲಿ ಮೈಸೂರು ಉತ್ತಮ ಗುಣಮಟ್ಟದ ಟಯರ್ ಒನ್ ಹೆಲ್ತ್ ಕೇರ್ ಹಬ್ ನಗರವಾಗಲಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ನಗರೀಕರಣದ ಬೆಳವಣಿಗೆ ಕ್ಷಿಪ್ರಗತಿಯಲ್ಲಿ ಸಾಗುತ್ತಿದೆ. 2011ರಲ್ಲಿ ಶೇಕಡ 38ರಷ್ಟಿದ್ದ ನಗರೀಕರಣದ ಬೆಳವಣಿಗೆ ಈಗ ಶೇಕಡ 50 ರಷ್ಟಾಗಿದ್ದು, ಮುಂದಿನ ದಿನಗಳಲ್ಲಿ ಇದು ಶೇಕಡ 70ಕ್ಕೇರಲಿದೆ ಎಂದು ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಸಿಐಐ ಸಮ್ಮೇಳನದ ಅಧ್ಯಕ್ಷ ಎನ್.ಜಿ.ಭರತೇಶ ರೆಡ್ಡಿ, ಮೈಸೂರು ಆರೋಗ್ಯ ಕ್ಷೇತ್ರದಲ್ಲಿ ಬೆಳವಣಿಗೆ ಸಾಧಿಸುತ್ತಿದ್ದು, ದಕ್ಷಿಣ ಭಾರತದ ಹೆಲ್ತ್ ಕೇರ್ ಹಬ್ ಆಗಲಿದೆ ಎಂದು ಹೇಳಿದರು.

ಗುಣಮಟ್ಟದ ಆರೋಗ್ಯ ಸೇವೆ: ತರುವಾಯ ಮಾತನಾಡಿದ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ.ಚಂದ್ರಭಾನ್ ಸಿಂಗ್ ಅವರು, ನಂಬರ್ ಒನ್ ಹೆಲ್ತ್ ಕೇರ್ ಹಬ್ ಆಗುವ ಸಾಮರ್ಥ್ಯ ಹೊಂದಿರುವ ಮೈಸೂರಿನಲ್ಲಿ ಜಾಗತಿಕ ಗುಣಮಟ್ಟದ ಆರೋಗ್ಯ ಸೇವೆ ದೊರೆಯುತ್ತಿದೆ. ಎಐ ಆಧಾರಿತ ರೋಬೋಟಿಕ್ ಸರ್ಜರಿ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನದ ಆರೋಗ್ಯ ಸೇವೆ ಪಡೆಯುತ್ತಿದ್ದಾರೆ ಎಂದರು.

ನಂತರ ಮಾತನಾಡಿದ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ರಿಸರ್ಚ್‌ನ ಕುಲಪತಿ ಡಾ. ಸುರೇಶ್ ಬೋಜ್‌ರಾಜ್ ಅವರು, ನಾನು ಮೈಸೂರಿಗೆ ಬಂದಾಗ ಇದ್ದ ಬೆಳವಣಿಗೆಗೂ ಈಗಿನ ಬೆಳವಣಿಗೆಗೂ ಅಜಗಜಾಂತರ ವ್ಯತ್ಯಾಸವಿದೆ. ದೇಶ–ವಿದೇಶದ ಜನರನ್ನು ಅತ್ಯಾಕರ್ಷಿಸುವಷ್ಟು ಮಟ್ಟಿಗೆ ಮೈಸೂರು ಅಭಿವೃದ್ಧಿ ಹೊಂದುತ್ತಿದೆ. ಮೈಸೂರಿನಲ್ಲಿ ಕಡಿಮೆ ಬೆಲೆಯಲ್ಲಿ ಆರೋಗ್ಯ ಸೇವೆ ದೊರೆಯುತ್ತಿದೆ ಎಂದರು.

ಇಂದು ಬೆಳಿಗ್ಗೆಯಿಂದ ಸಂಜೆವರೆಗೆ ನಡೆದ ಸಮ್ಮೇಳನದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಪಾತ್ರ ಸೇರಿದಂತೆ ಹಲವು ವಿಚಾರಗಳ ಬಗ್ಗೆ ತಜ್ಞರು ಮಾತನಾಡಿದರು.

ಸಿಐಐ ಮೈಸೂರು ವಲಯ ಅಧ್ಯಕ್ಷ ಉತ್ಸವ್ ಅಗರವಾಲ್, ಉಪಾಧ್ಯಕ್ಷ ಸವಿತಾ ಮಲ್ಲಪ್ಪ, ಮೈಸೂರು ಆಸ್ಪತ್ರೆಗಳ ಸಂಘದ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ಸೋಲೋಮನ್ ಪುಷ್ಪರಾಜ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೆಡಿ (ಕ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕಾಟಾಳನ್ (ಕ)	4 ಪ್ರದರ್ಶನಗಳು
ಲಿಡೋ	
ಆತುಡು(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಮತಾಂತರ ನಿಷೇಧ ಕಾಯ್ದೆ ರದ್ದುಪಡಿಸದಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸುತ್ತೇವೆ

ಮೈಸೂರು, ಮೇ29(ಜಿಎ)–ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಮತಾಂತರ ನಿಷೇಧ ಕಾಯ್ದೆಯನ್ನು ನೂತನ ಸಿಎಂ ಆಗಿ ಅಧಿಕಾರ ವಹಿಸಿಕೊಳ್ಳುವವರು ರದ್ದುಪಡಿಸಬೇಕು. ಇಲ್ಲದಿದ್ದಲ್ಲಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಇಂಡಿಯಾ ಬೈಬಲ್ ಲಿಟರೇಚರ್ ಅಪೊಸ್ಟೊಲೇಟ್ ಸಂಸ್ಥೆ ಮುಖ್ಯಸ್ಥ ರೆ.ಫಾ. ಬೆಂಜಮಿನ್ ವಾಸ್ ಎಚ್ಚರಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಚುನಾವಣೆ ವೇಳೆ ಪಕ್ಷವು ಈ ಕಾಯ್ದೆ ರದ್ದುಪಡಿಸುವುದಾಗಿ ನೀಡಿದ್ದ ಭರವಸೆ ಇದುವರೆಗೂ ಈಡೇರಿಸಿಲ್ಲ. ಅವರ ಭರವಸೆ ನಂಬಿ ಅಧಿಕ ಮತ ನೀಡಿ ಗೆಲ್ಲಿಸಿದ್ದೇವೆ. ಆದರೆ ಸರ್ಕಾರ ನುಡಿದಂತೆ ನಡೆಯಲಿಲ್ಲ. ಈಗಲಾದರೂ ಈ ಕಾಯ್ದೆ ರದ್ದುಪಡಿಸಬೇಕೆಂದು ಆಗ್ರಹಿಸಿದರು. ಈ ಕಾಯ್ದೆ ದುರ್ಬಳಕೆ ಮಾಡಿ ಕೊಳ್ಳುವ ಮೂಲಕ ಹಲವರ ವಿರುದ್ಧ ಬಲವಂತದ ಮತಾಂತರ ಎಂದು ಕಿರುಕುಳ ನೀಡಲಾಗುತ್ತಿದೆ. ನ್ಯಾಯಾಲಯ ಇಂತಹ ಹಲವಾರು ಎಫ್‌ಐಆರ್ ರದ್ದುಪಡಿಸಿದ ಉದಾಹರಣೆಗಳಿವೆ. ತಮ್ಮ ವಿರುದ್ಧವೂ ಅನೇಕ ಸುಳ್ಳು ಆರೋಪ ಕೇಳಿ ಬಂದಿತ್ತು. ಹೀಗಾಗಿ ಸಮಸ್ಯೆ ಸೃಷ್ಟಿಸುತ್ತಿರುವ ಈ ಕಾಯ್ದೆಯನ್ನು ಈಗಲಾದರೂ ರದ್ದು ಪಡಿಸಬೇಕೆಂದು ಆಗ್ರಹಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ

ನಾಳೆ ಮೈಸೂರು ಅರಮನೆ ಆವರಣದಲ್ಲಿ ಮಹಾ ಸಂಕಲ್ಪ ದಿವಸ್



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಯೋಗ ಫೆಡರೇಷನ್ ವತಿಯಿಂದ ಮಹಾ ಸಂಕಲ್ಪ ದಿವಸ್ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಮೇ29(ಜಿಎ)–ಮೈಸೂರು ಯೋಗ ಫೆಡರೇಷನ್ ಟ್ರಸ್ಟ್ ವತಿಯಿಂದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮೇ 31 ರಂದು ನಗರದ ಅರಮನೆ ಆವರಣದಲ್ಲಿ ಮಹಾ ಸಂಕಲ್ಪ ದಿವಸ್ ಆಯೋಜಿಸಲಾಗಿದೆ ಎಂದು ಮೈಸೂರು ಯೋಗ ಫೆಡರೇಷನ್ ಅಧ್ಯಕ್ಷ ಹಾಗೂ ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಡಿ.ಶ್ರೀಹರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಈಗ ಯೋಗ ಹಬ್ ಆಗಿ ಬೆಳೆದಿದೆ. ಈ ನಿಟ್ಟಿನಲ್ಲಿ ಜೂ.21 ರಂದು 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಇರುವುದರಿಂದ ವಿಶೇಷವಾಗಿ ಮೈಸೂರಲ್ಲಿ 120 ಕೇಂದ್ರಗಳಲ್ಲಿ ಸುಮಾರು 1.20 ಲಕ್ಷ ಮಂದಿ ಯೋಗ ಪ್ರದರ್ಶನ ನೀಡಲಿದ್ದಾರೆ ಎಂದರು.

ಜೂ.21ರಂದು ಮೈಸೂರು ಜಿಲ್ಲೆಯ ಶಾಲಾ–ಕಾಲೇಜು, ಹಾಸ್ಟೆಲ್, ಉದ್ಯಾನವನ, ಅಪಾರ್ಟ್‌ಮೆಂಟ್, ಚೌಲ್ಟ್ರಿಗಳಲ್ಲಿ ವಿವಿಧ ಸಭಾಂಗಣದಲ್ಲಿ ಸಾರ್ವಜನಿಕರು ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಈಗಾಗಲೇ ಅಪಾರ್ಟ್‌ಮೆಂಟ್ ಮತ್ತು ಚೌಲ್ಟ್ರಿ ಅಸೋಸಿಯೇಷನ್ ಸಂಘದೊಂದಿಗೆ ಮಾತನಾಡಿದ್ದು, ಅವರು ಸ್ವಯಂಪ್ರೇರಣೆಯಿಂದ ಒಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪೂರ್ವ ಸಿದ್ಧತೆಗಾಗಿ ಮೇ 31 ರಂದು ನಗರದ ಅರಮನೆ ಆವರಣದಲ್ಲಿ ಮಹಾ ಸಂಕಲ್ಪ ದಿವಸ್ ಆಯೋಜಿಸಿದ್ದು, ಇಲ್ಲಿ 1000 ಮಂದಿ ಯೋಗ ತರಬೇತುದಾರರು ಭಾಗ ವಹಿಸಲಿದ್ದಾರೆ. ಸಾರ್ವಜನಿಕರಿಗೂ ಮುಕ್ತ ಅವಕಾಶವಿದೆ. ಸಂಸದ ಯದುವೀರ್ ನೇತೃತ್ವ ವಹಿಸಲಿದ್ದಾರೆ ಎಂದರು.

ಯೋಗದ ಮೂಲಕ ಆರೋಗ್ಯಕರ, ಶಾಂತಿಯುತ, ಶಿಸ್ತುಬದ್ಧ ಸಮಾಜ ನಿರ್ಮಾಣದ ಸಂಕಲ್ಪದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರೊಡನೆ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಯೋಗದ ಪ್ರಚಾರ ಮತ್ತು ಪ್ರಸಾರ ಮಾಡಲು ಇದೇ ರೀತಿಯ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಪಿ.ಎನ್. ಗಣೇಶ್, ಶಶಿಕುಮಾರ್, ಜಿ.ನಂಜುಂಡ ಸ್ವಾಮಿ, ದೇವರಾಜ್, ಅನಂತ್, ರಂಗನಾಥ್ ಉಪಸ್ಥಿತರಿದ್ದರು.

ಮೈಸೂರು ವಿವಿ ಆವರಣದಲ್ಲಿ ವಾಕಥಾನ್

'ಇಂದು ಓದುಗ ನಾಳೆ ನಾಯಕ', 'ಗ್ರಂಥಾಲಯ ಕ್ರಾಂತಿ, ಆಗಲಿ ಬಾಳಿನ ಸಂಕ್ರಾಂತಿ', 'ಒಂದು ಪುಟ್ಟ ಹೊಸ ಚಿಂತನೆ' ಪ್ಲೇಕಾರ್ಡ್ ಪ್ರದರ್ಶನ



ಮೈಸೂರು ವಿಶ್ವ ವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಜ್ರ ಮಹೋತ್ಸವದ ಅಂಗವಾಗಿ ಮಾನಸ ಗಂಗೋತ್ರಿಯಲ್ಲಿ ಆಯೋಜಿಸಿದ್ದ ವಾಕಥಾನ್‌ನಲ್ಲಿ ಹೆಜ್ಜೆ ಹಾಕಿದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು.

ಮೈಸೂರು, ಮೇ29(ಜಿಎ)–ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಜ್ರ ಮಹೋತ್ಸವದಲ್ಲಿ 'ಇಂದು ಓದುಗ ನಾಳೆ ನಾಯಕ', 'ಗ್ರಂಥಾಲಯ ಕ್ರಾಂತಿ, ಆಗಲಿ ಬಾಳಿನ ಸಂಕ್ರಾಂತಿ', 'ಒಂದು ಪುಟ್ಟ ಹೊಸ ಚಿಂತನೆ' ಎಂಬ ವಿವಿಧ ಪ್ಲೇಕಾರ್ಡ್‌ಗಳನ್ನು ಹಿಡಿದು ವಿವಿ ಆವರಣದಲ್ಲಿ ವಾಕಥಾನ್‌ನಲ್ಲಿ ಹೆಜ್ಜೆ ಹಾಕಿ ವಿದ್ಯಾರ್ಥಿಗಳು ಎಲ್ಲರ ಗಮನ ಸೆಳೆದರು.

ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಜ್ರ ಮಹೋತ್ಸವದಲ್ಲಿ ಅಂಗವಾಗಿ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಹಾಗೂ ಮಿಲನ್ ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ ವಾಕಥಾನ್‌ಗೆ ವಿವಿ ಕುಲಪತಿ ಪ್ರೊ ಎನ್ ಕೆ ಲೋಕನಾಥ್ ಚಾಲನೆ ನೀಡಿ, ವಜ್ರಮಹೋತ್ಸವದ ಲೋಗೋ ಬಿಡುಗಡೆಗೊಳಿಸಿದರು.

ಕ್ಲಾಕ್ ಟವರ್‌ನಿಂದ ಆರಂಭವಾದ ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ಯಾರ್ಥಿಗಳು ಬಣ್ಣ ಬಣ್ಣದ ಟೀ ಶರ್ಟ್ ಧರಿಸಿ, ವಿವಿಯ ಎರಡು ಕಿಮಿ ವಾಕಥಾನ್ ನಡೆಸಿದ ಅವರು, ಗ್ರಂಥಾಲಯದ ಮಹತ್ವವನ್ನು ಸಾರಿದರು.

ಈ ಸಂದರ್ಭದಲ್ಲಿ ವಿಭಾಗದ ಮುಖ್ಯಸ್ಥ ಪ್ರೊ.ಎನ್.ಎಸ್. ಹರಿನಾರಾಯಣ, ಬಿ.ಪಿ.ಪ್ರಕಾಶ್, ಡಾ.ಜಯಕುಮಾರ್, ಡಾ.ಎಂ.ಸುನಿಲ್‌ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

'ನಾರಿ ಶಕ್ತಿ', 'ನಾಡ ಕೀರ್ತಿ' ಪ್ರಶಸ್ತಿಗಾಗಿ ಅರ್ಜಿಗಳ ಆಹ್ವಾನ

ಮೈಸೂರು, ಮೇ 29– ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಕನ್ನಡಾಂಬೆ ಸಾಮಾಜಿಕ ಸಾಂಸ್ಕೃತಿಕ ಸಂಘ ಜೂ. 28ರ ಭಾನುವಾರದಂದು ಮೈಸೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಿದ್ದು, ನಾಡಿನ ವಿವಿಧ ಕ್ಷೇತ್ರದ ಸಾಧಕರು ಈ ಪ್ರಶಸ್ತಿಗೆ ಅರ್ಜಿಯನ್ನು ಸಲ್ಲಿಸಬಹುದು. ಪ್ರಶಸ್ತಿ ಪತ್ರ, ಫಲಕವನ್ನು ಈ ಪ್ರಶಸ್ತಿ ಒಳಗೊಂಡಿರುತ್ತದೆ. ಹೆಚ್ಚಿನ ಮಾಹಿತಿಗೆ ಗುಣವಂತ ಮಂಜು, ಮೊ. 9448260417 ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಗೃಹಬಳಕೆದಾರರ ಮನೆಯ ಛಾವಣಿಯಲ್ಲಿ ಸೌರಫಲಕ ಸ್ಥಾಪಿಸಲು ಜನರಲ್ಲಿ ಜಾಗೃತಿ; ಪ್ರಚಾರ ವಾಹನಕ್ಕೆ ಚಾಲನೆ



ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಪ್ರಧಾನ ಕಚೇರಿ ಆವರಣದಲ್ಲಿ ಪ್ರಧಾನಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಮನೆಯ ಛಾವಣಿಯಲ್ಲಿ ಸೌರಫಲಕ ಸ್ಥಾಪಿಸಲು ಜನರಲ್ಲಿ ಜಾಗೃತಿ ಮೂಡಿಸುವ ಪ್ರಚಾರ ವಾಹನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

> ಪಿಎಂ ಸೂರ್ಯ ಘರ್ ಯೋಜನೆಯಲ್ಲಿ ಮನೆ ಮೇಲೆ ಸೌರ ಫಲಕ ಅಳಡಿಸಿಕೊಳ್ಳಲು ಉತ್ತೇಜನ ನೀಡಲು ಸಬ್ಸಿಡಿ ನೀಡಲಾಗುತ್ತಿದೆ. 1 ಕೆವಿ ಸಾಮರ್ಥ್ಯದವರೆಗಿನ ಸೌರಘಟಕ ಸ್ಥಾಪನೆಗೆ ಸಬ್ಸಿಡಿ 30000 ರೂ., 2 ಕೆವಿ ಸಾಮರ್ಥ್ಯದ ಸೌರಘಟಕ ಸ್ಥಾಪನೆಗೆ 60000 ರೂ., 3 ಕೆವಿ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಸೌರಘಟಕ ಸ್ಥಾಪನೆಗೆ 78000 ರೂ. ಸಬ್ಸಿಡಿ ಪಡೆಯಬಹುದಾಗಿದೆ. ಯೋಜನೆ ಮಾಹಿತಿಗಾಗಿ: 9448994706 ಅಥವಾ ಇ–ಮೇಲ್ ವಿಳಾಸ: gmproj1@cescmysore.org ಸಂಪರ್ಕಿಸಬಹುದಾಗಿದೆ.

ಮೈಸೂರು, ಮೇ 29(ಎಂಟಿವೈ)– ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಗೃಹಬಳಕೆದಾರರ ಮನೆಯ ಛಾವಣಿಯಲ್ಲಿ ಸೌರಫಲಕ ಸ್ಥಾಪಿಸಲು ಜನರಲ್ಲಿ ಜಾಗೃತಿ ಮೂಡಿಸುವ ಪ್ರಚಾರ ವಾಹನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್‌ಇಡಿ ಪರದೆಯ ಮೇಲೆ ಯೋಜನೆ ಮಹತ್ವ ಸಾರುವ ಪ್ರಚಾರ ಕಾರ್ಯಕ್ಕೆ ಚಾವಿಸನಿನಿ ತಾಂತ್ರಿಕ ನಿರ್ದೇಶಕರಾದ ಶರಣಮ್ಮ ಎಸ್. ಜಂಗಿನ ಹಾಗೂ ಚಾವಿಸನಿನಿ ಮೈಸೂರು ವೃತ್ತದ ಮುಖ್ಯ ಇಂಜಿನಿಯರ್ ಎಲ್. ಲೋಕೇಶ್ ಹಸಿರು ನಿಶಾನೆ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು.

ವಿವಿಧೆಡೆಗಳಲ್ಲಿ ಸಂಚಾರ: ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಕುರಿತು ಜಾಗೃತಿ ಮೂಡಿಸುವ ಈ ವಾಹನ ಮೂರು ದಿನ ಬೆಳಗಿನಿಂದ ರಾತ್ರಿಯವರೆಗೂ ಮೈಸೂರಿನ ವಿವಿದೆಡೆ ಸಂಚರಿಸಲಿದೆ. ಮೇ 30ರಂದು ಕುವೆಂಪು ನಗರ, ವಿವೇಕಾನಂದನಗರ, ರಾಮಕೃಷ್ಣ ಪರಮಹಂಸ ವೃತ್ತ, ದಟ್ಟಗಳ್ಳಿ ವೃತ್ತ, ಆರ್.ಆರ್ ನಗರ, ಶಾರದಾದೇವಿನಗರ, ಬೋಗಾದಿ, ವಿಜಯನಗರ, ಅರಮನೆ ಸುತ್ತಮುತ್ತ, ಅಗ್ರಹಾರ ವೃತ್ತ, ಪಾಠಶಾಲಾ ವೃತ್ತ, ಕೆ.ಆರ್ ವೃತ್ತ ಆಯುರ್ವೇದ ಆಸ್ಪತ್ರೆ ವೃತ್ತ ಮಂಡಿ ಮೊಹಲ್ಲಾ, ಬನ್ನಿಮಂಟಪ, ಎಲ್.ಐ.ಸಿ ವೃತ್ತ, ಫೌಂಟೇನ್ ವೃತ್ತ, ಸೆಂಟ್ ಫಿಲೋಮಿನಾ ಚರ್ಚ್ ಸುತ್ತಲಿನ ಪ್ರದೇಶಗಳಲ್ಲಿ ಸಂಚರಿಸಲಿದೆ.

ಮೇ 31ರಂದು ನಗರ ಬಸ್ ನಿಲ್ದಾಣ, ಮೆಟ್ರೋಪೋಲ್ ವೃತ್ತ, ಕಲಾಮಂದಿರ, ಮಹಾರಾಣಿ ಕಾಲೇಜ್ ಜಂಕ್ಷನ್, ಪಡುವಾರಳ್ಳಿ ವೃತ್ತ, ಐಶ್ವರ್ಯ ಪೆಟ್ರೋಲ್ ಬಂಕ್ ಜಂಕ್ಷನ್, ಹಿನಕಲ್ ವೃತ್ತ, ಹೂಟಗಳ್ಳಿ, ಬೆಳವಾಡಿ, ಇಲವಾಲ, ಮೈಸೂರು ಅರಮನೆ ಸುತ್ತಮುತ್ತ, ಗ್ರಾಮಾಂತರ ಬಸ್ ನಿಲ್ದಾಣ, ಹಾರ್ಡಿಂಜ್ ವೃತ್ತ, ಗೋಪಾಲಗೌಡ ಆಸ್ಪತ್ರೆ ವೃತ್ತ, ಮಿಲ್ಕ್ ಡೈರಿ ವೃತ್ತ, ಸಿದ್ದಾರ್ಥ ಬಡಾವಣೆ, ಟೆರೇಸಿಯನ್ ಕಾಲೇಜ್ ವೃತ್ತ, ದೇವೇಗೌಡ ವೃತ್ತ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಸಂಚರಿಸಲಿದೆ.

ಆದಾಯ, ಉಳಿತಾಯದ ಮೂಲ : ಪಿಎಂ ಸೂರ್ಯ ಘರ್ ಯೋಜನೆಯು ಆದಾಯ ಮತ್ತು ಉಳಿತಾಯದ ಮೂಲವಾಗಿದ್ದು, ಗ್ರಾಹಕರು ತಮ್ಮ ಮನೆಯ ಮೇಲೆ ಸೌರ ಘಟಕ ಸ್ಥಾಪಿಸಲು, ಈ ಯೋಜನೆ ಮೂಲಕ ಆಕರ್ಷಕ ಸಬ್ಸಿಡಿ ಸೌಲಭ್ಯ ಪಡೆಯ ಬಹುದಾಗಿದೆ. ಇದರಿಂದ ವಿದ್ಯುತ್ ಬಿಲ್ ಉಳಿತಾಯವಾಗಲಿದ್ದು, ಇದು ಪರಿಸರ ಸ್ನೇಹಿ ಯೋಜನೆಯು ಆಗಿದೆ. ಸೌರಶಕ್ತಿಯಿಂದ ಉತ್ಪಾದನೆಯಾಗುವ ಹೆಚ್ಚುವರಿ ವಿದ್ಯುತ್ ಅನ್ನು ಸೆಸ್ಕ್‌ಗೆ ಮಾರಾಟ ಮಾಡುವ ಮೂಲಕ ಆದಾಯ ಗಳಿಸಬಹುದಾಗಿದೆ.

ಈ ಸಂದರ್ಭದಲ್ಲಿ ಚಾವಿಸನಿನಿ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಲಿಂಗರಾಜಮ್ಮ, ಪ್ರಧಾನ ವ್ಯವಸ್ಥಾಪಕರಾದ ಆರ್. ರಾಮಸ್ವಾಮಿ, ಹೆಚ್.ಆರ್. ದಿನೇಶ್, ಬಿ.ಆರ್. ರೂಪ ಸೇರಿದಂತೆ ಪ್ರಮುಖ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಮೈಸೂರು ವೃತ್ತದ ಸಿಎಫ್ ಆಗಿ ಪ್ರಭಾಕರನ್, ಬಂಡೀಪುರ ಹುಲಿ ಸಂರಕ್ಷಕ ನಿರ್ದೇಶಕರಾಗಿ ನಂದೀಶ್ ಅಧಿಕಾರ ಸ್ವೀಕಾರ





ಮೈಸೂರಿನ ವರ್ಕಿಂಗ್ ಪ್ಲಾನ್ ವಿಭಾಗದ ನೂತನ ಸಿಎಫ್ ಆಗಿ ಅಧಿಕಾರ ಸ್ವೀಕರಿಸಿದ ಎಸ್.ಪ್ರಭಾಕರನ್ ಅವರಿಗೆ ಡಿಸಿಎಫ್‌ಗಳಾದ ಕೆ.ಪರಮೇಶ್, ಲಿಂಗರಾಜು ಹಾಗೂ ಆರ್‌ಎಫ್‌ಓಗಳು ಅಭಿನಂದಿಸಿದರು. ಮತ್ತೊಂದು ಚಿತ್ರದಲ್ಲಿ ಬಂಡೀಪುರದ ನೂತನ ನಿರ್ದೇಶಕರಾಗಿ ಡಿಸಿಎಫ್ ಎಲ್.ನಂದೀಶ್ ಅವರು ಸಿಎಫ್ ಎಸ್.ಪ್ರಭಾಕರನ್ ಅವರಿಂದ ಅಧಿಕಾರ ಸ್ವೀಕರಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಮೇ 29(ಎಂಟಿವೈ)– ಅರಣ್ಯ ಇಲಾಖೆಯ ವರ್ಕಿಂಗ್ ಪ್ಲಾನ್ ವಿಭಾಗದ ಮೈಸೂರು ವೃತ್ತ ಸಿಎಫ್ ಆಗಿ ಎಸ್. ಪ್ರಭಾಕರನ್ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ಡಿಸಿಎಫ್ ಎಲ್.ನಂದೀಶ್ ಅಧಿಕಾರ ಸ್ವೀಕರಿಸಿದ್ದಾರೆ.

ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಚಾಮರಾಜನಗರ ವೃತ್ತದ ಸಿಸಿಎಫ್ ಡಾ.ಮಾಲತಿ ಪ್ರಿಯಾರಿಂದ ಮೈಸೂರು ವೃತ್ತದ ವರ್ಕಿಂಗ್ ಪ್ಲಾನ್ ವಿಭಾಗದ ಸಿಎಫ್ ಆಗಿ ಎಸ್. ಪ್ರಭಾಕರನ್ ಅಧಿಕಾರ ಸ್ವೀಕರಿಸಿದರು. 2011ರ ಬ್ಯಾಚ್ ಐಎಫ್‌ಎಸ್ ಅಧಿಕಾರಿಯಾಗಿರುವ ಪ್ರಭಾಕರನ್ ಮಡಿಕೇರಿ ಡಿಸಿಎಫ್, ಭದ್ರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಎರಡು ವರ್ಷದಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ಸಿಎಫ್ ಆಗಿ ಬಡ್ತಿ ಪಡೆದಿದ್ದು, ಇದೀಗ ಮೈಸೂರು ವೃತ್ತದ ವರ್ಕಿಂಗ್ ಪ್ಲಾನ್ ವಿಭಾಗದ ಸಿಎಫ್ ಆಗಿ ನಿಯೋಜನೆಗೊಂಡಿದ್ದಾರೆ.


ಬಂಡೀಪುರಕ್ಕೆ ನೂತನ ಡಿಸಿಎಫ್: ಬೆಂಗಳೂರಿನ ಕಾಡುಗೋಡಿಯಲ್ಲಿರುವ ಅರಣ್ಯ ಇಲಾಖೆ ತಾಂತ್ರಿಕ ಮತ್ತು ಆಡಳಿತ ತರಬೇತಿ ಕೇಂದ್ರದ ಡಿಸಿಎಫ್ ಎಲ್.ನಂದೀಶ್ ಬಂಡೀಪುರ ನೂತನ ಡಿಸಿಎಫ್ ಆಗಿ ನಿಯೋಜನೆಗೊಂಡಿದ್ದು, ಬಂಡೀಪುರದ ಕಾಡಂಚಿನ ಮೇಲುಕಾಮನಹಳ್ಳಿಯಲ್ಲಿರುವ ನೂತನ ಸಫಾರಿ ಕೇಂದ್ರದ ಬಳಿಯಿರುವ ಕಚೇರಿಯಲ್ಲಿ ಸಿಎಫ್ ಎಸ್.ಪ್ರಭಾಕರನ್ ಅವರಿಂದ ಅಧಿಕಾರ ಸ್ವೀಕರಿಸಿದರು. 2021ರ ಬ್ಯಾಚ್ ಐಎಫ್‌ಎಸ್ ಅಧಿಕಾರಿಯಾಗಿರುವ ಎಲ್.ನಂದೀಶ್ ಈ ಹಿಂದೆ ಮೈಸೂರಿನ ಪ್ರಾದೇಶಿಕ ವಿಭಾಗದ ಡಿಸಿಎಫ್ ಆಗಿ ಸೇವೆ ಸಲ್ಲಿಸಿದ್ದರು.

ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಸವಿನೆನಪು



ಶ್ರೀಮಾನ್ **ಶಿವಲಿಂಗೇಗೌಡರು** ಯರಗನಹಳ್ಳಿ

ಸದಾ ನಿಮ್ಮ ನೆನಪಿನಲ್ಲಿರುವ
ಧರ್ಮಪತ್ನಿ ಶ್ರೀಮತಿ ಲೀಲಾವತಿ ಮತ್ತು ಮಕ್ಕಳು, ಕುಟುಂಬವರ್ಗ ಹಾಗೂ ಬಂಧುಮಿತ್ರರು, ಗ್ರಾಮಸ್ಥರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಲತಾ ರಾಮಸ್ವಾಮಿ ರವರು

ನಿಧನ: 29-05-2026
ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ: 30-05-2026 ಶನಿವಾರ ಬೆಳಗ್ಗೆ 10:30 ಕ್ಕೆ ಚಾಮುಂಡಿಬೆಟ್ಟದ ಪಾದ, ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು

ದುಃಖತಪ್ತರು: ಎಸ್ ಮಂಜುನಾಥ್, ಕೆ ರಾಮಸ್ವಾಮಿ ಮತ್ತು ಕುಟುಂಬವರ್ಗ, ಅಶ್ವಿನಿ ಡೆವೆಲಪರ್ಸ್